ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ

2025-26

ವಿಷಯ : ಪರಿಸರ ಅಧ್ಯಯನ

ತರಗತಿ : 4

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,

ಬನಶಂಕರಿ 3ನೇ ಹಂತ, ಬೆಂಗಳೂರು-560085

ಮತ್ತು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬಳ್ಳಾರಿ.

ಪರಿಕಲ್ಪನೆ ಮತ್ತು ಮಾರ್ಗದರ್ಶನ	
ಶ್ರೀಮತಿ ರಶ್ಮಿ ಮಹೇಶ್ V I A S, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.	
ಡಾ. ತ್ರಿಲೋಕ್ ಚಂದ್ರ K V I A S, ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.	**ಶ್ರೀ ಗೋಪಾಲಕೃಷ್ಣ H N,** ನಿರ್ದೇಶಕರು, DSERT, ಬೆಂಗಳೂರು.
ಡಯಟ್ ಸಹಕಾರ	
ಶ್ರೀ ಓ. ಆರ್. ಪ್ರಕಾಶ **ಪ್ರಾಂಶುಪಾಲರು,** **ಡಯಟ್ ಬಳ್ಳಾರಿ.**	**ಶ್ರೀ ಕೆ.ರೇವಣಸಿದ್ದಪ್ಪ** **ಮೆಂಟರ್** **ಉಪನ್ಯಾಸಕರು,** **ಡಯಟ್ ಬಳ್ಳಾರಿ.**
ಸಂಯೋಜನೆ	
ಶ್ರೀಮತಿ ರಾಧಾ P, ಹಿರಿಯ ಸಹಾಯಕ ನಿರ್ದೇಶಕರು, DSERT, ಬೆಂಗಳೂರು.	
ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ರಚನಾ ಸಂಪನ್ಮೂಲ ತಂಡ	
1.ಸರಿತಾ . ಕೆ ಸ.ಶಿ GHPS ಹೊನ್ನಳ್ಳಿ ತಾಂಡಾ. ಬಳ್ಳಾರಿ ಪೂರ್ವ. 2. ಶಾಂತ. ಗಡ್ಡದ. ಸ. ಶಿ GHPS ಅರಳಿಹಳ್ಳಿ ಕುರುಗೋಡು ತಾಲೂಕು. ಬಳ್ಳಾರಿ ಜಿಲ್ಲೆ. 3. ಪ್ರಕಾಶ್. ತೇಜಪ್ಪನವರ್ ಸ . ಶಿ	5. ಶಿವಕುಮಾರ ಸ. ಶಿ. GLPS ಬಸವಣ್ಣಕ್ಯಾಂಪ್, ಕಪ್ಪಗಲ್, ಬಳ್ಳಾರಿ ಪೂರ್ವ. 6. ದೇವೇಂದ್ರಪ್ಪ.ಎ ಸ. ಶಿ. GHPS ಯಾಳ್ಪಿ, ಬಳ್ಳಾರಿ ಪೂರ್ವ. ತಾಂತ್ರಿಕ ಸಹಾಯಕರು. 7. ಹೊನ್ನೂರಸ್ವಾಮಿ ಸ. ಶಿ. GHPS ತೊಲಮಾಮಡಿ,

GLPS ಅಶೋಕ್ ನಗರ ಕ್ಯಾಂಪ್ . ಬಳ್ಳಾರಿ ಪೂರ್ವ. 4. ಮಲ್ಲಿಕಾರ್ಜುನಪ್ಪ ಪಿ. ಸ. ಶಿ. GLPS ವಿಜಯಪುರ ಕ್ಯಾಂಪ್. ಬಳ್ಳಾರಿ ಪೂರ್ವ. .	ಬಳ್ಳಾರಿ ಪೂರ್ವ. ತಾಂತ್ರಿಕ ಸಹಾಯಕರು.
ಮಾರ್ಗದರ್ಶಕರು ಹಾಗೂ ಪರಿಶೀಲಕರು	
ಎಸ್.ಆರ್.ಸುರೇಶಬಾಬು ಹಿರಿಯ ಉಪನ್ಯಾಸಕರು, ಡಯಟ್ ಬಳ್ಳಾರಿ**.**	**ಎಲ್.ಎನ್.ಉಮಾದೇವಿ ಸ.ಶಿ** GHPS ತಿಂಡ್ಲುಆನೇಕಲ್ ತಾಲೂಕು, ಬೆಂಗಳೂರು ದಕ್ಷಿಣ.

4ನೇ ತರಗತಿಯ ಪರಿಸರ ಅಧ್ಯಯನ

ಪಾಠ 1 – ಪ್ರಾಣಿ ಪ್ರಪಂಚ

ಕಲಿಕಾಫಲಗಳು : -

#ಈ ಪಾಠವನ್ನು ಅಧ್ಯಯನ ಮಾಡಿದ ನಂತರ ವಿದ್ಯಾರ್ಥಿಗಳು ಕೆಳಕಂಡವುಗಳನ್ನು ಕಲಿಯುತ್ತಾರೆ.

- ಮಾನವರ ಮತ್ತು ಪ್ರಾಣಿಗಳ ನಡುವಿನ ಸಾಮ್ಯತೆ ಮತ್ತು ವಿಭಿನ್ನತೆ ಗುರುತಿಸುವುದು
- ಪ್ರಾಣಿಗಳ ವರ್ಗೀಕರಣವನ್ನು ಅರ್ಥಮಾಡಿಕೊಳ್ಳುವುದು
- ಮಾನವರು ಕೂಡ ಪ್ರಾಣಿಗಳಲ್ಲಿ ಒಂದೆಂಬುದನ್ನು ಅರಿಯುತ್ತಾರೆ.
- ಪ್ರಾಣಿಗಳ ಗಾತ್ರ, ಬಣ್ಣ, ಆಹಾರ ಮತ್ತು ವಾಸಸ್ಥಾನಗಳ ಆಧಾರದ ಮೇಲೆ ಅವುಗಳನ್ನು ಗುರುತಿಸಿ ವರ್ಗೀಕರಿಸಬಹುದು.
- ಪ್ರಾಣಿಗಳ ವಾಸಸ್ಥಾನಗಳನ್ನು □□□□□ ಪ್ರಾಣಿಗಳ ಆಹಾರ ಚಟುವಟಿಕೆಗಳನ್ನು ತಿಳಿದುಕೊಳ್ಳುವುದು
- ಪರಿಸರವೀಕ್ಷಣೆ ಮತ್ತು ದಾಖಲೆ ಮಾಡಬಲ್ಲರು
- ಸುತ್ತಲಿನ ಪಕ್ಷಿಗಳು ಮತ್ತು ಕೀಟಗಳನ್ನು ವೀಕ್ಷಿಸಿ, ಅವುಗಳ ಗಾತ್ರ ಮತ್ತು ಆಕಾರವನ್ನು ದಾಖಲಿಸಬಹುದು.
- ಪ್ರಾಣಿಗಳ ಉಪಯೋಗಗಳನ್ನು ತಿಳಿದುಕೊಳ್ಳುವುದು
- ಪರಸ್ಪರ ಅವಲಂಬನೆ ಅರ್ಥಮಾಡಿಕೊಳ್ಳುವುದು
- ಮಾನವರ ಮತ್ತು ಪ್ರಾಣಿಗಳ ನಡುವಿನ ಪರಸ್ಪರ ಅವಲಂಬಿತ ಸಂಬಂಧವನ್ನು ಅರ್ಥಮಾಡಿಕೊಳ್ಳಬಹುದು.
- ಪಶುಪಾಲನೆಯ ಜವಾಬ್ದಾರಿಯನ್ನು ಅರಿತುಕೊಳ್ಳುವುದು
- ಹತ್ತಿ ಮತ್ತು ಎಲೆಯ ಮುಖವಾಡ ತಯಾರಿಕೆ ಮುಂತಾದವುಗಳ ಮೂಲಕ ಕಲಿಕೆಯನ್ನು ಆನಂದದಾಯಕವಾಗಿ ಮಾಡಬಹುದು.
- ಸಾಮಾನ್ಯ ಜ್ಞಾನ ಮತ್ತು ಕುತೂಹಲಕಾರಿ ಮಾಹಿತಿ ಸಂಗ್ರಹಿಸುವುದು ಮತ್ತು ತಿಳಿಯುವುದು

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಸುಲಭ)

1. ಪ್ರಾಣಿ ಪ್ರಪಂಚದಲ್ಲಿ ಅತ್ಯಂತ ಬುದ್ಧಿವಂತ ಪ್ರಾಣಿ ?

ಎ) ಆನೆ ಬಿ) ತೋಳ ಸಿ) ಮನುಷ್ಯ ಡಿ) ಜಿಂಕೆ

2. ಮರುಭೂಮಿಯ ಹಡಗು

ಎ) ಕುದುರೆ ಬಿ) ಒಂಟೆ ಸಿ) ಜಿರಾಫೆ ಡಿ) ಕತ್ತೆ

3. ನಮ್ಮ ರಾಷ್ಟ್ರೀಯ ಪಕ್ಷಿ

ಎ) ನವಿಲು ಬಿ) ಪಾರಿವಾಳ ಸಿ) ಗಿಳಿ ಡಿ) ಕೊಕ್ಕರೆ

4. ನೀರಿನಲ್ಲಿ ವಾಸಿಸುವ ಅತ್ಯಂತ ದೊಡ್ಡ ಜೀವಿ

ಎ) ಮೀನು ಬಿ) ನೀಲಿ ತಿಮಿಂಗಲ ಸಿ) ಶಾರ್ಕ್ ಡಿ) ಕಪ್ಪೆ

5. ಮಾಂಸಹಾರಿ ಪ್ರಾಣಿಗೆ ಇದು ಉದಾರಹಣೆಯಾಗಿದೆ.

ಎ) ಎಮ್ಮೆ ಬಿ) ಹಸು ಸಿ) ಸಿಂಹ ಡಿ) ಜಿಂಕೆ

6. ನಾವು ದಿನನಿತ್ಯ ಸೇವಿಸುವ ಹಾಲು ಯಾವ ಪ್ರಾಣಿಯಿಂದ ಸಿಗುತ್ತದೆ.

ಎ) ನಾಯಿ ಬಿ) ಹಸು ಸಿ) ಕೋಣ ಡಿ) ಎತ್ತು

7. ಮೀನಿನ ಉಸಿರಾಟದ ಅಂಗ

ಎ) ಕಿವಿರು ಬಿ) ಕಣ್ಣು ಸಿ) ಹೊಟ್ಟೆ ಡಿ) ರೆಕ್ಕೆ

8. ಮೊಟ್ಟೆ ಯಾವ ಪ್ರಾಣಿಯಿಂದ ದೊರೆಯುತ್ತದೆ.

ಎ) ಕುರಿ ಬಿ) ಎತ್ತು ಸಿ) ಕೋಳಿ ಡಿ) ನಾಯಿ

9. ನಮ್ಮ ಭಾರತ ದೇಶದ ರಾಷ್ಟ್ರೀಯ ಪ್ರಾಣಿ

ಎ) ಹಸು ಬಿ) ಹುಲಿ ಸಿ) ಸಿಂಹ ಡಿ) ಕರಡಿ

10. ರೈತನಿಗೆ ವ್ಯವಸಾಯದಲ್ಲಿ ಸಹಾಯವಾಗುವ ಪ್ರಾಣಿ

ಎ) ಎತ್ತು ಬಿ) ಕುದುರೆ ಸಿ) ಕತ್ತೆ ಡಿ) ನಾಯಿ

ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ (ಸುಲಭ)

11. ಮೀನುಗಳು ___________ ನಲ್ಲಿ ವಾಸಿಸುತ್ತವೆ,

12. _________________ ಮರದ ಮೇಲೆ ವಾಸಿಸುತ್ತವೆ.

13. ಸಸ್ಯಗಳನ್ನು, ಮಾಂಸವನ್ನು, ತಿನ್ನುವ ಪ್ರಾಣಿಗಳಿಗೆ ___________ ಎನ್ನುತ್ತಾರೆ.

14. ನಾವು ಹಸುಗಳಿಂದ __________ ಮತ್ತು ಕುರಿಗಳಿಂದ _________ಪಡೆಯುತ್ತೇವೆ.

15. _____________ ಭಾರತ ದೇಶದ ರಾಷ್ಟ್ರೀಯ ಪ್ರಾಣಿ.

16. _____________ ಪ್ರಾಣಿ ಸಾಮ್ರಾಜ್ಯದ ಅತ್ಯಂತ ದೊಡ್ಡ ಪ್ರಾಣಿ.

17. _____________ ಇದು ಭಾರತ ಸರ್ಕಾರದಿಂದ ಹುಲಿಗಳನ್ನು ರಕ್ಷಿಸಲು ಪ್ರಾರಂಭಿಸಿದ ಯೋಜನೆ.

18. _____________ ಪ್ರಾಣಿ ಹುಲ್ಲು ಮತ್ತು ಎಲೆಗಳನ್ನು ತಿನ್ನುತ್ತದೆ.

19. ________ ಕೀಟಗಳು ತಮಗೆ ಅಪಾಯವಾಗುವ ಸಮಯದಲ್ಲಿ ತಮ್ಮ ಬಣ್ಣವನ್ನು ಬದಲಿಸುತ್ತವೆ.

20. ______________ ಪ್ರತಿ ಗಂಟೆಗೆ 100 ಕಿ.ಮೀ ವೇಗದಲ್ಲಿ ಓಡುತ್ತದೆ.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

21. ಪಕ್ಷಿಗಳನ್ನು ಪ್ರಾಣಿಗಳೆಂದು ಪರಿಗಣಿಸಲಾಗದು. — (__)

22. ಹಸು ಮತ್ತು ಎಮ್ಮೆ ನಮಗೆ ಹಾಲು ನೀಡುತ್ತವೆ. — (__)

23. ಮೊಲವು ಹಸುವಿಗಿಂತ ದೊಡ್ಡದು. — (__)

24. ಎತ್ತುಗಳನ್ನು ಹೊಲ ಹದಗೊಳಿಸಲು ಬಳಸಲಾಗುತ್ತದೆ. — (__)

25. ಜೇನುನೊಣಗಳು ಮೊಟ್ಟೆಗಳನ್ನು ನೀಡುತ್ತವೆ. — (__)

26. ರಣಹದ್ದುಗಳು ಸತ್ತ ಪ್ರಾಣಿಗಳನ್ನು ತಿಂದು ಪರಿಸರವನ್ನು ಸ್ವಚ್ಛವಾಗಿಡುತ್ತವೆ. — (__)

27. ಭಾರತದಲ್ಲಿ ಹುಲಿಗಳ ಸಂಖ್ಯೆ ವೇಗವಾಗಿ ಹೆಚ್ಚುತ್ತಿದೆ. — (__)

28. ನಾವು ಕುರಿಯಿಂದ ಉಣ್ಣೆ ಪಡೆಯುತ್ತೇವೆ. — (__)

29. ಹೊಂದಿಸಿ ಬರೆಯಿರಿ (ಸುಲಭ)

ಪ್ರಾಣಿ	**ಬಳಕೆ**
ಅ) ಹಸು	ಅ) ಉಣ್ಣೆ
ಆ) ಕುರಿ	ಆ) ಹುಲ್ಲು
ಇ) ಎತ್ತು	ಇ) ಜೇನು ಉತ್ಪಾದನೆ ಉಣ್ಣೆ
ಈ) ಜೇನುನೊಣ	ಈ) ಮೊಟ್ಟೆ ಇಡುವುದು
ಉ) ತೊಕ್ಕೆ	ಉ) ಹೊಲವನ್ನು ಹದಗೊಳಿಸುವದು
ಊ) ಮೀನು	ಊ) ಜಟ್ಕಾಗಳಲ್ಲಿ ಬಳಸುವರು
ಋ) ಕುದುರೆ	ಋ) ನೀರನ್ನು ಸ್ವಚ್ಛವಾಗಿಡುವ ಕೀಟಗಳನ್ನು ತಿನ್ನುವುದು
ಎ) ಚಿಟ್ಟೆ	ಎ) ಸತ್ತ ಪ್ರಾಣಿಗಳನ್ನು ತಿಂದು ಪರಿಸರವನ್ನು ಸ್ವಚ್ಛವಾಗಿಡುವುದು
ಏ) ಗಿಡುಗ	ಏ) ಚಿಕ್ಕದು, ಬಣ್ಣ ಬಣ್ಣದ ಕೀಟ
ಐ) ಕೋಳಿ	ಐ) ಮರ ಹತ್ತಿ ಹಣ್ಣು ತಿನ್ನುವುದು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

30. ಭಾರತದ ರಾಷ್ಟ್ರೀಯ ಪ್ರಾಣಿ ಯಾವುದು?

31. 100 ಕಿಮೀ ವೇಗದಲ್ಲಿ ಓಡಬಲ್ಲ ಪ್ರಾಣಿ ಯಾವುದು?

32. ಶತ್ರುಗಳಿಂದ ತಪ್ಪಿಸಿಕೊಳ್ಳಲು ಹವನ ಹಾವು ಏನು ಮಾಡುತ್ತದೆ?

33. ಪ್ರಾಣಿ ಜಗತ್ತಿನಲ್ಲಿ ಅತಿದೊಡ್ಡ ಪ್ರಾಣಿ ಯಾವುದು?

34. ನೀರಿನಲ್ಲಿ ವಾಸಿಸುವ ಎರಡು ಪ್ರಾಣಿಗಳನ್ನು ಹೆಸರಿಸಿ?

35. ಸಸ್ಯಗಳನ್ನೂ ಮತ್ತು ಮಾಂಸವನ್ನೂ ತಿನ್ನುವ ಪ್ರಾಣಿಗಳಿಗೆ ಏನೆಂದು ಕರೆಯುವರು ?

36. ಯಾವ ಹುಳು ನಮಗೆ ಜೇನು ನೀಡುತ್ತದೆ?

37. ಹಸು ಏನನ್ನು ತಿನ್ನುತ್ತದೆ?

38. ಬಹುತೇಕ ಹಕ್ಕಿಗಳು ಎಲ್ಲಿ ವಾಸಿಸುತ್ತವೆ ?

39. ಸಸ್ಯಗಳನ್ನು ಮಾತ್ರ ತಿನ್ನುವ ಪ್ರಾಣಿಗಳಿಗೆ ಒಂದು ಉದಾಹರಣೆಯನ್ನು ನೀಡಿ?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

40. ಮಾನವರು ಮತ್ತು ಪ್ರಾಣಿಗಳ ಮಧ್ಯೆ ಎರಡು ವ್ಯತ್ಯಾಸಗಳನ್ನು ತಿಳಿಸಿರಿ ? (ಕಠಿಣ)
41. ಪ್ರಾಣಿಗಳು ಮಾನವರಿಗೆ ಹೇಗೆ ಸಹಾಯ ಮಾಡುತ್ತವೆ? ಯಾವುದಾದರು ಎರಡು ಉದಾಹರಣೆಗಳನ್ನು ಕೊಡಿ? (ಸುಲಭ)
42. ಸಸ್ಯಾಹಾರಿಗಳು ಎಂದರೇನು? ಒಂದು ಉದಾಹರಣೆ ನೀಡಿ?
    ಮಾಂಸಾಹಾರಿಗಳು ಎಂದರೇನು? ಒಂದು ಪ್ರಾಣಿಯ ಹೆಸರನ್ನು ಬರೆಯಿರಿ? (ಸಾಧರಣ)
43. ಕೇವಲ ಸಸಿಗಳನ್ನು ತಿನ್ನುವ ಪ್ರಾಣಿಗಳಿಗೆ ಏನೆನ್ನುವರು ? (ಸುಲಭ)
44. ಹುಲಿ ಯೋಜನೆಯ ಮಹತ್ವವೇನು? (ಕಠಿಣ)
45. ಊಸರವಳ್ಳಿ ತಾನು ಸುರಕ್ಷಿತವಾಗಿರಲು ಏನು ಮಾಡುತ್ತದೆ ಎಂಬುದನ್ನು ವಿವರಿಸಿ?
46. ಮಿಶ್ರಾಹಾರಿಗಳು ಎಂದರೇನು? ಎರಡು ಉದಾಹರಣೆಗಳನ್ನು ನೀಡಿ? (ಸುಲಭ)
47. ಮಾನವರು ಮತ್ತು ಪ್ರಾಣಿಗಳ ಪರಸ್ಪರ ಅವಲಂಬನೆ ಎಂದರೆ ಏನು ಎಂಬುದನ್ನು ವಿವರಿಸಿ? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

48. ಪ್ರಾಣಿಗಳು ಮಾನವರಿಗೆ ಯಾವ ರೀತಿಯಲ್ಲಿ ಉಪಯುಕ್ತವಾಗುತ್ತವೆ ? (ಕಠಿಣ)

49. ಹಸು ಮತ್ತು ಮೊಲದ ವಾಸಸ್ಥಳ, ಆಹಾರ, ಮತ್ತು ಗಾತ್ರದಲ್ಲಿ ಹೋಲಿಕೆ ಮಾಡಿ ? (ಸುಲಭ)

50. ಸಸ್ಯಹಾರಿಗಳು ಎಂದರೇನು? ಎರಡು ಉದಾಹರಣೆಗಳೊಂದಿಗೆ ವಿವರಿಸಿ ? (ಸುಲಭ)

51 ಕೋತಿ, ಹಕ್ಕಿಗಳು, ಕೀಟಗಳು ಪ್ರಕೃತಿಯ ಸಮತೋಲನಕ್ಕೆ ಹೇಗೆ ಸಹಾಯ ಮಾಡುತ್ತವೆ? (ಕಠಿಣ)

52. ಕಾಡು ಪ್ರಾಣಿಗಳ ಲಕ್ಷಣಗಳು ಯಾವುವು? ಉದಾಹರಣೆ ನೀಡಿರಿ ? (ಕಠಿಣ)

53. ಪರಿಸರದಲ್ಲಿ ಜೇನುನೊಣಗಳ ಪಾತ್ರವೇನು? (ಕಠಿಣ)

54. ಸಸ್ಯಾಹಾರಿಗಳು ಮತ್ತು ಮಾಂಸಾಹಾರಿಗಳ ಪಟ್ಟಿ ರಚಿಸಿ ? (ಸುಲಭ)

55. ಪ್ರಾಣಿಗಳು ಬಣ್ಣ ಬದಲಿಸುವುದು ಯಾಕೆ? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕುಅಂಕದಪ್ರಶ್ನೆಗಳು) (ಕಠಿಣ)

56. ಆಹಾರದ ಆಧಾರದ ಮೇಲೆ ಪ್ರಾಣಿಗಳ ವಿಭಿನ್ನ ಪ್ರಕಾರಗಳನ್ನು ವಿವರಿಸಿ ? (ಕಠಿಣ)


57. ಮಾನವನ ಜೀವನದಲ್ಲಿ ಪ್ರಾಣಿಗಳ ಐದು ಉಪಯೋಗಗಳು ಬರೆಯಿರಿ ? (ಕಠಿಣ)

58. ಪ್ರಾಣಿಗಳ ಸಂರಕ್ಷಣೆ ಅವಶ್ಯಕ ಏಕೆ? (ಕಠಿಣ)

59. ಪ್ರಾಣಿಗಳ ವಾಸಸ್ಥಳ ಮತ್ತು ಆಹಾರವನ್ನು ಪಟ್ಟಿ ಮಾಡಿ ? (ಕಠಿಣ)

60. ಸಸ್ಯಾಹಾರಿಗಳು, ಮಾಂಸಾಹಾರಿ, ಮಿಶ್ರಾಹಾರಿ ಪ್ರಾಣಿಗಳಲ್ಲಿ ತಾರತಮ್ಯ ಮತ್ತು ಅವುಗಳ ಮುಖ್ಯ ಲಕ್ಷಣಗಳು ಬರೆಯಿರಿ ? (ಕಠಿಣ)

61. ಈ ಕೆಳಗೆ ನೀಡಿರುವ ಮೀನಿನ ಚಿತ್ರಕ್ಕೆ ಬಣ್ಣ ತುಂಬಿ , ಭಾಗಗಳನ್ನು ಬರೆಯಿರಿ. (ಕಠಿಣ)



ಪಾಠ 2 – ಸವಿಜೇನು

ಕಲಿಕಾ ಫಲಗಳು :-

- ಈ ಪಾಠವನ್ನು ಅಧ್ಯಯನ ಮಾಡಿದ ನಂತರ ವಿದ್ಯಾರ್ಥಿಗಳು ಕೆಳಕಂಡ ಸಂಗತಿಗಳನ್ನು ಕಲಿಯುತ್ತಾರೆ:
- ಪ್ರಾಣಿಗಳ ನಡವಳಿಕೆಯನ್ನು ಪರಿಶೀಲಿಸಲು ಶಕ್ತರಾಗುತ್ತಾರೆ.
- ಜೇನುಹುಳಗಳು, ಕೋಳಿಗಳು, ಹಲ್ಲಿಗಳಂತಹ ಪ್ರಾಣಿಗಳ ನಡವಳಿಕೆಯನ್ನು ಗಮನಿಸುತ್ತಾರೆ.
- ಜೇನುಹುಳಗಳ ಜೀವನ ಶೈಲಿ ಮತ್ತು ಅವರ ಕುಟುಂಬ ವ್ಯವಸ್ಥೆಯನ್ನು ತಿಳಿಯುತ್ತಾರೆ..
- ಜೇನುಹುಳ ಜೇನುಸಂಗ್ರಹಿಸುವ ವಿಧಾನವನ್ನು ತಿಳಿಯುತ್ತಾರೆ.
- ಜೇನುಗೂಡಿನ ನಿರ್ಮಾಣದ ವಿಧಾನ ಮತ್ತು ವಾಸಸ್ಥಾನಗಳನ್ನು ಗುರುತಿಸುತ್ತಾರೆ.
- ಜೇನು ಮತ್ತು ಇತರ ಉಪ ಉತ್ಪನ್ನಗಳ ಉಪಯೋಗವನ್ನು ಮತ್ತು ಮಹತ್ವವನ್ನು ತಿಳಿಯುತ್ತಾರೆ..
- ಶುದ್ಧ ಮತ್ತು ಅಶುದ್ಧ ಜೇನುತುಪ್ಪ ಗುರುತಿಸುವ ವಿಧಾನವನ್ನು ತಿಳಿಯುತ್ತಾರೆ.
- ಜೇನುಹುಳಗಳ ಮಹತ್ವ ಮತ್ತು ಅದರ ಆರೋಗ್ಯಪೂರ್ಣಗುಣಗಳನ್ನು ಅರಿಯುತ್ತಾರೆ..
- ಇರುವೆ, ನಾಯಿ, ಕೋಳಿ, ಬೆಕ್ಕುಪ್ರಾಣಿಗಳು ಸಮೂಹದಲ್ಲಿ ಹೇಗೆ ಬಾಳುತ್ತವೆ ಎಂಬುದನ್ನು ಕಲಿಯುತ್ತಾರೆ.
- ಜೀವರಾಶಿಯ ಅದ್ಭುತ ನಿರ್ಮಾಣಗಳ ಬಗ್ಗೆ ಅರಿವು ಮೂಡುತ್ತದೆ.
- ಪರಿಸರ ಜ್ಞಾನ ಮತ್ತು ಜೀವನ ವಿಜ್ಞಾನವನ್ನು ಅನುಭವಾತ್ಮಕವಾಗಿ ಕಲಿಯುತ್ತಾರೆ.
- ಕೃಷಿ ಪ್ರದೇಶಗಳಲ್ಲಿ ಬಾಕ್ಸ್‌ಗಳಲ್ಲಿ ಜೇನುಸಂಗ್ರಹ ಮಾಡುವ ವಿಧಾನ, ಮತ್ತು ನಾಗರಹೊಳೆ ಅರಣ್ಯದಲ್ಲಿ ಕಂಡ ಅನುಭವಗಳನ್ನು ಹಂಚಿಕೊಳ್ಳುತ್ತಾರೆ.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಸುಲಭ)

1. ಜೇನುನೊಣಗಳು ತಮ್ಮ ಮನೆಯನ್ನು ಎಲ್ಲಿ ನಿರ್ಮಿಸುತ್ತವೆ ?

ಎ) ಮರದ ಕೊಂಬೆ ಬಿ) ನೆಲದ ಮೇಲೆ ಸಿ) ಗುಹೆಯಲ್ಲಿ ಡಿ) ನೀರಿನಲ್ಲಿ

2. ಜೇನುನೊಣಗಳ ಮನೆಯ ಆಕಾರ ಈ ರೀತಿ ಇರುತ್ತದೆ.

ಎ) ವೃತ್ತ ಬಿ) ತ್ರಿಭುಜ ಸಿ) ಆಯತ ಡಿ) ಷಟ್ ಕೋನ

3. ಜೇನುತುಪ್ಪ ಯಾವುದರಿಂದ ತಯಾರಾಗುತ್ತದೆ?

ಎ) ಹಕ್ಕಿ ಬಿ) ಚಿಟ್ಟೆ ಸಿ) ಜೇನುನೊಣ ಡಿ) ಹುಳ

4. ಜೇನುನೊಣಗಳ ಸಮುದಾಯವನ್ನು ಹೀಗೆ ಕರೆಯುವರು.

ಎ) ಗುಂಪು ಬಿ) ತಂಡ ಸಿ) ಕೊಂಬು ಡಿ) ಹಿಂಡು

5. ಜೇನುನೊಣಗಳು ಯಾವುದರಿಂದ ಜೇನುತುಪ್ಪ ತಯಾರಿಸುತ್ತವೆ?

ಎ) ಹಣ್ಣು ಬಿ) ನೀರು ಸಿ) ಎಲೆ ಡಿ) ಹೂ

6. ಜೇನುನೊಣಗಳ ಪ್ರಕಾರಗಳು

ಎ) 4 ಬಿ) 1 ಸಿ) 3 ಡಿ) 2

7. ಜೇನುನೊಣಗಳ ಸಮುದಾಯದಲ್ಲಿ ಕಾರ್ಮಿಕನೊಣಗಳ ಕಾರ್ಯ.

ಎ) ವಿಶ್ರಾಂತಿ ಬಿ) ಮೊಟ್ಟೆ ಇಡುವುದು ಸಿ) ಆಹಾರ ಸಂಗ್ರಹಣೆ ಡಿ) ರಕ್ಷಣೆ.

8. ರಾಣಿ ಜೇನುನೊಣದ ಕಾರ್ಯ.

ಎ) ಮೊಟ್ಟೆ ಇಡುವುದು ಬಿ) ಜೇನು ಸಂಗ್ರಹ ಸಿ) ಗೂಡು ಕಟ್ಟುವುದು ಡಿ) ರಕ್ಷಣೆ

9. ಇರುವೆಗಳು ಯಾವುದಕ್ಕೆ ಮುತ್ತಿಗೆ ಹಾಕಿವೆ ?

ಎ) ಸಕ್ಕರೆ ಬಿ) ಮಿಠಾಯಿ ಸಿ) ಬೆಲ್ಲ ಡಿ) ಕಲ್ಲು ಸಕ್ಕರೆ

10. ಜಿಂಕೆಗಳ ಹಿಂಡನ್ನು ತೇಜಸ್ ಎಲ್ಲಿ ನೋಡಿದ ?

ಎ) ಬಂಡಿಪುರ ಬಿ) ನಾಗರಹೊಳೆ ಸಿ) ಕುದುರೆ ಮುಖ ಡಿ) ಮೈಸೂರು

ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ (ಸುಲಭ)

11. ಆನೆಗಳ ಗುಂಪಿಗೆ _____ ಎಂದು ಕರೆಯುತ್ತಾರೆ.

12. ಜೇನುಹುಳಗಳು ಹೂಗಳಿಂದ _____ ಸಂಗ್ರಹಿಸುತ್ತವೆ.

13. ರಾಣಿ ಜೇನುಹುಳದ ಕೆಲಸವೆಂದರೆ _____

14. ಕಾರ್ಮಿಕ ಜೇನುಹುಳುಗಳು ಜೇನುಗೂಡನ್ನು _____ ಉಪಯೋಗಿಸಿ ನಿರ್ಮಿಸುತ್ತವೆ.

15. ಜೇನುಹುಳುಗಳು ಮಕರಂದವನ್ನು ___________ ನಲ್ಲಿ ಸಂಗ್ರಹಿಸುತ್ತವೆ.

16. ಒಂದು ಗ್ಲಾಸ್ ನೀರಿನಲ್ಲಿ ____________ ಹಾಕಿ ಪರೀಕ್ಷಿಸಬಹುದು.

17. ಮರದಿಂದ ಮಾಡಿದ ಜೇನು ಪೆಟ್ಟಿಗೆಗಳನ್ನು _________ಇಡುತ್ತಾರೆ.

18. ಮರಿ ಕೋತಿ ತನ್ನ _____________ ಹಿಡಿದಿರುತ್ತವೆ.

19. ಮಾನವರು ತಿನ್ನುವ ಏಕೈಕ ಕೀಟ ಉತ್ಪನ್ನವೆಂದರೆ _____.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

20. ಎಲ್ಲ ಪ್ರಾಣಿಗಳು ಒಂಟಿಯಾಗಿಯೇ ವಾಸಿಸುತ್ತವೆ. —

21. ಹಸುಗಳು ಸಹಕಾರದಿಂದ ಊಟ ತೆಗೆದುಕೊಂಡು ಹೋಗುತ್ತವೆ. —

22. ರಾಣಿ ಜೇನುಹುಳು ಹೂಗಳಿಂದ ಮಕರಂದವನ್ನು ಸಂಗ್ರಹಿಸುತ್ತದೆ. —

23. ಜೇನುಹುಳಗಳು ಜೇನುಗೂಡನ್ನು ಮೇಣದಿಂದ ನಿರ್ಮಿಸುತ್ತವೆ. —

24. ಜೇನು ಕೇವಲ ಮರಗಳಿಂದಲೇ ಸಂಗ್ರಹಿಸಲಾಗುತ್ತದೆ. —

25. ಮಗು ಕೋತಿ ತನ್ನ ತಾಯಿಯನ್ನು ಬಲವಾಗಿ ಹಿಡಿದಿರುತ್ತದೆ. —

26. ನಾವು ಜೇನುಗೂಡಿನಿಂದ ಕೇವಲ ಜೇನುಪಡೆಯುತ್ತೇವೆ. —

27. ಬೆಕ್ಕು ತನ್ನ ಮರಿಯನ್ನು ಪರಿಗಣಿಸುವುದಿಲ್ಲ. —

28. ನಾಯಿ ಕೆಲವೊಮ್ಮೆ ಆಹಾರಕ್ಕಾಗಿ ಹೋರಾಡುತ್ತದೆ. —

29. ಜೇನುತುಪ್ಪವು ನಮ್ಮ ಆರೋಗ್ಯಕ್ಕೆ ಉಪಯುಕ್ತವಾಗಿದೆ. —

30.ಹೊಂದಿಸಿ ಬರೆಯಿರಿ (ಸುಲಭ)

ಪ್ರಾಣಿ	**ವಸ್ತು/ಕ್ರಿಯೆ / ಉಪಯೋಗ**
ಅ) ರಾಣಿ ಜೇನುಹುಳ	ಅ) ತನ್ನ ಮರಿಯನ್ನು ಪ್ರೀತಿಯಿಂದ ನೆಕ್ಕುತ್ತದೆ
ಆ) ಮೇಣ	ಆ) ಜೇನುಗೂಡು ನಿರ್ಮಿಸಲು ಉಪಯೋಗಿಸಲಾಗುತ್ತದೆ
ಇ) ಕಾರ್ಮಿಕ ಜೇನುಹುಳ	ಇ) ಜೇನು ಸಂಗ್ರಹಿಸಲು ಉಪಯೋಗಿಸಲಾಗುತ್ತದೆ
ಈ) ಮರದ ಪೆಟ್ಟಿಗೆ	ಈ) ಜೇನುಗೂಡು ನಿರ್ಮಿಸಿ, ಆಹಾರ ಸಂಗ್ರಹಿಸುತ್ತದೆ
ಉ) ಜೇನುತುಪ್ಪ	ಉ) ಸೂರ್ಯನಿಂದ ರಕ್ಷಣೆಗೆ ಎಲೆಯನ್ನು ಹೋರುತ್ತದೆ
ಊ) ಬೆಕ್ಕು	ಊ) ಮೊಟ್ಟೆ ಇಡುತ್ತದೆ ಹೂಗಳಿಂದ ಮಕರಂದ

ಸಂಗ್ರಹಿಸುತ್ತದೆ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

31. ಗ್ರಾಮೋತ್ಸವದಲ್ಲಿ ಎಮ್ಮೆಗಳು ಯಾವುದನ್ನು ಸುತ್ತುತ್ತವೆ?

32. ಜೇನುನೊಣಗಳ ಆಹಾರವೇನು?

33. ಪಾಠದಲ್ಲಿ ಯಾರನ್ನು ಪ್ರೀತಿಯಿಂದ ಉಜ್ಜುತ್ತಾರೆ?

34. ಜೇನುನೊಣಗಳು ತಮ್ಮ ಗೂಡನ್ನು ಹೇಗೆ ತಯಾರಿಸುತ್ತವೆ?

35. ರಾಣಿ ಜೇನುನೊಣದ ಪ್ರಮುಖ ಕೆಲಸವೇನು?

36. ಜೇನುನೊಣಗಳು ಗೂಡುನಿರ್ಮಿಸಲು ಯಾವ ವಸ್ತುವನ್ನು ಬಳಸುತ್ತವೆ?

37. ಜೇನುನೊಣಗಳ ಗೂಡುಗಳು ಎಲ್ಲಿ ಕಂಡುಬರುತ್ತವೆ?

38. ಜೇನುನೊಣಗಳು ತಮ್ಮ ಗೂಡಿನಲ್ಲಿ ಏನನ್ನು ಸಂಗ್ರಹಿಸುತ್ತವೆ?

39. ಜೇನುನೊಣಗಳು ಹೂಗಳಿಂದ ಏನನ್ನು ಸಂಗ್ರಹಿಸುತ್ತವೆ?

40. ಜೇನು ಶುದ್ಧವಿದೆಯೇ ಎಂದು ಪರೀಕ್ಷಿಸಲು ಏನು ಮಾಡಬಹುದು?

41.ಮನುಷ್ಯನಿಗೆ ಕೀಟಗಳಿಂದ ಸಿಗುವ ಆಹಾರ ಪದಾರ್ಥ ಯಾವುದು?

42. ಜೇನುನೊಣಗಳು ಜೇನು ಹೊರತುಪಡಿಸಿ ಮತ್ತೇನು ಉತ್ಪಾದಿಸುತ್ತವೆ?

43. ತಾಯಿ ಕೋತಿಯು ಏನನ್ನು ಹಿಡಿದುಕೊಂಡಿರುತ್ತದೆ?

44. ಕೋಳಿ ತನ್ನ ಮರಿಗಳಿಗೆ ಏನನ್ನು ಕಲಿಸುತ್ತದೆ?

45. ಜೇನುನೊಣಗಳು ಹೂಗಳಿಗೆ ಹೋಗಿ ಏನನ್ನು ತಮ್ಮ ಗೂಡಿಗೆ ತರುತ್ತವೆ?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

46. ಜಿಂಕೆಗಳು ಮತ್ತು ಆನೆಗಳು ಗುಂಪಾಗಿ ಏಕೆ ವಾಸಿಸುತ್ತವೆ ಎಂದು ನೀನು ಯೋಚಿಸಿ ಬರೆ ? (ಸುಲಭ)

47. ಜೇನುನೊಣಗಳು ಹೂಗಳಿಂದ ಮಕರಂದವನ್ನು ಎಲ್ಲಿ ಸಂಗ್ರಹಿಸಬೇಕೆಂಬುದನ್ನು ಹೇಗೆ ತಿಳಿದುಕೊಳ್ಳುತ್ತವೆ? (ಕಠಿಣ)

48. ಕಾರ್ಮಿಕ ಜೇನುನೊಣ ಮತ್ತು ರಾಣಿ ಜೇನುನೊಣದ ವ್ಯತ್ಯಾಸವನ್ನು ತಿಳಿಸಿ. (ಸುಲಭ)

49. ಜೇನುತುಪ್ಪದ ಎರಡು ಉಪಯೋಗಗಳನ್ನು ಬರೆ ? (ಸುಲಭ)

50. ಪರಾಗಸಂಚಯದಲ್ಲಿ ಜೇನುನೊಣಗಳ ಪಾತ್ರವೇನು? (ಕಠಿಣ)

51. ಜೇನುತುಪ್ಪದ ಶುದ್ಧತೆಯನ್ನು ಹೇಗೆ ಪರೀಕ್ಷಿಸುವಿರಿ ? (ಸಾಧರಣ)

52. ಕೋತಿಗಳು ಮತ್ತು ಕೋಳಿಗಳು ತಮ್ಮ ಮರಿಗಳನ್ನು ಏಕೆ ಕಾಳಜಿ ವಹಿಸುತ್ತವೆ? (ಸುಲಭ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

53. ಜೇನುನೊಣಗಳು ಮಕರಂದ ಸಂಗ್ರಹಿಸುವ ಪ್ರಕ್ರಿಯೆ ವಿವರಿಸಿ. (ಕಠಿಣ)
54. ಪರಿಸರದಲ್ಲಿ ಜೇನುನೊಣಗಳನ್ನು ಸಂರಕ್ಷಿಸುವುದು ಏಕೆ ಮುಖ್ಯ? (ಕಠಿಣ)
55. ಜೇನುನೊಣಗಳ ಕುಟುಂಬ ಸದಸ್ಯರ ಕಾರ್ಯವನ್ನು ಕುರಿತು ವಿವರಿಸಿ? (ಸುಲಭ)
56. ತೇಜಸ್ ನಾಗರಹೊಳೆ ಅರಣ್ಯದಲ್ಲಿ ಏನು ಕಂಡನು ಮತ್ತು ಅದು ಪ್ರಾಣಿಗಳ ವರ್ತನೆಯೊಂದಿಗೆ ಹೇಗೆ ಸಂಬಂಧ ಹೊಂದಿದೆ? (ಕಠಿಣ)
57. ತಾಯಿ ಕೋತಿಯ ವರ್ತನೆಯು ತಾಯಿ ಮತ್ತು ಮಗುವಿನ ಬಾಂಧವ್ಯವನ್ನು ಹೇಗೆ ಪ್ರತಿಬಿಂಬಿಸುತ್ತದೆ? (ಸಾಧರಣ)
58. ನಿಮ್ಮ ಸುತ್ತಲೂ ಕಾಣಬಹುದಾದ ಜೇನುನೊಣಗಳ ಪ್ರಭೇದಗಳು ಮತ್ತು ಗೂಡುಗಳ ಕುರಿತು ವಿವರಿಸಿ. (ಸುಲಭ)

59. ಜೇನುತುಪ್ಪ ಮನುಷ್ಯನ ಆರೋಗ್ಯಕ್ಕೆ ಹೇಗೆ ಸಹಕಾರಿಯಾಗುತ್ತದೆ? ಕನಿಷ್ಠ ಎರಡು ಪ್ರಯೋಜನಗಳನ್ನು ಹೇಳಿ. (ಕಠಿಣ)

60. ಕೋತಿಗಳು ಮತ್ತು ಕೋಳಿಗಳ ಉದಾಹರಣೆಯಿಂದ ಪ್ರಾಣಿಗಳು ತಮ್ಮ ಮಕ್ಕಳಿಗೆ ಹೇಗೆ ಕಾಳಜಿವಹಿಸುತ್ತವೆ? ಎಂಬುದನ್ನು ಹೋಲಿಸಿ ವಿವರಿಸಿ. (ಸಾಧರಣ)

61. ಜೇನುನೊಣಗಳು ಜೇನು ಉತ್ಪಾದನೆ ಮತ್ತು ಪರಿಸರದ ಸಮತೋಲನದ ಪಾಲನೆಯ ಭಾಗವಾಗಿ ಹೇಗೆ ಮುಖ್ಯವಾಗಿವೆ ಎಂಬುದನ್ನು ವಿವರಿಸಿ. (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು) (ಕಠಿಣ)

62. ಜೇನುನೊಣವೆಂದು ಕಲ್ಪಿಸಿ – ಹೂಗಳಿಂದ ಮಕರಂದ ಸಂಗ್ರಹಿಸಿ ಗೂಡಿಗೆ ಹಿಂದಿರುಗುವ ದಿನಚರಿಯನ್ನು ವಿವರಿಸಿ.

63. ಜೇನು ಮತ್ತು ಜೇನುಗೂಡಿನಿಂದ ಸಿಗುವ ಇತರೆ ಉತ್ಪನ್ನಗಳು ಮನುಷ್ಯರಿಗೆ ಹೇಗೆ ಉಪಯುಕ್ತವಾಗುತ್ತವೆ? ಎಂಬುದನ್ನು ವಿವರಿಸು.

64. ಪ್ರಕೃತಿಯಲ್ಲಿ ಪ್ರಾಣಿಗಳ ಕುಟುಂಬಗಳು ಹೇಗೆ ಸಹಕಾರದ ಮೂಲಕ ಬದುಕುತ್ತವೆ ಎಂಬುದನ್ನು ವಿವರಿಸಿ.

65. ಜೇನುನೊಣ ಕುಟುಂಬದ ಉದಾಹರಣೆಯೊಂದಿಗೆ ಮಾನವ ಕುಟುಂಬದ ಹೋಲಿಕೆಯನ್ನು ಮಾಡಿ.

66. ಪಾಠದಲ್ಲಿ ಮಕ್ಕಳು ಜಿಂಕೆ, ಆನೆಗಳ ಹಿಂಡು ಮತ್ತು ಏಕಾಂಗಿಯಾದ ಹುಲಿಯನ್ನು ನೋಡುತ್ತಾರೆ. ಈ ಪ್ರಾಣಿಗಳ ಸಾಮಾಜಿಕ ವರ್ತನೆ ಮತ್ತು ಜೇನುನೊಣಗಳ ವರ್ತನೆಯ ಹೋಲಿಕೆ ಮಾಡಿ.

67. ನೀವೇ ಜೇನುನೊಣಗಳ ಅಧ್ಯಯನ ಮಾಡುತ್ತಿರುವ ವಿಜ್ಞಾನಿ ಎಂದು ಕಲ್ಪಿಸಿ – ಗೂಡಿನ ವೈಶಿಷ್ಟ್ಯಗಳು, ವಿವಿಧ ಜೇನುನೊಣಗಳ ಪಾತ್ರ ಮತ್ತು ಜೇನು ಉತ್ಪಾದನೆಯ ಪ್ರಕ್ರಿಯೆಯನ್ನು ವಿವರಿಸಿ.

68. ಜೇನುನೊಣ ಮಕ್ಕಳಿಗೆ ಪರಿಸರ ಶುದ್ಧವಾಗಿ ಇರಬೇಕು ಎಂಬುದನ್ನು ಹೇಗೆ ಕಲಿಸುತ್ತದೆ. ಪರಾಗಸಂಚಯದಲ್ಲಿ ಅದರ ಪಾತ್ರವನ್ನು ವಿವರಸಿ.

69. ಜೇನುನೊಣಗಳ ಮಹತ್ವವನ್ನು ಕುರಿತು ಚಿಕ್ಕ ಪ್ರಬಂಧ ಬರೆಯಿರಿ.

70. ಪ್ರಾಣಿಗಳ ಒಗ್ಗಟ್ಟಿನಿಂದ ಮನುಷ್ಯನು ಕಲಿಯಬಹುದಾದ ಪಾಠವನ್ನು ವಿವರಿಸಿ.

71. ಜೇನುಗೂಡಿನ ಚಿತ್ರ ಬರೆದು ಬಣ್ಣ ತುಂಬಿ

ಪಾಠ 3 – ವನ ಸಂಚಾರ

ಕಲಿಕಾ ಫಲಗಳು :-

- ಮನೆಯ ಬಳಿ ಹಾಗೂ ಅರಣ್ಯದಲ್ಲಿ ಕಂಡುಬರುವ ಮರಗಳನ್ನು ಗುರುತಿಸಬಲ್ಲರು..
- ಅರಣ್ಯದ ಹಣ್ಣುಗಳನ್ನು ಗುರುತಿಸಿ, ತಮ್ಮ ಪ್ರದೇಶದಲ್ಲಿ ದೊರೆಯುವ ಹಣ್ಣುಗಳೊಂದಿಗೆ ಹೋಲಿಸಬಲ್ಲರು.
- "ಅರಣ್ಯ ನಮ್ಮದು" ಎಂಬ ಭಾವನೆಯೊಂದಿಗೆ ಮರಗಳನ್ನು ಕಡಿಯಬಾರದೆಂಬ ಅಭಿಪ್ರಾಯವನ್ನು ಬೆಳೆಸುತ್ತಾರೆ.
- ಮರಗಳು ಮತ್ತು ಅರಣ್ಯದ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾರೆ.
- ಮರದ ನೆರಳು, ಹಣ್ಣು, ಔಷಧ, ಶ್ರೀಗಂಧ, ಸುಗಂಧದ್ರವ್ಯ, ಮಸಿ ಮುಂತಾದವುಗಳನ್ನು ನೀಡುತ್ತವೆ ಎಂಬುದನ್ನು ತಿಳಿಯುತ್ತಾರೆ.
- ಅರಣ್ಯದಲ್ಲಿ ವಾಸಿಸುವ ಪ್ರಾಣಿಗಳನ್ನು ಗುರುತಿಸಬಲ್ಲರು.
- ಅರಣ್ಯ ನಾಶವಾದರೆ ಏನು ಪರಿಣಾಮಗಳು ಸಂಭವಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.
- ಅರಣ್ಯ ಸಂರಕ್ಷಣೆ ಯಾಕೆ ಅಗತ್ಯ ಎಂಬುದನ್ನು ಚಿಂತನೆ ಮೂಲಕ ತಿಳಿಯುತ್ತಾರೆ.
- ಅಪ್ಪಿಕೋ ಚಳವಳಿಯ ಉದ್ದೇಶವನ್ನು ವಿವರಿಸಬಲ್ಲರು..
- ಮರಗಳನ್ನು ನೆಡುವ ಮತ್ತು ಸಂರಕ್ಷಿಸುವ ಅಭ್ಯಾಸವನ್ನು ಬೆಳೆಸುತ್ತಾರೆ.
- ಮರಗಳು ನಮಗೆ ಹವಾಮಾನ, ನೀರು, ಆಹಾರ, ಶಕ್ತಿ, ಔಷಧ ನೀಡುತ್ತವೆ ಎಂಬುದನ್ನು ತಿಳಿಯುತ್ತಾರೆ.
- ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ಘೋಷಣೆಗಳನ್ನು ಬರೆಯುತ್ತಾರೆ ಮತ್ತು ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾರೆ.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

(1) ಹುಲ್ಲಿನ ಜಾತಿಯ ಅತಿದೊಡ್ಡ ಸಸ್ಯ
ಎ) ಬಿದಿರು ಬಿ) ತೇಗ ಸಿ) ಹೊನ್ನೆ ಡಿ) ಸಂತಾಲ
(2) ಸೀತಾ ಎಲ್ಲಿ ವಾಸಿಸುತ್ತಿದ್ದಳು
ಎ) ಮನೆಯಲ್ಲಿ ಬಿ) ಕಾಡಿನಂಚಿನಲ್ಲಿ ಸಿ) ತೋಟದಲ್ಲಿ ಡಿ) ಗುಡಿಯಲ್ಲಿ
(3) ಕೀಟಾಹಾರಿ ಸಸ್ಯಕ್ಕೆ ಉದಾಹರಣೆ ಯಾಗಿದೆ.
ಎ) ಜೋಳ ಬಿ) ರಾಗಿ ಸಿ) ಹೂಜಿ ಗಿಡ ಡಿ) ಬಿದಿರು
(4) ಅತಿ ಬೆಲೆ ಬಾಳುವ ಮರವಿದು
ಎ) ತೇಗ ಬಿ) ಮಾವು ಸಿ) ಬೇವು ಡಿ) ನೀಲಗಿರಿ
(5) ಕೋತಿಗಳು ಎಲ್ಲಿ ವಾಸಿಸುತ್ತವೆ ?
ಎ) ನದಿಯಲ್ಲಿ ಬಿ) ಮರದಲ್ಲಿ ಸಿ) ಮನೆಯಲ್ಲಿ ಡಿ) ಗುಹೆಯಲ್ಲಿ

ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ (ಸುಲಭ)

(6) ಸೀತಾ ____________ಅಂಚಿನಲ್ಲಿ ವಾಸಿಸುತ್ತಾಳೆ.

(7) ಅರಣ್ಯದಲ್ಲಿ ತೇಗ, ಸಂತಾಲ, ಹೊನ್ನೆ ಮತ್ತು ___________ ಮರಗಳಿವೆ.

(8) ಕೋತಿಗಳು _____________ ಮೇಲೆ ವಾಸಿಸುತ್ತವೆ.

(9) ಮರಗಳು ನಮಗೆ ಹಣ್ಣುಗಳು, ನೆರಳು ಮತ್ತು _________ ಒದಗಿಸುತ್ತವೆ.

(10) ಅಪ್ಪಿಕೊ ಹೋರಾಟದ ಘೋಷವಾಕ್ಯ: "ಅರಣ್ಯ ಉಳಿಸಿ, ಅರಣ್ಯ ಬೆಳೆಸಿ ಮತ್ತು ____."

(11)______________ ಹುಲ್ಲು ಕುಟುಂಬಕ್ಕೆ ಸೇರಿದೆ.

(12) __________ ಬೀಜವು ಜಗತ್ತಿನಲ್ಲಿ ಅತಿದೊಡ್ಡ ಬೀಜವಾಗಿದೆ.

(13) ನೇರಳೆ ಗಿಡವು ____________ ಗಿಡದ ಉದಾಹರಣೆಯಾಗಿದೆ.

(14) ಅನೇಕ ಔಷಧಿಗಳನ್ನು _________ ಗಿಡಗಳಿಂದ ತಯಾರಿಸಲಾಗುತ್ತದೆ.

(15) ಅರಣ್ಯಗಳು ಪ್ರಾಣಿ ಮತ್ತು ____________ ಗಳಿಗೆ ನೆರಳನ್ನು ಒದಗಿಸುತ್ತವೆ.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

(16) ಸೀತಾ ಅರಣ್ಯದ ಒಳಗೆ ವಾಸಿಸುತ್ತಾಳೆ. –

(17) ತೇಗ ಮತ್ತು ಸಂತಾಲ ಮರಗಳು ಅರಣ್ಯದಲ್ಲಿ ಬೆಳೆಯುತ್ತವೆ. –

(18) ಅರಣ್ಯದ ಎಲ್ಲಾ ಪ್ರಾಣಿಗಳು ಒಂಟಿಯಾಗಿಯೇ ವಾಸಿಸುತ್ತವೆ. –

(19) ನೀರಾಳಿ ಗಿಡವು ಕೀಟಗಳನ್ನು ತಿನ್ನುತ್ತದೆ. –

(20) ಮರಗಳನ್ನು ಕತ್ತರಿಸಿದರೆ ಪ್ರಕೃತಿಯ ಸೌಂದರ್ಯ ಹೆಚ್ಚಾಗುತ್ತದೆ. –

(21) ಬಂಬೂ ಮರವಲ್ಲ. –

(22) ಬ್ರಯೋಫಿಲ್ಲಮ್ ಎಲೆಗಳಿಂದ ಬೆಳೆದು ಬರುತ್ತದೆ. –

(23) ಅರಣ್ಯಗಳು ಆಹಾರ, ಬಟ್ಟೆ, ಇಂಧನ ಮತ್ತು ಔಷಧ ಒದಗಿಸುತ್ತವೆ. –

(24) ನಗರದಲ್ಲಿ ವಾಸಿಸಿದರೆ ಅರಣ್ಯದ ಅವಶ್ಯಕತೆ ಇರುವುದಿಲ್ಲ. –

(25) ಮನುಷ್ಯರು ತಿನ್ನುವ ಏಕೈಕ ಕೀಟ ಉತ್ಪನ್ನ ಜೇನು ಮಾತ್ರ. –

(26) ಹೊಂದಿಸಿ ಬರೆಯಿರಿ (ಸುಲಭ)

A (ಪ್ರಾಣಿ/ವಸ್ತು)	B (ಉಪಯೋಗ/ವಿವರಣೆ)
ಅ) ಸಂತಾಲ ಮರ	ಅ. ಕಟ್ಟಡಗಳಲ್ಲಿ ಲಂಬಕೆಸೆಗಾಗಿ ಬಳಸುತ್ತಾರೆ
ಆ) ತೇಗ ಮರ	ಆ. ಸುಗಂಧ ದ್ರವ್ಯ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ
ಇ) ನೀರಾಳಿ ಗಿಡ	ಇ. ಹುಲ್ಲು ಕುಟುಂಬಕ್ಕೆ ಸೇರಿದುದು
ಈ) ಬಂಬೂ	ಈ. ಕೀಟಗಳನ್ನು ತಿನ್ನುತ್ತದೆ
ಉ) ಅಪ್ಪಿಕೊ ಚಳವಳಿ	ಉ. ಎಲೆಗಳಿಂದ ಬೆಳೆದು ಬರುತ್ತದೆ
ಊ) ಬ್ರಯೋಫಿಲ್ಲಮ್	ಊ. ಅರಣ್ಯ ಉಳಿಸಿ ಮತ್ತು ಬೆಳೆಸಿ ಎಂದು ಪ್ರಚೋದನೆ
ಋ) ನೆಲ್ಲಿಕಾಯಿ	ಋ. ಗಿಡದಲ್ಲಿಯೇ ಮೊಟ್ಟೆಯುತ್ತದೆ
ಎ) ಮ್ಯಾಂಗ್ರೂವ್ ಬೀಜ	ಎ. ಅರಣ್ಯದಲ್ಲಿ ಸಿಗುವ ಹಣ್ಣು
ಏ) ಬೇವು	ಏ. ಅರಣ್ಯದಲ್ಲಿ ಕಾಣಸಿಗುತ್ತದೆ
ಐ) ಜಂಬೂ ಮರ	ಐ. ಔಷಧ ತಯಾರಿಕೆಗೆ ಉಪಯೋಗವಾಗುತ್ತದೆ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

(27) ಈ ಪಾಠದಲ್ಲಿ ಅರಣ್ಯವನ್ನು ಪರಿಚಯಿಸುವ ಹುಡುಗಿಯ ಹೆಸರೇನು?

(27) ಸೀತಾ ಎಲ್ಲಿ ವಾಸಿಸುತ್ತಾಳೆ ?

(28) ಅರಣ್ಯದಲ್ಲಿ ಸಿಗುವ ಒಂದು ಹಣ್ಣಿನ ಹೆಸರನ್ನು ಬರೆಯಿರಿ?

(29) ಕೋತಿಗಳು ಮರದ ಮೇಲೆ ಏನು ಮಾಡುತ್ತವೆ?

(30) ಹಾವುಗಳು ಮರದ ಮೇಲೆ ಏನು ಮಾಡುತ್ತವೆ?

(31) ಸುಗಂಧದ ಹೂಗಳಿರುವ ಒಂದು ಬಳ್ಳಿಯ ಹೆಸರನ್ನು ಬರೆಯಿರಿ?

(32) ಅರಣ್ಯದಲ್ಲಿ ವಾಸಿಸುವ ಒಂದು ಪ್ರಾಣಿಯ ಹೆಸರನ್ನು ಬರೆಯಿರಿ?

(33) ಅರಣ್ಯವು ಎಲ್ಲರಿಗೂ ಏನು ನೀಡುತ್ತದೆ?

(34) ಮರದ ಒಂದು ಉಪಯೋಗವನ್ನು ಬರೆಯಿರಿ?

(35) ನಿಮ್ಮ ಮನೆಯ ಬಳಿ ಬೆಳೆಯುವ ಒಂದು ಮರದ ಹೆಸರನ್ನು ಬರೆಯಿರಿ?

(36) ಅಪ್ಪಿಕೊ ಚಳುವಳಿಯ ಘೋಷವಾಕ್ಯವೇನು?

(37) ಕೀಟಗಳನ್ನು ತಿನ್ನುವ ಒಂದು ಸಸ್ಯದ ಹೆಸರನ್ನು ಬರೆಯಿರಿ?

(38) ಬಿದಿರು ಯಾವ ಕುಟುಂಬಕ್ಕೆ ಸೇರಿದ ಸಸ್ಯ?

(39) ಜಗತ್ತಿನ ಅತಿದೊಡ್ಡ ಬೀಜ?

(40) ಕರ್ನಾಟಕದಲ್ಲಿ ಎಷ್ಟು ರಾಷ್ಟ್ರೀಯ ಉದ್ಯಾನವನಗಳು ಇವೆ?

(41) ಪೀಠೋಪಕರಣಗಳ ತಯಾರಿಕೆಯಲ್ಲಿ ಬಳಸುವ ಒಂದು ಅರಣ್ಯದ ಉತ್ಪನ್ನವೇನು?

(42) ಎಲೆಗಳಿಂದ ಬೆಳೆಯುವ ಒಂದು ಸಸ್ಯದ ಹೆಸರನ್ನು ಬರೆಯಿರಿ?

(43) ಅರಣ್ಯಗಳು ಯಾವುದನ್ನು ತಡೆಗಟ್ಟುತ್ತವೆ?

(44) ನಮಗೆ ನೆರಳು, ಹಣ್ಣುಗಳು ಹಾಗೂ ಆಮ್ಲಜನಕ ನೀಡುವುದು ಏನು?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

(45) ಅರಣ್ಯದಲ್ಲಿ ಸಿಗುವ ಯಾವುದಾದರೂ ಎರಡು ಮರಗಳ ಹೆಸರನ್ನು ಬರೆಯಿರಿ? (ಸುಲಭ)

(46) ಅರಣ್ಯದಲ್ಲಿ ಸಿಗುವ ಎರಡು ಹಣ್ಣುಗಳ ಹೆಸರನ್ನು ಬರೆಯಿರಿ? (ಸಾಧಾರಣ)

(47) ಅರಣ್ಯದಲ್ಲಿ ವಾಸಿಸುವ ಎರಡು ಪ್ರಾಣಿಗಳ ಹೆಸರನ್ನು ಬರೆಯಿರಿ? (ಸಾಧಾರಣ)

(48) ಬೇವಿನ ಮರದ ಎರಡು ಉಪಯೋಗಗಳನ್ನು ಬರೆಯಿರಿ? (ಸುಲಭ)

(49) ಬಿದಿರು ಮರದಿಂದ ಸಿಗುವ ಎರಡು ವಸ್ತುಗಳನ್ನು ಬರೆಯಿರಿ? (ಸುಲಭ)

(50) ಗಂಧದ ಮರದ ಉಪಯೋಗವೇನು? (ಸಾಧಾರಣ)

(51) ನಿಮ್ಮ ಶಾಲೆಯ ಬಳಿ ನೆಡಲಾದ ಎರಡು ಮರಗಳ ಹೆಸರನ್ನು ಬರೆಯಿರಿ? (ಸುಲಭ)

(52) “ಸುಗಂಧದ ಹೂಗಳ ಬಳ್ಳಿಗಳು” ಎಂಬುದರಿಂದ ನಿಮಗೆ ಏನು ಅರ್ಥವಾಗುತ್ತದೆ? (ಸಾಧಾರಣ)

(53) ಆಲದ ಮರದ ಎರಡು ಉಪಯೋಗಗಳನ್ನು ಬರೆಯಿರಿ? (ಸುಲಭ)

(54) ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ಎರಡು ಘೋಷಣೆಯನ್ನು ಬರೆಯಿರಿ? (ಕಠಿಣ)

(55) ಕೀಟ ಭಕ್ಷಕ ಸಸ್ಯಗಳೆಂದರೇನು? ಉದಾಹರಣೆಗಳನ್ನು ನೀಡಿ? (ಸುಲಭ)

(56) ಅರಣ್ಯದಲ್ಲಿ ಸಿಗುವ ಹಣ್ಣುಗಳ ಉಪಯೋಗವೇನು? (ಸುಲಭ)

(57) ನಾವು ಮರಗಳನ್ನು ಕಡಿಯಬಾರದು ಎಂಬುದಕ್ಕೆ ಎರಡು ಕಾರಣಗಳನ್ನು ಬರೆಯಿರಿ? (ಸಾಧಾರಣ)

(58) “ಸಸಿ” ಸರಿಯಾಗಿ ನೆಡದಿದ್ದರೆ ಏನು ಆಗುತ್ತದೆ ? (ಕಠಿಣ)

(59) "ಮರಗಳು ಪ್ರಕೃತಿಗೆ ಸೌಂದರ್ಯ ನೀಡುತ್ತವೆ" ಎಂಬ ಕವನದ ಎರಡು ಸಾಲುಗಳನ್ನು ಬರೆಯಿರಿ?

(ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

(60) ಸಸಿಯನ್ನು ನೆಡುವ ಹಂತಗಳನ್ನು ವಿವರಿಸಿ. (ಸಾಧಾರಣ)

(61) ಅರಣ್ಯಗಳ ಮೂರು ಉಪಯೋಗಗಳನ್ನು ಬರೆಯಿರಿ? (ಸುಲಭ)

(62) ಮೂರು ಮರಗಳ ಹೆಸರನ್ನು ಬರೆದು ಪ್ರತಿಯೊಂದರ ಒಂದು ಉಪಯೋಗವನ್ನು ಬರೆಯಿರಿ?

(ಸುಲಭ)

(63) ಅಪ್ಪಿಕೊ ಚಳುವಳಿಯ ಬಗ್ಗೆ ತಿಳಿಸಿ? (ಕಠಿಣ)

(64) ಅರಣ್ಯಗಳು ಜಂತುಗಳು ಹಾಗೂ ಪಕ್ಷಿಗಳಿಗೆ ಹೇಗೆ ಸಹಾಯ ಮಾಡುತ್ತವೆ? (ಕಠಿಣ)

(65) ಅರಣ್ಯದಿಂದ ಸಿಗುವ ಮೂರು ಉತ್ಪನ್ನಗಳ ಹೆಸರು ಬರೆದು, ಅವುಗಳ ಉಪಯೋಗವನ್ನು

ಬರೆಯಿರಿ? (ಸಾಧಾರಣ)

(66) ಅರಣ್ಯ ನಾಶವಾದರೆ ಏನು ಪರಿಣಾಮಗಳು ಸಂಭವಿಸುತ್ತವೆ? (ಮೂರು ಉದಾಹರಣೆಗಳನ್ನು

ನೀಡಿ)

(67) ಮೂರು ಮರಗಳ ಹೆಸರನ್ನು ಬರೆದು ಅವು ಎಲ್ಲಿ ಬೆಳೆಯುತ್ತವೆ ಎಂಬುದನ್ನು ವಿವರಿಸಿ? (ಸುಲಭ)

(68) ಅರಣ್ಯದಲ್ಲಿ ಸಿಗುವ ಮೂರು ಹಣ್ಣುಗಳ ಹೆಸರು ಹಾಗೂ ಅವುಗಳ ಉಪಯೋಗವನ್ನು ಬರೆಯಿರಿ?

(ಸುಲಭ)

(69) ಸಸಿ ನೆಡಲು ಬೇಕಾಗಿರುವ ವಸ್ತುಗಳ ಪಟ್ಟಿಯನ್ನು ಬರೆಯಿರಿ? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕುಅಂಕದ ಪ್ರಶ್ನೆಗಳು)

(70) ಪಾಠದಲ್ಲಿ ಸೀತಾ ನೋಡಿದ ಅರಣ್ಯದ ಚಿತ್ರಣವನ್ನು ವಿವರಿಸಿ. (ಕಠಿಣ)

(71) ನಮ್ಮ ಜೀವನದಲ್ಲಿ ಅರಣ್ಯದ ಮಹತ್ವವನ್ನು ವಿವರಿಸಿ? (ಸಾಧಾರಣ)

(72) ನಿಮ್ಮ ಮನೆಯ ಬಳಿ ಸಸಿಯನ್ನು ಬೆಳೆಸುವ ಹಾಗೂ ರಕ್ಷಿಸುವ ವಿಧಾನವನ್ನು ವಿವರಿಸಿ?

(ಸಾಧರಣ)

(73) ಅರಣ್ಯಗಳಿಲ್ಲದಿದ್ದರೆ ಏನು ಪರಿಣಾಮಗಳು ಉಂಟಾಗಬಹುದು? (ಕಠಿಣ)

(74) ಅಪ್ಪಿಕೊ ಚಳುವಳಿ ಹಾಗೂ ಅದರ ಮಹತ್ವವನ್ನು ಬರೆಯಿರಿ? (ಕಠಿಣ)

(75) ನಾಲ್ಕು ಮರಗಳ ಹೆಸರನ್ನು ಬರೆದು ಪ್ರತಿಯೊಂದರ ಎರಡು ಉಪಯೋಗಗಳನ್ನು ವಿವರಿಸಿ?

(ಸಾಧರಣ)

(76) ಅರಣ್ಯಗಳು ಪ್ರಾಣಿಗಳು ಹಾಗೂ ಸಸ್ಯಗಳ ಸಂರಕ್ಷಣೆಯಲ್ಲಿ ಹೇಗೆ ಸಹಾಯ ಮಾಡುತ್ತವೆ?

(ಸಾಧಾರಣ)

(77) ನಾಲ್ಕು ಅರಣ್ಯ ಉತ್ಪನ್ನಗಳ ಹೆಸರನ್ನು ಬರೆದು ಅವುಗಳ ಉಪಯೋಗಗಳನ್ನು ವಿವರಿಸಿ? (ಸುಲಭ)

(78) ಪಾಠದಲ್ಲಿ ಕಲಿತಂತೆ ಸಸಿ ನೆಡುವ ಹಾಗೂ ರಕ್ಷಿಸುವ ಪ್ರಕ್ರಿಯೆಯನ್ನು ವಿವರಿಸಿ? (ಕಠಿಣ)

(79) ನಾವು ಮರಗಳನ್ನು ಹೇಗೆ ಪ್ರೀತಿಸಬೇಕು ಹಾಗೂ ರಕ್ಷಿಸಬೇಕು ಎಂಬುದನ್ನು

ಉದಾಹರಣೆಯೊಂದಿಗೆ ವಿವರಿಸಿ? (ಕಠಿಣ)

(80) ಕೆಳಗೆ ಕೊಟ್ಟಿರುವ ಉದ್ಯಾನವನ ಚಿತ್ರಕ್ಕೆ ಸರಿಯಾದ ಬಣ್ಣ ಹಾಕಿ (ಸುಲಭ)



ಪಾಠ 4   ಸಸ್ಯಾಧಾರ ಬೇರು

ಕಲಿಕಾ ಫಲಗಳು :-

- ಸಸ್ಯದ ವಿವಿಧ ಭಾಗಗಳನ್ನು ಗುರುತಿಸಬಲ್ಲರು ವಿಶೇಷವಾಗಿ ಬೇರುಗಳನ್ನು.
- ಬೇರುಗಳ ಮುಖ್ಯ ಕಾರ್ಯಗಳನ್ನು ವಿವರಿಸಬಲ್ಲರು:
- ಬೇರುಗಳ ಪಾತ್ರವನ್ನು ಅರಿಯಲು ಸರಳ ಪ್ರಯೋಗಗಳನ್ನು ನಡೆಸುತ್ತಾರೆ.
- ಬೇರು ಇರುವ ಮತ್ತು ಬೇರು ಕತ್ತರಿಸಿದ ಸಸ್ಯಗಳ ಬೆಳವಣಿಗೆಗೆ ಹೋಲಿಕೆ ಮಾಡಬಲ್ಲರು.
- ಮಣ್ಣು ಹಾಗೂ ನೀರಿನ ಸಂರಕ್ಷಣೆಯಲ್ಲಿ ಬೇರುಗಳ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾರೆ.
- ಬೇರುಗಳು ರೂಪಾಂತರಗೊಂಡಿರುವುದನ್ನು ಹಾಗೂ ಆಹಾರವಾಗಿ ಬಳಸುವ ಸಾಮಾನ್ಯ ಬೇರುಗಳನ್ನು ಗುರುತಿಸಿ, ಅವುಗಳ ಉಪಯೋಗವನ್ನು ವಿವರಿಸುತ್ತಾರೆ (ಉದಾ: ಗಜ್ಜರಿ, ಬೀಟ್ರೂಟ್, ಮೂಲಂಗಿ).
- ನೈಸರ್ಗಿಕವಾಗಿ ಕಂಡುಬರುವ ವಿಶೇಷ ಬೇರುಗಳ ಬಗ್ಗೆ (ಹೆಂಚಿನ ಬೇರುಗಳು, ಗಾಳಿಯ ಬೇರುಗಳು, ನೀರು ಸಂಗ್ರಹಿಸುವ ಬೇರುಗಳು) ಅರಿವು ಪಡೆಯುತ್ತಾರೆ.
- ಬೇರುಗಳ ಕುರಿತ ಚಟುವಟಿಕೆಗಳಲ್ಲಿ ಮಾಡಿದ ಗಮನಗಳು ಮತ್ತು ಫಲಿತಾಂಶಗಳನ್ನು ದಾಖಲಿಸುತ್ತಾರೆ.
- ಬೇರುಗಳ ಕುರಿತ ಆಸಕ್ತಿಕರ ಮಾಹಿತಿಗಳ ಬಗ್ಗೆ ಕುತೂಹಲವನ್ನು ಬೆಳೆಯಿಸುತ್ತಾರೆ (ಉದಾ: 19 ಅಡಿ carrot, 600 ಕಿಮೀ ಬೇರುಗಳು, 70 ಕೆ.ಜಿ. ನೀರನ್ನು ಸಂಗ್ರಹಿಸುವ ಬೇರುಗಳು).

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ಸಸ್ಯದ ಬೇರು ಎಲ್ಲಿ ಬೆಳೆಯುತ್ತದೆ.
ಎ) ಭೂಮಿ ಮೇಲೆ ಬಿ) ಭೂಮಿ ಕೆಳಗೆ ಸಿ) ಎಲೆ ಮೇಲೆ ಡಿ) ಕಾಂಡದ ಮೇಲೆ

2 ಸಸ್ಯದ ಮೂಲಾಧಾರ ಇದು
ಎ) ಎಲೆ ಬಿ) ಕಾಂಡ ಸಿ) ಬೇರು ಡಿ) ಹೂ

3. ಔಷದ ಮತ್ತು ಅಡುಗೆಗಾಗಿ ಬಳಸಲ್ಪಡುವ ಬೇರು ಇದಾಗಿದೆ.
ಎ) ಮೂಲಂಗಿ ಬಿ) ಶುಂಠಿ ಸಿ) ಅರಿಷಿಣ ಡಿ) ಗೆಣಸು

4. ಬೇರು, ಕಾಂಡ, ಎಲೆ, ಹೂ, ಕಾಯಿ ಇವು __________ ಗಳಾಗಿವೆ.
ಎ) ಮರಗಳಾಗಿವೆ ಬಿ) ಆಟದ ಸಾಮಾನುಗಳಾಗಿವೆ ಸಿ) ಗಿಡಗಳಾಗಿವೆ ಡಿ) ಸಸ್ಯದ ಭಾಗಗಳಾಗಿವೆ

5. ಸಾಮಾನ್ಯವಾಗಿ ಬೇರುಗಳ ಬಣ್ಣ ಇದಾಗಿದೆ.
ಎ) ಕಂದು ಬಿ) ಬಿಳಿ ಸಿ) ಕೇಸರಿ ಡಿ) ಹಸಿರು

6. ಸಸ್ಯಗಳು ಬೆಳಯಲು ಈ ಕೆಳಗಿನ ಯಾವುದು ಅತ್ಯಾವಶ್ಯಕ
ಎ) ಕಾಂಡ ಬಿ) ಬೇರು ಸಿ) ಎಲೆ ಡಿ) ಹೂ

7. ಸಸ್ಯದ ಬೇರಾದ ಇದನ್ನು ಆಹಾರ ಪದಾರ್ಥವಾಗಿ ಬಳಸುತ್ತೇವೆ.
ಎ) ಮಾವು ಬಿ) ಕಾಂಡ ಸಿ) ಗಜ್ಜರಿ ಡಿ) ಎಲೆ

8. ಬೇರುಗಳು ತಮ್ಮ ಜಾಲದಿಂದ ಇದನ್ನು ಹಿಡಿದಿಡುತ್ತವೆ.
ಎ) ಮಣ್ಣಿನ ಕಣಗಳನ್ನು ಬಿ) ಕಲ್ಲುಗಳನ್ನು ಸಿ) ಹುಳುಗಳನ್ನು ಡಿ) ಬೀಜಗಳನ್ನು

9. ಸಸ್ಯಗಳು ಬೆಳಯಲು ಬೇರಿಗೆ ಹೆಚ್ಚು ನೀರು ಬೇಕು
ಎ) ತಪ್ಪು ಬಿ) ಸರಿ ಸಿ) ಹೌದು ಡಿ) ಯಾವುದೂ ಅಲ್ಲ

10. ಗಜ್ಜರಿ, ಬೀಟ್ ರೂಟ್, ಈರುಳ್ಳಿ , ಬೆಳ್ಳುಳ್ಳಿ ಇವುಗಳು ಸಸ್ಯದ ಈ ಭಾಗಗಳಾಗಿವೆ.
ಎ) ಕಾಂಡ ಬಿ) ಕಾಯಿ ಸಿ) ಬೇರು ಡಿ) ಹೂ

ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ (ಸುಲಭ)

11. ಬೇರುಗಳು ______________ಮಣ್ಣಿನಲ್ಲಿ ಬೆಳೆಯುತ್ತವೆ.

12. ಬೇರುಗಳು ಮಣ್ಣಿನಿಂದ ___________ಮತ್ತು ______ಗಳನ್ನು ಹೀರಿಕೊಳ್ಳುತ್ತದೆ.

13 ಬೇರುಗಳು ಸಸ್ಯವನ್ನು ನೆಲದಲ್ಲಿ ______________ ಮಾಡಲು ಸಹಾಯ ಮಾಡುತ್ತವೆ.

14 ಕೆಲವು ಬೇರುಗಳು _______________ಆಗಿ ರೂಪಾಂತರಗೊಂಡಿರುತ್ತವೆ.

15 _______________ ಎಂಬುದು ಔಷಧಿಯಾಗಿ ಬಳಸುವ ಬೇರು ಆಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

16. ಬೇರುಗಳು ಸಸ್ಯವನ್ನು ನಿಲ್ಲಲು ಸಹಾಯ ಮಾಡುತ್ತವೆ. –

17. ಬೇರುಗಳು ಮಣ್ಣಿನ ಮೇಲೆ ಬೆಳೆಯುತ್ತವೆ. –

18. ಅಶ್ವಗಂಧ ಆಹಾರವಾಗಿ ಬಳಸುವ ಬೇರು ಆಗಿದೆ. –

19. ಬೇರುಗಳು ನೀರನ್ನು ಪೋಷಿಸುವುದಿಲ್ಲ. –

20. ಕ್ಯಾರೆಟ್ ಒಂದು ಬೇರು ತರಕಾರಿ ಆಗಿದೆ. –

21. ಹೊಂದಿಸಿ ಬರೆಯಿರಿ (ಸುಲಭ)

A (ವಸ್ತು)	**B (ಉಪಯೋಗ)**
ಅ) ಕ್ಯಾರೆಟ್	ಅ) ಮಣ್ಣು ಹಿಡಿದು ಕಾಪಾಡುತ್ತದೆ
ಆ) ಅಶ್ವಗಂಧ	ಆ) ಆಹಾರ
ಇ) ಬೇರುಗಳು	ಇ) ಶೋಷಣೆಯ ತೋರಿಕೆಗೆ ಬಳಸಲಾಗುತ್ತದೆ
ಈ) ಬೇರು ಜಾಲ	ಈ) ಔಷಧ
ಉ) ಕೆಂಪು ಶಾಯಿ	ಉ) ನೀರನ್ನು ಶೋಷಿಸುತ್ತವೆ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

22. ನೆಲದ ಕೆಳಗೆ ಬೆಳೆಯುವ ಸಸ್ಯದ ಭಾಗವೇನು?

23. ಹೆಚ್ಚಿನ ಬೇರುಗಳ ಬಣ್ಣವೇನು?

24. ನೀರು ಮತ್ತು ಪೋಷಕಾಂಶಗಳನ್ನು ಪೋಷಿಸುವ ಭಾಗ ಯಾವದು?

25. ಸಸ್ಯವು ನೇರವಾಗಿ ನಿಲ್ಲಲು ಸಹಾಯ ಮಾಡುವ ಭಾಗ ಯಾವದು?

26. ಮಣ್ಣಿನ ಕಣಗಳನ್ನು ಒಟ್ಟುಗೂಡಿಸುವುದು ಏನು?

27. ನಿಮ್ಮ ಮನೆಗಳಲ್ಲಿ ಉಪಯೋಗವಾಗುವ ಬೇರು ತರಕಾರಿ ಹೆಸರಿಸಿ.

28. ಔಷಧಿಯಾಗಿ ಬಳಸುವ ಬೇರು ಹೊಂದಿರುವ ಸಸ್ಯವೊಂದು ಹೆಸರಿಸಿ.

29. ಬೇರುಗಳು ಒಣ ಪ್ರದೇಶಗಳಲ್ಲಿ ಏನನ್ನು ಸಂಗ್ರಹಿಸುತ್ತವೆ?

30. ಆಲದ ಮರದಲ್ಲಿ ಬಿಳಿಲು ಬೇರುಗಳ ಕೆಲಸವೇನು?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

31. ಬೇರುಗಳ ಯಾವುದಾದರು ಎರಡು ಕಾರ್ಯಗಳನ್ನು ಬರೆಯಿರಿ? (ಸಾಧಾರಣ)

32. ರಾಗಿ/ಅಕ್ಕಿ ತೊಗರಿಗಳ ಪ್ರಯೋಗದಲ್ಲಿ ನೀವು ಏನನ್ನು ಗಮನಿಸಿದಿರಿ? (ಸುಲಭ)

33. ಸಸ್ಯದ ಬೇರುಗಳನ್ನು ಕಡಿದರೆ ಏನು ಸಂಭವಿಸುತ್ತದೆ? (ಕಠಿಣ)

34. ಬಣ್ಣದ ನೀರಿನಲ್ಲಿ ಇಡಲಾದ ಬಾಲ್ಸಮ್ ಸಸ್ಯದಲ್ಲಿ ನೀವು ಏನು ಗಮನಿಸಿದಿರಿ? (ಸಾಧಾರಣ)

35. ಬೇರು ತರಕಾರಿಗಳ ಎರಡು ಹೆಸರುಗಳನ್ನು ಬರೆಯಿರಿ? (ಸುಲಭ)

36. ದಿನನಿತ್ಯ ಜೀವನದಲ್ಲಿ ಬಳಸುವ ಬೇರುಗಳ ಎರಡು ಉಪಯೋಗಗಳನ್ನು ಬರೆಯಿರಿ? (ಸುಲಭ)

37. ಅಪ್ಪು ಸಸ್ಯಗಳ ಹಸಿರು ಬೇರುಗಳು ಏನನ್ನು ಪೋಷಿಸುತ್ತವೆ? (ಸಾಧಾರಣ)

38. ಸಸ್ಯವು ಮಣ್ಣಿನಿಂದ ಪೋಷಕಾಂಶಗಳನ್ನು ಪೋಷಿಸಲು ಏನು ಸಹಾಯ ಮಾಡುತ್ತದೆ? (ಕಠಿಣ)

39. ಬೇರುಗಳು ಮಣ್ಣಿನ ಸವೆತವನು ತಡೆಯಲು ಹೇಗೆ ಸಹಾಯ ಮಾಡುತ್ತವೆ? (ಸಾಧಾರಣ)

40. ಕೆಲವು ಆದಿಕಾಲದ ಜನರು ಬೇರುಗಳಲ್ಲಿ ಸಂಗ್ರಹಿತ ನೀರನ್ನು ಏಕೆ ಬಳಸುತ್ತಾರೆ? (ಸುಲಭ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

41. ಬೇರುಗಳ ಮೂರು ಕಾರ್ಯಗಳನ್ನು ಬರೆಯಿರಿ? (ಸಾಧಾರಣ)

42. ಹುರಳಿಕಾಯಿ ಸಸ್ಯಗಳ ಉಪಯೋಗಿಸಿ ಮಾಡಲಾದ ಪ್ರಯೋಗವನ್ನು ವಿವರಿಸಿ? (ಸಾಧಾರಣ)

43. ಬೇರು ಹೊಂದಿರುವ ಮೂರು ತರಕಾರಿಗಳನ್ನು ಮತ್ತು ಅವುಗಳ ಉಪಯೋಗಗಳನ್ನು ವಿವರಿಸಿ?

(ಸುಲಭ)

44. ಬಾಲ್ಸಮ್ ಸಸ್ಯದ ಪ್ರಯೋಗದಲ್ಲಿ ನಿಮ್ಮ ಗಮನಗಳು ಮತ್ತು ಕಾರಣವನ್ನು ವಿವರಿಸಿ. (ಕಠಿಣ)

45. ಮಣ್ಣು ಮತ್ತು ನೀರಿನ ಸಂರಕ್ಷಣೆಯಲ್ಲಿ ಬೇರುಗಳ ಉಪಯೋಗವನ್ನು ವಿವರಿಸಿ? (ಸುಲಭ)

46. ಬೀಜಗಳನ್ನು ನೆಲದಲ್ಲಿ ನೆಟ್ಟು ನಿರಂತರವಾಗಿ ನೀರಿಡಿದಾಗ ಯಾವ ಬದಲಾವಣೆಗಳನ್ನು

ನೋಡಬಹುದು? (ಕಠಿಣ)

47. ಬಿಳಿಲು ಬೇರುಗಳು ಎಂದರೇನು? ಉದಾಹರಣೆ ನೀಡಿ. (ಸಾಧಾರಣ)

48. ಬರಡು ಪರಿಸ್ಥಿತಿಯಲ್ಲಿ ಸಸ್ಯ ಬದುಕಲು ಬೇರುಗಳು ಹೇಗೆ ಸಹಾಯ ಮಾಡುತ್ತವೆ? (ಕಠಿಣ)

49. ತೆಂಗಿನಕಾಯಿಯ ಚಿಪ್ಪುಗಳನ್ನು ಬಳಸಿಕೊಂಡು ಕಾಳುಗಳ ಬೇರು ಬೆಳವಣಿಗೆ ನೋಡಲು ನೀವು

ತೆಗೆದುಕೊಳ್ಳುವ ಹಂತಗಳನ್ನು ಬರೆಯಿರಿ? (ಕಠಿಣ)

50. ಬೇರುಗಳನ್ನು ಸಸ್ಯದ ಆಧಾರ ಎಂದು ಯಾಕೆ ಕರೆಯಲಾಗುತ್ತದೆ? (ಸುಲಭ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು)

51. ಬೇರುಗಳು ನಮಗೆ ಹೇಗೆ ಉಪಯುಕ್ತವೆಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ? (ಕಠಿಣ)

52. ಪಾಠದಲ್ಲಿ ಮಾಡಲಾದ ಮೂರು ಬೇರುಗಳ ಪ್ರಯೋಗಗಳನ್ನು ಮತ್ತು ನಿಮ್ಮ ಗಮನ ಹರಿಸಿ

ವಿವರಿಸಿ? (ಸಾಧಾರಣ)

53. ಬೇರುಗಳ ನಾಲ್ಕು ಉಪಯೋಗಗಳನ್ನು ಮತ್ತು ಪ್ರತಿ ಉಪಯೋಗಕ್ಕೆ ಉದಾಹರಣೆಗಳನ್ನು

ಬರೆಯಿರಿ? (ಕಠಿಣ)

54. ಅಪ್ಪು ಸಸ್ಯ, ಆಲದ ಮರ ಮತ್ತು ಮರಳು ಪ್ರದೇಶದ ಸಸ್ಯಗಳ ವಿಶಿಷ್ಟ ಬೇರುಗಳನ್ನು ವಿವರಿಸಿ?

(ಕಠಿಣ)

55. ಬೇರುಗಳು ಸಸ್ಯಕ್ಕೆ ಹೇಗೆ ಆಧಾರವನ್ನಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ವಿವರಿಸಿ? (ಕಠಿಣ)

56. ಬಾಲ್ಸಮ್ ಸಸ್ಯದ ಪ್ರಯೋಗದಿಂದ ನೀವು ಏನು ಕಲಿತಿರಿ? (ಸಾಧಾರಣ)

57. ರೂಪಾಂತರಗೊಂಡ ಬೇರುಗಳು ಎಂದರೇನು? ಆಹಾರ ಮತ್ತು ಔಷಧಿ ಉದ್ದೇಶಕ್ಕಾಗಿ ಬಳಸುವ

ಉದಾಹರಣೆಗಳನ್ನು ನೀಡಿ? (ಸುಲಭ)

58. ಪರಿಸರ ಸಮತೋಲನದಲ್ಲಿ ಬೇರುಗಳು ಹೇಗೆ ಸಹಾಯ ಮಾಡುತ್ತವೆ? (ಕಠಿಣ)

59. ಪಾಠದಲ್ಲಿ ವಿವರಿಸಲಾದ ಬೇರುಗಳ ವಿಭಿನ್ನ ಬಗೆಯನ್ನು ಪಟ್ಟಿ ಮಾಡಿ ವಿವರಿಸಿ? (ಸಾಧಾರಣ)

60. ಸಸ್ಯಗಳ ಮತ್ತು ಮಾನವರ ಜೀವನದಲ್ಲಿ ಬೇರುಗಳ ಮಹತ್ವವನ್ನು ವಿವರಿಸಿ? (ಕಠಿಣ)

61. ಸಸ್ಯದ ಚಿತ್ರ ಬಿಡಿಸಿ , ಬಣ್ಣ ಹಾಕಿ ಭಾಗಗಳನ್ನು ಗುರುತಿಸಿ. (ಸುಲಭ)

ಪಾಠ 5: ಪುಷ್ಪರಾಗ

ಕಲಿಕಾ ಫಲಗಳು :-

ಈ ಪಾಠವನ್ನು ಅಧ್ಯಯನ ಮಾಡಿದ ನಂತರ, ವಿದ್ಯಾರ್ಥಿಗಳು ಈ ಕೆಳಗಿನ ವಿಚಾರಗಳನ್ನು ತಿಳಿದುಕೊಳ್ಳುವರು.

1. ಹೂವುಗಳನ್ನು ಗುರುತಿಸುವುದು ಮತ್ತು ಅವಲೋಕನ ಮಾಡುವುದು:
    - ಸುತ್ತಲಿನ ವಿವಿಧ ಹೂವುಗಳನ್ನು ಸಂಗ್ರಹಿಸಿ ಅವುಗಳ ಆಕಾರ, ಬಣ್ಣ, ಪುಷ್ಪಪತ್ರಗಳ ಸಂಖ್ಯೆ ಮತ್ತು ಸುವಾಸನೆಯ ಬಗ್ಗೆ ವಿವರಿಸಲು ಸಾಧ್ಯವಾಗುವುದು.
2. ಹೂವುಗಳ ಋತುಮಾನದ ಅವಧಿ ತಿಳಿದುಕೊಳ್ಳುವುದು:
    - ಬೇಸಿಗೆ, ಮಳೆ ಮತ್ತು ಹಿಮಮಾನದ ಹೂವುಗಳ ಋತುವಿನ ಪ್ರಕಾರ ಗುರುತಿಸುವುದು (ಉದಾಹರಣೆಗೆ: ಬೇಸಿಗೆಗೆ ಮಲ್ಲಿಗೆ ಮಳೆಗಾಲದಲ್ಲಿ ಡೇರ (ಡೇಲಿಯಾ), ಚಳಿಗಾಲದಲ್ಲಿ ಸೇವಂತಿಗೆ ಹೂವುಗಳು)..
3. ಹೂವುಗಳ ಉಪಯೋಗಗಳ ಅರಿವು
    - ಹೂವುಗಳ ಸಾಂಸ್ಕೃತಿಕ ಮತ್ತು ಪರಂಪರೆಯ ಮಹತ್ವವನ್ನು ಅರಿತುಕೊಳ್ಳುವುದು.
4. ಹೂವುಗಳ ವಿನ್ಯಾಸಗಳನ್ನು ಗುರುತಿಸುವುದು ಮತ್ತು ಕಲಾತ್ಮಕ ಪ್ರಾತಿನಿಧ್ಯ ಅರಿಯುವರು
    - ಉಡುಪು, ಪಾತ್ರೆ, ಹೂವಿನ ತಾಳೆ ಮುಂತಾದವುಗಳಲ್ಲಿ ಹೂವುಗಳ ವಿನ್ಯಾಸಗಳನ್ನು ಗುರುತಿಸುವುದು.
    - ನೈಜ ಹೂವುಗಳಿಂದ ಅಥವಾ ಬಣ್ಣದ ಕಾಗದದಿಂದ ಹೂವುಗಳನ್ನು ಮಾಡಿ ಹೃದಯಪೂರ್ವಕ ಶುಭಾಶಯ ಪತ್ರಗಳನ್ನು ತಯಾರಿಸಲು ಶ್ರಮಿಸುವುದು.
5. ಹೂವಿನ ಕೃಷಿ ಮತ್ತು ಮಾರಾಟದ ಕುರಿತು ಅರಿವು:
    - ಹೂವು ಮಾರಾಟದ ಸ್ಥಳದಲ್ಲಿ ಬಳಸುವ ಕಾಗದ, ಮೊಳ, ಮಾರು ಮುಂತಾದ ಅನೌಪಚರಿಕ ಅಳತೆಗಳನ್ನು ತಿಳಿದುಕೊಳ್ಳುವುದು.
    - ಹೂವಿನ ಬೆಲೆ ಮತ್ತು ಪ್ರಮಾಣದ ಸರಳ ಗಣಿತಗಳನ್ನು ಮಾಡಬಹುದಾಗಿರುವುದು.
6. ಹೂವುಗಳ ವಿಶೇಷ ಮಾಹಿತಿ ತಿಳಿದುಕೊಳ್ಳುವುದು.
    - ರಫ್ಲೇಸಿಯಾ ಹೂವು (ಅತ್ಯಂತ ದೊಡ್ಡದು), ವುಲ್ಫಿಯಾ (ಅತ್ಯಂತ ಸಣ್ಣದು), ಲಾಂಟಾನಾ (ಅತ್ಯಂತ ಸುಂದರ ಹೂವುಗಳಲ್ಲಿ ಒಂದು) ಕುರಿತು ತಿಳಿದುಕೊಳ್ಳುವುದು.
    - ಕರ್ನಾಟಕವು ಹೂವಿನ ಕೃಷಿಯಲ್ಲಿ ಪ್ರಮುಖ ರಾಜ್ಯವಾಗಿರುವುದನ್ನು ಮತ್ತು ವಿದೇಶಗಳಿಗೆ ಹೂವು ರಫ್ತು ಮಾಡುವುದನ್ನು ಅರಿತುಕೊಳ್ಳುವುದು.
7. ಪರಿಸರ ಮತ್ತು ಸೌಂದರ್ಯ ಅರಿವು:

- ಮನೆಯಲ್ಲಿ ಅಥವಾ ಶಾಲೆಯ ಕೈತೋಟದಲ್ಲಿ ಹೂವಿನ ಸಸ್ಯಗಳನ್ನು ನೆಡುವ ಅಭಿರುಚಿಯನ್ನು ಬೆಳೆಸಿಕೊಳ್ಳುವುದು.
- ಪ್ರಕೃತಿ ಮತ್ತು ಕಲೆಯಲ್ಲಿ ಹೂವುಗಳ ಸೌಂದರ್ಯವನ್ನು ಮೆಚ್ಚಿಕೊಳ್ಳುವುದು.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ಮಲ್ಲಿಗೆ ಹೂವಿನ ಬಣ್ಣ.
   ಎ) ಕೆಂಪು ಬಿ) ಹಸಿರು ಸಿ) ಬಿಳಿ ಡಿ) ಕಪ್ಪು
2. ಹೂವುಗಳ ರಾಜ
   ಎ) ಸಂಪಿಗೆ ಬಿ) ಸುಗಂಧರಾಜ ಸಿ) ಗುಲಾಬಿ ಡಿ) ಕೇದಗೆ
3. ಮಲ್ಲಿಗೆ ಹೂ ಯಾವ ಕಾಲದಲ್ಲಿ ಬಿಡುತ್ತದೆ.
   ಎ) ಬೇಸಿಗೆ ಬಿ) ಚಳಿಗಾಲ ಸಿ) ಮಳೆಗಾಲ ಡಿ) ಎಲ್ಲಾ ಕಾಲದಲ್ಲೂ
4. ದಾಸವಾಳವು ಯಾವುದರಲ್ಲಿ ಬಿಡುತ್ತದೆ.
   ಎ) ಗಿಡ ಬಿ) ಬಳ್ಳಿ ಸಿ) ಪೊದೆ ಡಿ) ಮರ
5. ಮುಳ್ಳನ್ನು ಹೊಂದಿರುವ ಹೂ ಇದಾಗಿದೆ.
   ಎ) ಸಂಪಿಗೆ ಬಿ) ಚೆಂಡು ಹೂ ಸಿ) ಗುಲಾಬಿ ಡಿ) ದಾಸವಾಳ

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ. (ಸುಲಭ)

6. ಮಲ್ಲಿಗೆ ಹೂವುಗಳು ಮುಖ್ಯವಾಗಿ _________ ಋತುವಿನಲ್ಲಿ ಕಂಡುಬರುತ್ತವೆ.
7. ಡೇಲಿಯಾ ಹೂವುಗಳು _________ ಋತುವಿನಲ್ಲಿ ಲಭ್ಯವಿರುತ್ತವೆ.
8. _________ ಅನ್ನು ಹೂವಿನ ವ್ಯಾಪಾರಿಗಳು ಅನೌಪಚಾರಿಕ ಅಳತೆಗೋಲಾಗಿ ಬಳಸುತ್ತಾರೆ.
9. _________ ಜಗತ್ತಿನಲ್ಲಿ ಅತಿದೊಡ್ಡ ಹೂವಾಗಿರುತ್ತದೆ.
10. ಹೂಗಳನ್ನು ಮಾರುವ ವ್ಯಕ್ತಿಗೆ ಹೀಗೆಂದು ಕರೆಯುವರು _______.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ.(ಸುಲಭ)

11. ಎಲ್ಲಾ ಹೂವುಗಳು ಒಂದೇ ಋತುವಿನಲ್ಲಿ ಅರಳುತ್ತವೆ. ________
12. ಹೂವುಗಳನ್ನು ಕೇವಲ ಪೂಜೆಗೆ ಮಾತ್ರ ಬಳಸಲಾಗುತ್ತದೆ.__________
13. ಎಂಟು ಅಡಿ (yard) ಒಂದು ಘನಕ್ಕಿಂತ ದೊಡ್ಡದಾಗಿರುತ್ತದೆ. _____________
14. ಗುಲ್ಕನ್ ತಯಾರಿಕೆಗೆ ಗುಲಾಬಿ ಹೂವಿನ ಎಸಳುಗಳನ್ನು ಬಳಸುತ್ತಾರೆ._______
15. ವುಲ್ಫಿಯಾ (Wolffia) ಅತಿದೊಡ್ಡ ಹೂವಾಗಿದೆ. ___________

16. ಹೊಂದಿಸಿ ಬರೆಯಿರಿ.(ಸುಲಭ)

'A'	'B'
ಅ) ಮಲ್ಲಿಗೆ	ಅ) ಅಔಪಚಾರಿಕ ಅಳತೆಗೋಲು
ಆ) ಸೇವಂತಿಗೆ	ಆ) ಬಿಸಿಲು ಋತುವಿನ ಹೂವು
ಇ) ಹೂವಿನ ವ್ಯಾಪಾರಿ	ಇ) ಅತಿದೊಡ್ಡ ಹೂ
ಈ) ರಫ್ಲೇಸಿಯಾ	ಈ) ಹೂಗಳನ್ನು ಮಾರುವವರು
ಉ) ಮಾರು	ಉ) ಚಳಿಗಾಲದ ಹೂವು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

17. ಬೇಸಿಗೆ ಕಾಲದಲ್ಲಿ ಹೂ ಬಿಡುವ ಮರವೊಂದನ್ನು ಹೆಸರಿಸಿ.
18. ಸುಗಂಧಕ್ಕೆ ಪ್ರಸಿದ್ಧವಾದ ಹೂ ಯಾವುದು?
19. ಹೂವಿನ ಮಾಲೆಗಳನ್ನು ಅಳೆಯಲು ಹೂವಿನ ವ್ಯಾಪಾರಿಗಳು ಏನನ್ನು ಬಳಸುತ್ತಾರೆ?
20. ನೀರಿನಲ್ಲಿ ಬೆಳೆಯುವ ಹೂವೊಂದನ್ನು ಹೆಸರಿಸಿ.
21. ಶಾಹಿನಾ ಪ್ರಕಾರ ಒಂದು ಮೊಳ ಮಲ್ಲಿಗೆ ಮಾಲೆಯ ಬೆಲೆ ಎಷ್ಟು?
22. ಜಗತ್ತಿನಲ್ಲಿ ಅತ್ಯಂತ ಚಿಕ್ಕ ಹೂ ಯಾವುದು?
23. ಜಗತ್ತಿನಲ್ಲಿ ಅತ್ಯಂತ ದೊಡ್ಡ ಹೂ ಯಾವುದು?
24. ಒಂದು ಮಾರಿನಲ್ಲಿ ಎಷ್ಟು ಮೊಳಗಳು ಇರುತ್ತವೆ?
25. ಹೂವುಗಳ ವಿನ್ಯಾಸ ಮುದ್ರಿತವಿರುವ ವಸ್ತುವೊಂದು ಹೆಸರಿಸಿ.
26. ಪೂಜೆಗೆ ಬಳಸುವ ಹೂವೊಂದು ಹೆಸರಿಸಿ?
27. ಸುಗಂಧ ದ್ರವ್ಯ ತಯಾರಿಸಲು ಹೂವುಗಳ ಯಾವ ಭಾಗವನ್ನು ಬಳಸುತ್ತಾರೆ?
28. ಗುಲ್ಕನ್ ತಯಾರಿಸಲು ಯಾವ ಹೂವನ್ನು ಬಳಸುತ್ತಾರೆ?
29. ಜೇನುನೊಣಗಳು ಯಾವ ಹೂವಿನಿಂದ ಹುಳಿಶ್ರಾವ್ಯ (ಮಕರಂದ) ಸಂಗ್ರಹಿಸುತ್ತವೆ?
30. ಭಾರತದಲ್ಲಿ ಶೇಕಡಾ 75% ಹೂವುಗಳನ್ನು ಬೆಳೆಯುವ ರಾಜ್ಯ ಯಾವದು?
31. ಹೂವಿನ ತೋಟದಲ್ಲಿ ನಾವು ಏನು ಮಾಡಬಾರದು?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

32. ಯಾವುದಾದರೂ ಎರಡು ಹೂವಿನ ಹೆಸರುಗಳನ್ನು ಮತ್ತು ಅವು ಯಾವ ಋತುವಿನಲ್ಲಿ ಹೂ ಬಿಡುತ್ತವೆ ಎಂಬುದನ್ನು ಬರೆಯಿರಿ. (ಸುಲಭ)
33. ಹೂವಿನ ದೈನಂದಿನ ಉಪಯೋಗಗಳನ್ನು ಬರೆಯಿರಿ. (ಸುಲಭ)
34. ಹೂವಿನ ಮಾಲೆಗಳನ್ನು ಅಳೆಯಲು ಬಳಸುವ ಎರಡು ಅನೌಪಚಾರಿಕ ಅಳತೆ ಪರಿಮಾಣಗಳನ್ನು ಬರೆಯಿರಿ. (ಸಾಧಾರಣ)
35. ಸಾರ್ವಜನಿಕ ಉದ್ಯಾನವನಗಳಲ್ಲಿ ಹೂವುಗಳನ್ನುಕೀಳಬಾರದು ಏಕೆ? (ಸಾಧಾರಣ)
36. ಮಾಲೆ ಮಾಡಲು ಬಳಸುವ ಎರಡು ಹೂವಿನ ಹೆಸರುಗಳನ್ನು ಬರೆಯಿರಿ. (ಸುಲಭ)
37. “ಮೊಳದ ಉದ್ದ” ಎಂದರೆ ಏನು? ಹೂವಿನ ವ್ಯಾಪಾರಿಗಳು ಇದನ್ನು ಹೇಗೆ ಬಳಸುತ್ತಾರೆ? (ಸಾಧಾರಣ)
38. ಒಣ ಹೂವುಗಳನ್ನು ರಚನಾತ್ಮಕವಾಗಿ ಬಳಸುವ ಎರಡು ವಿಧಾನಗಳನ್ನು ಬರೆಯಿರಿ. (ಕಠಿಣ)
39. ಹೂವಿನ ವಿನ್ಯಾಸವಿರುವ ಎರಡು ವಸ್ತುಗಳ ಹೆಸರುಗಳನ್ನು ಬರೆಯಿರಿ. (ಕಠಿಣ)
40. ಹೂವಿನ ವ್ಯಾಪಾರಿ ಹೂವಿನಿಂದ ಏನು ಮಾಡುತ್ತಾರೆ? (ಕಠಿಣ)
41. ಜೇನುನೊಣಗಳು ಹೂವಿನಿಂದ ಏನು ಪಡೆಯುತ್ತವೆ? (ಸುಲಭ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

42. ಮೂರು ಹೂವಿನ ಹೆಸರುಗಳನ್ನು ಮತ್ತು ಅವು ಹೂ ಬಿಡುವ ಋತುಗಳನ್ನು ಹೆಸರಿಸಿ. (ಸುಲಭ)
43. ನಮ್ಮ ಜೀವನದಲ್ಲಿ ಹೂವಿನ ಮೂರು ಉಪಯೋಗಗಳನ್ನು ವಿವರಿಸಿ. (ಸುಲಭ)
44. ಮೊಳಮತ್ತು ಗಜದ ನಡುವಿನ ವ್ಯತ್ಯಾಸವನ್ನು ಉದಾಹರಣೆಯೊಂದಿಗೆ ವಿವರಿಸಿ. (ಕಠಿಣ)
45. ಹೂವಿನ ವ್ಯಾಪಾರಿಗಳು ಹೂವನ್ನು ಮಾರುವಾಗ ಅನೌಪಚಾರಿಕ ಅಳತೆಯನ್ನು ಹೇಗೆ ಬಳಸುತ್ತಾರೆ? (ಸುಲಭ)
46. "ಹೂವಿನ ವ್ಯಾಪಾರಿಯ ಹಾಡು" ಕವನದಿಂದ ಮೂರು ಸಾಲುಗಳನ್ನು ಬರೆಯಿರಿ. (ಕಠಿಣ)
47. ಉದ್ಯಾನವನ ಭೇಟಿಯ ಸಮಯದಲ್ಲಿ ಶಿಕ್ಷಕರು ಮಕ್ಕಳಿಗೆ ಏನು ತಿಳಿಸಿದರು? (ಸಾಧಾರಣ)
48. ಮನೆ ಮತ್ತು ಶಾಲೆಯಲ್ಲಿ ಹೂವುಗಳನ್ನು ಬೆಳೆಯ ಬೇಕೆಂದು ಏಕೆ ಹೇಳಲಾಗುತ್ತದೆ? (ಸಾಧಾರಣ)
49. ನೀವು ತಿಳಿದಿರುವ ಹೂಗಳ ಮೂರು ಆಸಕ್ತಿದಾಯಕ ಮಾಹಿತಿ ಬರೆಯಿರಿ. (ಸಾಧಾರಣ)

50. “ನಾನು ತೋಟದಲ್ಲಿದ್ದೇನೆ” ಕವನದಲ್ಲಿ ಹೂವಿನ ಮಹತ್ವದ ಬಗ್ಗೆ ಏನು ಹೇಳಲಾಗಿದೆ? (ಕಠಿಣ)

51. ನೀರಿನಲ್ಲಿ ಬೆಳೆಯುವ ಮೂರು ಹೂವಿನ ಹೆಸರುಗಳನ್ನು ಬರೆಯಿರಿ. (ಸಾಧಾರಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು)

52. ಕೆಳಗಿನ ಪಟ್ಟಿಯನ್ನು ಗಮನಿಸಿ ಪೂರ್ತಿ ಮಾಡಿ (ಉದಾಹರಣೆ): (ಕಠಿಣ)

ಹೂವಿನ ಹೆಸರು	**ಗಿಡ/ಬಳ್ಳಿ/ಮರ**	**ಋತು**	**ಉಪಯೋಗ**
ಮಲ್ಲಿಗೆ	ಗಿಡ		ಮಾಲೆ, ಪೂಜೆ
ಡೇಲಿಯಾ		ಮಳೆಗಾಲ	ಅಲಂಕಾರ
ತಾವರೆ	ನೀರಿನಗಿಡ	ಚಳಿಗಾಲ	

53. ಹೂವಿನ ಲಕ್ಷಣಗಳ ಪಟ್ಟಿಯನ್ನು ಭರ್ತಿ ಮಾಡಿ (ಉದಾಹರಣೆ) (ಕಠಿಣ)

ಹೂವು	**ಬಣ್ಣ**	**ಆಕಾರ**	**ಹೂವಿನ ದಳಗಳ ಸಂಖ್ಯೆ**	**ಸುಗಂಧ**
ಗುಲಾಬಿ		ಗೋಳ	ಹಲವಾರು	ಹೌದು
ತಾವರೆ	ಬಿಳಿ	ಗೋಳ		ಹೌದು
ದಾಸವಾಳ	ಕೆಂಪು	ಗೋಳವಾದ	ಹಲವಾರು	

54. ಕರ್ನಾಟಕದ ಹೂವಿನ ಕೃಷಿಯ ಪಾತ್ರದ ಬಗ್ಗೆ ಒಂದು ಚಿಕ್ಕ ಟಿಪ್ಪಣಿ ಬರೆಯಿರಿ. (ಕಠಿಣ)

55. ಶಾಹಿನಾಳ ಕಥೆ ಆಧರಿಸಿ ಹೂವಿನ ಮಾರುಕಟ್ಟೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ವಿವರಿಸಿ. (ಕಠಿಣ)

56. ವಿಚಿತ್ರ ಹೂವಿನ ಬಗ್ಗೆ (ರಫ್ಲೇಸಿಯಾ, ವುಲ್ಫಿಯಾ ಇತ್ಯಾದಿ) ನಾಲ್ಕು ತತ್ವಗಳನ್ನು ಉಲ್ಲೇಖಿಸಿ. (ಕಠಿಣ)

57. ಮಕ್ಕಳು ಮನೆ ಮತ್ತು ಶಾಲೆಯಲ್ಲಿ ಹೂವುಗಳನ್ನು ಸೃಜನಾತ್ಮಕವಾಗಿ ಹೇಗೆ ಬಳಸಬಹುದು? (ಕಠಿಣ)

58. ಶಿಕ್ಷಕರು ಮತ್ತು ಮಕ್ಕಳು ತೋಟಕ್ಕೆ ಹೋಗಿ ಏನು ಮಾಡಿದರು? ಯಾವ ಸೂಚನೆಗಳನ್ನು ನೀಡಲಾಯಿತು? (ಕಠಿಣ)

59. ಹೂವುಗಳು ಈ ಕ್ಷೇತ್ರಗಳಲ್ಲಿ ಹೇಗೆ ಉಪಯುಕ್ತವೆಂದು ಒಂದು ಟಿಪ್ಪಣಿ ಬರೆಯಿರಿ: (ಕಠಿಣ)

   a. ಪೂಜೆ
   b. ಅಲಂಕಾರ
   c. ಔಷಧ
   d. ಜೇನುನೊಣಗಳ

60. ನಿನಗಿಷ್ಟವಾದ ಹೂವಿನ ಚಿತ್ರ ಬಿಡಿಸಿ ಬಣ್ಣ ಹಾಕಿ ಹಾಗೂ ಭಾಗಗಳನ್ನು ಗುರುತಿಸಿ (ಸುಲಭ)

ಪಾಠ 6: ಹನಿ ಗೂಡಿದರೆ .....

ಕಲಿಕಾ ಫಲಗಳು :-

1. ಜಲಚಕ್ರದ (Water Cycle) ಬಗ್ಗೆ ವಿವರಿಸಲು ಸಮರ್ಥರಾಗುವರು.

- ನೀರು ಬಾಷ್ಪೀಕರಣ, ಸಂಕುಚಿತಗೊಳ್ಳುವಿಕೆ, ಮೋಡಗಳ ರಚನೆ ಮತ್ತು ಮಳೆ ಬಿರುಸು ವಿಧಾನಗಳ ಬಗ್ಗೆ ತಿಳಿದು ಕೊಳ್ಳುತ್ತಾರೆ.

2. ನಿತ್ಯ ಜೀವನದಲ್ಲಿ ಬಳಸುವ ನೀರಿನ ಪ್ರಮಾಣವನ್ನು ಅಂದಾಜಿಸಲು ಅಸಂಪ್ರದಾಯಿಕ (ಅನೌಪಚಾರಿಕ) ಮಾಪನಗಳನ್ನು ಬಳಸಬಹುದು.
3. ಕುಡಿಯಲು ಅನುಕೂಲಕರವಾದ ನೀರಿನ ಮೂಲಗಳನ್ನು ಗುರುತಿಸಿ ವರ್ಗೀಕರಿಸಲು ಮತ್ತು ಪಟ್ಟಿ ಮಾಡಲು ಸಶಕ್ತರಾಗುತ್ತಾರೆ.
4. ನೀರಿನ ಕೊರತೆ ಮತ್ತು ಅರಣ್ಯ ನಾಶದಿಂದ ಉಂಟಾಗುವ ಸಮಸ್ಯೆಗಳ ಪಟ್ಟಿಮಾಡಬಹುದು..
5. ಬಾಷ್ಪೀಕರಣದ ಪ್ರಕ್ರಿಯೆಯನ್ನು ಸರಳ ಪ್ರಯೋಗಗಳಿಂದ ತಿಳಿದುಕೊಳ್ಳುತ್ತಾರೆ (ಮಾದರಿ: ನೀರು ತುಂಬಿದ ಪ್ಲಾಸ್ಟಿಕ್ ಬ್ಯಾಗ್).
6. ನೀರಿನಬಳಕೆ, ದುರ್ಬಳಕೆ ಮತ್ತು ವ್ಯರ್ಥತೆ ಕುರಿತು ಸಿದ್ಧಾಂತಗಳನ್ನು ಅರಿತುಕೊಳ್ಳುತ್ತಾರೆ ಮತ್ತು ತನ್ನ ಇಚ್ಛಾಶಕ್ತಿಯಿಂದ ನೀರನ್ನು ಉಳಿಸುವ ಕ್ರಮಗಳನ್ನು ಸೂಚಿಸಬಹುದು.
7. ಮಳೆ ನೀರು ಸಂಗ್ರಹಣೆಯ ಅಗತ್ಯತೆ ಮತ್ತು ಬಳಸುವ ವಿಧಾನಗಳನ್ನು ತಿಳಿದುಕೊಳ್ಳುತ್ತಾರೆ.
8. ನೀರಿನ ಅವಶ್ಯಕತೆ, ಅದರ ಉಪಯೋಗ ಮತ್ತು ಅದನ್ನು ಉಳಿಸುವ ಕುರಿತು ಜಾಗೃತಿ ಪಡೆಯುತ್ತಾರೆ.
9. ನೀರಿನ ಲಭ್ಯತೆ ಮತ್ತು ವಿಶ್ವದ ನೀರಿನ ಪ್ರಮಾಣದ ಕುರಿತು ಮೂಲಭೂತ ಅರಿವು ಮೂಡಿಸಿಕೊಳ್ಳುತ್ತಾರೆ.
10. ಪರಿಸರದಲ್ಲಿ ನೀರು ಹೇಗೆ ಸಂಚರಿಸುತ್ತದೆ ಮತ್ತು ಜೀವಿಗಳಿಗೆ ಅದರ ಮಹತ್ವವನ್ನು ತಿಳಿದುಕೊಳ್ಳುತ್ತಾರೆ.
11. ನೀರು ಪೋಲಾಗದಂತೆ ಮತ್ತು ದುರ್ಬಳಕೆ ಯಾಗದಂತೆ ಮನೆಯಲ್ಲಿ , ಶಾಲೆಯಲ್ಲಿಯೂ ಕ್ರಮಕೈಗೊಳ್ಳಬಹುದು..

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ

1. ಭೂಮಿಯ ಮೇಲೆ ಎಷ್ಟು ಭಾಗ ನೀರು ತುಂಬಿದೆ

ಎ) 4 ಬಿ) 1 ಸಿ) 2 ಡಿ) 3

2. ಆಕಾಶದಲ್ಲಿ ಹನಿಗಳೆಲ್ಲ ಒಂದು ಗೂಡಿದರೆ ಏನಾಗುತ್ತದೆ ?

ಎ) ಮೋಡವಾಗುತ್ತದೆಬಿ) ಮಳೆಯಾಗುತ್ತದೆ ಸಿ) ಆವಿಯಾಗುತ್ತದೆ ಡಿ) ಗುಡುಗು ಬರುತ್ತದೆ.

3. ನಮ್ಮ ದೇಹವು ಶೇಕಡ ಎಷ್ಟು ಭಾಗ ನೀರಿನಿಂದ ಕೂಡಿದೆ ?

ಎ) 90% ಬಿ) 70% ಸಿ) 50% ಡಿ) 20%

4. ನೀರಿಲ್ಲದೆ ನಾವು ಎಷ್ಟು ದಿನ ಬದುಕಬಹುದು ?

ಎ) 10 ದಿನ ಬಿ) 2 ದಿನ ಸಿ) 3 ದಿನ ಡಿ) 1 ದಿನ

5. ನೀರಿನ ಮೂಲಗಳು ಯಾವುವು ?

ಎ) ನದಿ ಬಿ) ಬಾವಿ ಸಿ) ಕೆರೆ ಡಿ) ಎಲ್ಲವೂ

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ(ಸುಲಭ)

6. ನೀರು ದ್ರವದಿಂದ ವಾಯುರೂಪಕ್ಕೆ ಬದಲಾಗುವುದು, ಈಪ್ರಕ್ರಿಯೆಯನ್ನು __________ ಎನ್ನುತ್ತಾರೆ.
7. ನೀರಿನ ವಾಯುಶೀತಗೊಳ್ಳುವಾಗ, ಇದುಸಣ್ಣ ನೀರಿನ ಬುಗ್ಗೆಗಳಾಗಿ ಬದಲಾಗುತ್ತದೆ, ಇದನ್ನು __________ ಎನ್ನುತ್ತಾರೆ.
8. ನೀರಿನ ಆವೀಕರಣ, ಘನಿಕರಣ ಹಾಗೂ ಮಳೆ ರೂಪದಲ್ಲಿ ಬೀಳುವ ಪ್ರಕ್ರಿಯೆಯ ಸಮಗ್ರ ಚಕ್ರವನ್ನು __________ ಎನ್ನುತ್ತಾರೆ.
9. ಭೂಮಿಯ ನೀರಿನಲ್ಲಿ ಕೇವಲ __________ ಶೇಕಡಾ ಮಾತ್ರ ಶುದ್ಧನೀರಾಗಿ ಲಭ್ಯವಿದೆ.
10. ಪಾತ್ರೆತೊಳೆದ ಹಾಗೂ ಬಟ್ಟೆತೊಳೆದ ನೀರನ್ನು __________ ನಾಟಿಮಾಡಲು ಬಳಸಬಹುದು.
11. __________ ಎಂಬುದು ಮಳೆನೀರನ್ನುಸಂಗ್ರಹಿಸಿ, ನಂತರ ಬಳಕೆಗೆ ಉಳಿಸುವ ಪ್ರಕ್ರಿಯೆಯಾಗಿದೆ.
12. ಸಮುದ್ರದ ನೀರಿನಲ್ಲಿ __________ ಇರುವುದರಿಂದ ಅದುಕುಡಿಯಲು ಯೋಗ್ಯವಲ್ಲ.
13. ಗಾಳಿಯಲ್ಲಿರುವ ನೀರು __________ ರೂಪದಲ್ಲಿರುತ್ತದೆ.
14. ಹಿಮನದಿಗಳು ಹಾಗೂ ಹಿಮಪರ್ವತಗಳಲ್ಲಿಸಿಗುವ ನೀರಿನ ಘನರೂಪವನ್ನು __________ ಎನ್ನುತ್ತಾರೆ.
15. ನೀರು ಆವಿಯಾಗಿ ಹೋಗಲು __________ ರಶ್ಮಿಯ ಉಷ್ಣತೆಯು ಕಾರಣವಾಗುತ್ತದೆ.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ(ಸುಲಭ)

16. ಜಲಚಕ್ರದಲ್ಲಿ ಅವಶೋಷಣೆ, ಸಂಕ್ಷೇಪಣ ಹಾಗೂ ಮಳೆಪಾತ ಒಳಗೊಂಡಿರುತ್ತವೆ.______
17. ಭೂಮಿಯ ಎಲ್ಲಾ ನೀರು ಶುದ್ಧವಾಗಿದ್ದು ಕುಡಿಯಲು ಯೋಗ್ಯವಾಗಿದೆ. _____
18. ಮಳೆನೀರಿನ ಸಂಗ್ರಹಣೆ ನೀರನ್ನು ಸಂರಕ್ಷಿಸಲು ಸಹಾಯ ಮಾಡುತ್ತದೆ. _____
19. ನೀರಿನ ವಾಯು ರೂಪವು ನೀರಿನ ದ್ರವಸ್ಥಿತಿ ಆಗಿದೆ. _____
20. ನೀರಿನ ನಾಶವು ನೀರಿನ ಲಭ್ಯತೆಗೆ ಯಾವುದೇಪರಿಣಾಮ ನೀಡುವುದಿಲ್ಲ. ______
21. ಆಲಿಕಲ್ಲುಗಳು ಮಳೆಸಮಯದಲ್ಲಿ ಬೀಳುವ ಸಣ್ಣ ಹಿಮದ ತುಂಡುಗಳಾಗಿವೆ. _____
22. ಒಮ್ಮೆ ಬಳಸಿದ ನೀರನ್ನು ಪುನಃ ಬಳಸಲಾಗದು. ______
23. ಮಾನವನ ದೇಹವು ಸುಮಾರು 65% ಭಾಗ ನೀರಿನಿಂದ ಕೂಡಿದೆ. _____
24. ನೀರನ್ನು ಬಿಸಿಲಿನಲ್ಲಿ ಕುದಿಸುವುದು ಸಂಕ್ಷೇಪಣೆಯ ಉದಾಹರಣೆ. _____

25. ಶುದ್ಧ ನೀರು ಭೂಮಿಯ ಒಟ್ಟು ನೀರಿನಲ್ಲಿ 90% ಕ್ಕಿಂತ ಹೆಚ್ಚು ಇದೆ. _______

26. **ಹೊಂದಿಸಿ ಬರೆಯಿರಿ (ಸುಲಭ)**

A	B
ಅ) ಭಾಷ್ಪೀಭವನ	a) ನೀರು ವಾಯು ರೂಪಕ್ಕೆ ಬದಲಾಗುವುದು
ಆ) ಆವೀಕರಣ	b) ಬುಂದೆಗಳು ಸೇರಿ ಮೋಡಗಳಾಗುವುದು
ಇ) ಹಿಮ ಮಳೆಯ ತುಣುಕು	c) ಮಳೆ ನೀರನ್ನು ಸಂಗ್ರಹಿಸುವುದು
ಈ) ಮಳೆ ನೀರಿನ ಸಂಗ್ರಹಣೆ	d) ಸಣ್ಣ ಹಿಮದ ತುಂಡುಗಳು
ಉ) ಶುದ್ಧ ನೀರು	e) ಕುಡಿಯಲು ಯೋಗ್ಯವಲ್ಲ
ಊ) ಸಮುದ್ರದ ನೀರು	f) ಭೂಮಿಯಲ್ಲಿ 1% ಕ್ಕಿಂತ ಕಡಿಮೆ
ಋ) ನೀರಿನ ಚಕ್ರ	g) ವಾಯುಸ್ಥಿತಿಯ ನೀರು
ಎ) ನೀರಿನ ವಾಯುರೂಪ	h) ನೀರಿನ ನಿರಂತರ ಚಲನವಲನ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

27. ಜಲಚಕ್ರಕ್ಕೆ ಮುಖ್ಯವಾದ ಉಷ್ಣದ ಮೂಲ ಯಾವದು?
28. ನೀರು ಕುದಿಯುವಾಗ ಏನು ಆಗುತ್ತದೆ?
29. ನೀರು ಆವಿಯಾಗಿ ಪರಿವರ್ತನೆಯಾಗುವ ಪ್ರಕ್ರಿಯೆಯ ಹೆಸರೇನು?
30. ಆವಿ ಮತ್ತೆ ನೀರಿನ ಹನಿಗಳಾಗುವ ಪ್ರಕ್ರಿಯೆಯ ಹೆಸರೇನು?
31. ಕುಡಿಯುವ ನೀರಿನ ಒಂದು ಮೂಲ ಹೆಸರಿಸಿ.
32. ಮನೆಯಲ್ಲಿ ನೀರನ್ನು ಬಳಸುವ ಒಂದು ಉಪಯೋಗವನ್ನು ನೀಡಿ.
33. ಮೋಡಗಳಲ್ಲಿ ಏನು ಇರುತ್ತದೆ?
34. ನಮ್ಮ ದೈನಂದಿನ ಜೀವನದಲ್ಲಿ ಯಾವ ರೂಪದ ನೀರನ್ನು ಬಳಸಲಾಗುತ್ತದೆ – ದ್ರವ, ಘನ, ಅಥವಾ ಅನಿಲ?
35. ಮಳೆನೀರು ಸಂಗ್ರಹಣ ಎಂದರೆ ಏನು?
36. ಭೂಮಿಯಲ್ಲಿ ನಾವು ಬಳಸಬಹುದಾದ ತಾಜಾ ನೀರಿನ ಪ್ರಮಾಣ ಹೆಚ್ಚು ಅಥವಾ ಕಡಿಮೆ (1%ಕ್ಕಿಂತ?)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

37. ನೀರಿನ ಯಾವುದಾದರೂ ಎರಡು ಮೂಲಗಳನ್ನು ಬರೆಯಿರಿ. (ಸುಲಭ)
38. ಶಾಲೆಯಲ್ಲಿ ನೀರನ್ನು ಬಳಸುವ ಎರಡು ಚಟುವಟಿಕೆಗಳನ್ನು ಹೆಸರಿಸಿ. (ಸುಲಭ)
39. ಮೋಡಗಳು ಭಾರವಾದಾಗ ಏನು ಸಂಭವಿಸುತ್ತದೆ? (ಕಠಿಣ)

40. ಮಳೆಯ ನೀರಿನ ಎರಡು ಉಪಯೋಗಗಳನ್ನು ಬರೆಯಿರಿ. (ಸುಲಭ)
41. ನೀರಿನ ಕೊರತೆಯಿಂದ ಉಂಟಾಗುವ ಎರಡು ಸಮಸ್ಯೆಗಳನ್ನು ಸೂಚಿಸಿ. (ಕಠಿಣ)
42. ನಿಮ್ಮ ಮನೆಯಲ್ಲಿ ನೀರನ್ನು ವ್ಯರ್ಥಗೊಳಿಸುವ ಎರಡು ಚಟುವಟಿಕೆಗಳನ್ನು ಬರೆಯಿರಿ.(ಸಾಧಾರಣ)
43. ನೀರನ್ನು ಉಳಿಸುವ ಎರಡು ವಿಧಾನಗಳನ್ನು ಬರೆಯಿರಿ. (ಸಾಧಾರಣ)
44. ನೀರನ್ನು ಕುದಿಸುವಾಗ ನೀವು ಏನು ಗಮನಿಸುತ್ತೀರಿ? (ಸಾಧಾರಣ)
45. ಮನೆಯಲ್ಲಿ ನೀರಿನಿಂದ ಸುಲಭವಾಗುವ ಎರಡು ಕೆಲಸಗಳನ್ನು ಹೇಳಿ. (ಸುಲಭ)
46. ನಿಮ್ಮ ನೆರೆಹೊರೆಯಲ್ಲಿ ಕಂಡುಬರುವ ನೀರಿನ ಎರಡು ಮೂಲಗಳನ್ನು ಹೆಸರಿಸಿ. (ಸುಲಭ)


ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

47. ಜಲಚಕ್ರದ ಮೂರು ಹಂತಗಳೊಂದಿಗೆ ಚಿಕ್ಕ ಟಿಪ್ಪಣಿಯನ್ನು ಬರೆಯಿರಿ.(ಕಠಿಣ)
48. ನೀರಿನ ವಿವಿಧ ರೂಪಗಳು ಯಾವುವು? ಉದಾಹರಣೆಗಳೊಂದಿಗೆ ವಿವರಿಸಿ. (ಸುಲಭ)
49. ಶಾಲೆಯಲ್ಲಿ ನೀರನ್ನು ಹೇಗೆ ಉಳಿಸಬಹುದು? ಮೂರುಅಂಶಗಳನ್ನು ಬರೆ. (ಸಾಧಾರಣ)
50. ಆವೀಭವನ ಪ್ರಕ್ರಿಯೆಯನ್ನು ಒಂದು ಚಟುವಟಿಕೆಯ ಮೂಲಕ ವಿವರಿಸಿ. (ಕಠಿಣ)
51. ಮನೆಯಲ್ಲಿ ಬಳಸಿದ ನೀರನ್ನು ಹೇಗೆ ಮರುಬಳಕೆ ಮಾಡಬಹುದು? ಮೂರು ವಿಧಾನಗಳನ್ನು ವಿವರಿಸಿ. (ಕಠಿಣ)
52. ನೀರನ್ನು ವ್ಯರ್ಥಗೊಳಿಸುವ ಪರಿಣಾಮಗಳು ಯಾವುವು? ಮೂರು ಸಮಸ್ಯೆಗಳನ್ನು ಬರೆ. (ಕಠಿಣ)
53. ಮಳೆಯ ನೀರು ಹೇಗೆ ಉಪಯುಕ್ತವಾಗುತ್ತದೆ? ಮೂರು ಉದಾಹರಣೆಗಳನ್ನು ನೀಡಿ. (ಸುಲಭ)
54. ಮನೆಯಲ್ಲಿ ಹೆಚ್ಚು ನೀರು ಬೇಕಾಗುವ ಮೂರು ಚಟುವಟಿಕೆಗಳನ್ನು ಬರೆಯಿರಿ. (ಸುಲಭ)
55. ನೀರಿನ ಪ್ಲಾಸ್ಟಿಕ್ ಕವಚದ ಪ್ರಯೋಗದಿಂದ ನೀವು ಏನು ಕಲಿತಿರಿ? (ಸುಲಭ)
56. ನೀರಿನ ವ್ಯರ್ಥತೆಯನ್ನು ಕಡಿಮೆ ಮಾಡುವ ಮೂರು ಮಾರ್ಗಗಳನ್ನು ಬರೆಯಿರಿ ? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು)

57. ಜಲಚಕ್ರವನ್ನು ನಿಮ್ಮದೇ ಮಾತುಗಳಲ್ಲಿ ವಿವರಿಸಿ. ಅದರ ಹಂತಗಳನ್ನು ಚಿತ್ರಿಸಿ ಮತ್ತು ಭಾಗಗಳನ್ನು ಗುರುತಿಸಿ.(ಕಠಿಣ)

58. ನೀವು ಮತ್ತು ನಿಮ್ಮ ಕುಟುಂಬ ಪ್ರತಿದಿನದ ಚಟುವಟಿಕೆಗಳಿಗೆ ಬಳಸುವ ನೀರಿನ ಪ್ರಮಾಣದ ಪಟ್ಟಿಯನ್ನು (ಅನೌಪಚಾರಿಕ ಪ್ರಮಾಣದಲ್ಲಿ) ತಯಾರಿಸಿ. (ಕಠಿಣ)
59. ಮನೆಯಲ್ಲಿ ನೀರನ್ನು ಮರುಬಳಕೆ ಮಾಡುವ ನಾಲ್ಕು ಮಾರ್ಗಗಳನ್ನು ಮತ್ತು ಅದು ಯಾಕೆ ಮಹತ್ವವಿದೆ ಎಂಬುದನ್ನು ವಿವರಿಸಿ. (ಕಠಿಣ)
60. ದೈನಂದಿನ ಜೀವನದಲ್ಲಿ ನೀರಿನ ಮಹತ್ವವನ್ನು ವಿವರಿಸಿ. ಕನಿಷ್ಠ ನಾಲ್ಕು ಉಪಯೋಗಗಳನ್ನು ಉದಾಹರಣೆಗಳೊಂದಿಗೆ ಬರೆಯಿರಿ. (ಕಠಿಣ)
61. ನೀರಿನ ವ್ಯರ್ಥತೆಗೆ ಪ್ರಮುಖ ಕಾರಣಗಳು ಯಾವುವು? ಅದನ್ನು ತಡೆಯಲು ನಾಲ್ಕು ಮಾರ್ಗಗಳನ್ನು ಸೂಚಿಸಿ. (ಕಠಿಣ)
62. ಭೂಮಿಯಲ್ಲಿ ಲಭ್ಯವಿರುವ ನೀರಿನ ಪ್ರಕಾರಗಳ ಪಟ್ಟಿಯನ್ನು ತಯಾರಿಸಿ. ಯಾವ ಪ್ರಕಾರ ನಮಗೆ ಹೆಚ್ಚು ಉಪಯುಕ್ತವಾಗುತ್ತದೆ ಮತ್ತು ಏಕೆ ಎಂಬುದನ್ನು ವಿವರಿಸಿ. (ಕಠಿಣ)
63. ಮಳೆನೀರು ಸಂಗ್ರಹಣ ವಿಧಾನವನ್ನು ವಿವರಿಸಿ. ಇದು ನಮಗೆ ಏಕೆ ಮುಖ್ಯ ಎಂಬುದನ್ನು ಬರೆ. (ಕಠಿಣ)
64. ಒಂದು ದಿನ ನಿಮ್ಮ ಮನೆಯಲ್ಲಿ ನೀರಿಲ್ಲದೆ ಇದ್ದರೆ ನೀವು ಎದುರಿಸಬೇಕಾಗುವ ಸಮಸ್ಯೆಗಳು ಯಾವುವು? ಆಗನೀವು ಏನು ಮಾಡುತ್ತೀರಿ? (ಕಠಿಣ)
65. ನಿಮ್ಮ ಗೆಳೆಯನಿಗೆ ನೀರನ್ನು ಉಳಿಸುವ ಮಹತ್ವವನ್ನು ವಿವರಿಸಲು ನಾಲ್ಕು ಅಂಶಗಳನ್ನು ಬರೆಯಿರಿ. (ಕಠಿಣ)
66. ಬಳಸಿದ ನೀರನ್ನು ಮರುಬಳಕೆ ಮಾಡುವ ಲಾಭಗಳು ಯಾವುವು? ದೈನಂದಿನ ಜೀವನದಿಂದ ಉದಾಹರಣೆಗಳನ್ನು ನೀಡಿ. (ಕಠಿಣ)
67. ಈ ಕೆಳಗಿನ ಚಿತ್ರಕ್ಕೆ ಸರಿಯಾದ ಬಣ್ಣ ಹಾಕಿ ಭಾಗಗಳನ್ನು ಗುರುತಿಸಿ. (ಕಠಿಣ)



ಪಾಠ 7: ಜಲಮಾಲಿನ್ಯ - ಸಂರಕ್ಷಣೆ

ಕಲಿಕಾ ಫಲಗಳು:-

1. ನೀರಿನ ಮಾಲಿನ್ಯದ ಕಾರಣಗಳನ್ನು ಅರಿತು ಕೊಳ್ಳುವುದು ಮತ್ತು ಮಣ್ಣಿನ ಕಣಗಳು, ಸಾಬೂನು, ಕೃಷಿ ರಾಸಾಯನಿಕಗಳು ಮತ್ತು ಕೈಗಾರಿಕಾ ತ್ಯಾಜ್ಯಗಳು ಮುಂತಾದ ಮೂಲಗಳನ್ನು ಗುರುತಿಸುವುದು.
2. ನೀರಿನ ಮಾಲಿನ್ಯದಿಂದ ಮಾನವನ ಆರೋಗ್ಯ, ಸಸ್ಯ ಮತ್ತು ಪ್ರಾಣಿಗಳ ಮೇಲೆ ಆಗುವ ಹಾನಿ ತಿಳಿದುಕೊಳ್ಳುವುದು.
3. ನೀರಿನ ಹಾರುವಿಕೆಯಿಂದ (ಡಿಹೈಡ್ರೇಶನ್) ರೋಗಿಗಳಿಗೆ ಆಗುವ ದುರ್ಬಲತೆಯನ್ನು ತಿಳಿದುಕೊಳ್ಳುವುದು. ಜಲಸಂಚಯ ದ್ರಾವಕ (O.R.S.) ತಯಾರಿಸುವ ವಿಧಾನ ಮತ್ತು ಬಳಕೆ ಕಲಿಯುವುದು.
4. ತಮ್ಮ ಸ್ಥಳೀಯತೆಯಲ್ಲಿ ಸುರಕ್ಷಿತ ಮತ್ತು ಅಸುರಕ್ಷಿತ ನೀರಿನ ಮೂಲಗಳನ್ನು ಗುರುತಿಸಿ, ಮಾಲಿನ್ಯದ ಕಾರಣಗಳನ್ನು ಹಿರಿಯರು ಅಥವಾ ಶಿಕ್ಷಕರೊಂದಿಗೆ ಚರ್ಚಿಸುವುದು.
5. ಮಾಲಿನ್ಯಗೊಂಡ ನೀರನ್ನು ಶುದ್ಧಗೊಳಿಸುವ ಸರಳ ವಿಧಾನಗಳನ್ನು ತಿಳಿದುಕೊಳ್ಳುವುದು ಮತ್ತು ಕುಡಿಯುವ ಮೊದಲು ನೀರನ್ನು ಕುದಿಸುವ ಮಹತ್ವ.
6. ಮನೆಯಲ್ಲಿ, ಶಾಲೆಯಲ್ಲಿ ಮತ್ತು ಸಮುದಾಯದಲ್ಲಿ ನೀರಿನ ಮಾಲಿನ್ಯ ತಡೆಯುವ ಮಹತ್ವವನ್ನು ತಿಳಿದುಕೊಳ್ಳುವುದು.
7. ಕೈಗಾರಿಕೆಗಳಲ್ಲಿ ನೀರನ್ನು ಹೇಗೆ ಬಳಸಲಾಗುತ್ತದೆ ಮತ್ತು ಅದರ ಪರಿಣಾಮವಾಗಿ ನೀರಿನ ಮಾಲಿನ್ಯ ಹೇಗೆ ಉಂಟಾಗುತ್ತದೆ ಎಂದು ಗಮನಿಸಿ ಚರ್ಚಿಸುವುದು.
8. ನೀರು ನಮ್ಮ ಬಳಕೆಗೆ ಅತ್ಯಂತ ಅಮೂಲ್ಯ ಸಂಪನ್ಮೂಲವಾಗಿದ್ದು, ಅದನ್ನು ವ್ಯರ್ಥಮಾಡದಿರಬೇಕು ಮತ್ತು ಮಾಲಿನ್ಯದಿಂದ ರಕ್ಷಿಸಬೇಕು ಎಂಬುದನ್ನು ಅರಿತುಕೊಳ್ಳುವುದು.
9. ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಮಳೆ ನೀರು ಸಂಗ್ರಹಣೆ ಮುಂತಾದ ಸರಕಾರ ಮತ್ತು ಸಮುದಾಯದ ಪ್ರಯತ್ನಗಳ ಬಗ್ಗೆ ತಿಳಿದುಕೊಳ್ಳುವುದು.
10. ಸಮುದ್ರ ನೀರಿನ ಉಪ್ಪನ್ನು ಕಡಿಮೆ ಮಾಡುವ (ಡಿಸಾಲ್ಟಿಂಗ್) ಮತ್ತು ಕೈಗಾರಿಕೆಯಲ್ಲಿ ನೀರನ್ನು ಶುದ್ಧಗೊಳಿಸಿ ಮರುಬಳಕೆ ಮಾಡುವ ಮೂಲಕ ನೀರು ಕೊರತೆಯನ್ನು ಕಡಿಮೆ ಮಾಡುವ ಸೌಲಭ್ಯಗಳ ಕುರಿತು ಅರಿವು ಪಡೆಯುವುದು.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ನದಿಗಳಲ್ಲಿ ನೀರಿನ ಮಾಲಿನ್ಯಕ್ಕೆ ಕಾರಣವೇನು?
   A) ಮಳೆ B) ಕೈಗಾರಿಕಾ ತ್ಯಾಜ್ಯ C) ಗಾಳಿ D) ಸೂರ್ಯನ ಬೆಳಕು

2. ನೀರಿನ ಮಾಲಿನ್ಯದಿಂದ ಯಾವ ರೋಗಗಳು ಉಂಟಾಗಬಹುದು?

A) ಜ್ವರ B) ಮಲಬದ್ಧತೆ C) ಜಂಡು D) ಶೀತ

3. ನೀರಿನ ಮಾಲಿನ್ಯವನ್ನು ತಡೆಯುವ ಒಂದು ವಿಧಾನ ಯಾವುದು?

A) ತ್ಯಾಜ್ಯವನ್ನು ನದಿಗೆ ಹಾಕುವುದು B) ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡುವುದು C) ತ್ಯಾಜ್ಯವನ್ನು ಸುಡುವುದು D) ತ್ಯಾಜ್ಯವನ್ನು ಎಸೆದು ಬಿಡುವುದು

4. ನೀರಿನ ಮಾಲಿನ್ಯದಿಂದ ಯಾವ ಪ್ರಾಣಿಗಳು ಹೆಚ್ಚು ಹಾನಿಗೊಳಗಾಗುತ್ತವೆ?

A) ಹಕ್ಕಿಗಳು B) ಜಲಚರಗಳು C) ಸಸ್ತನಿಗಳು D) ಕೀಟಗಳು

5. ನೀರಿನ ಮಾಲಿನ್ಯವನ್ನು ತಡೆಯಲು ನಾವು ಏನು ಮಾಡಬೇಕು?

A) ತ್ಯಾಜ್ಯವನ್ನು ನದಿಗೆ ಹಾಕಬೇಕು B) ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡಬೇಕು C) ತ್ಯಾಜ್ಯವನ್ನು ಎಸೆದು ಬಿಡಬೇಕು D) ತ್ಯಾಜ್ಯವನ್ನು ಸುಡಬೇಕು

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ (ಸುಲಭ)

6. ಮಣ್ಣು ಕಣಗಳು, ಕಸದ ಮತ್ತು ಹಾನಿಕರ ವಸ್ತುಗಳನ್ನು ಹೊಂದಿರುವ ನೀರನ್ನು __________ ನೀರು ಎಂದು ಕರೆಯಲಾಗುತ್ತದೆ.
7. __________ ರೋಗಗಳು ಮಾಲಿನ್ಯಗೊಂಡ ನೀರಿನಿಂದ ಹರಡುತ್ತವೆ.
8. ಮಾಲಿನ್ಯಗೊಂಡ ನೀರು ಕುಡಿಯುವುದರಿಂದ __________ ರೋಗವಾಗಬಹುದು, ಇದು ದೇಹದಿಂದ ನೀರಿನ ನಷ್ಟವಾಗಿದೆ.
9. ಓ.ಆರ್.ಎಸ್. ದ್ರಾವಣವನ್ನು __________, ಸಕ್ಕರೆ, ನಿಂಬೆರಸ ಮತ್ತು ಕಾಯಿಸಿ ಆರಿಸಿದ ನೀರನ್ನು ಬಳಸಿ ತಯಾರಿಸಲಾಗುತ್ತದೆ.
10. ನೀರಿನ ಗುಣಮಟ್ಟವನ್ನು ರಕ್ಷಿಸುವ ಸರ್ಕಾರಿ ಸಂಸ್ಥೆಯನ್ನು __________ ಎಂದುಕರೆಯುತ್ತಾರೆ.
11. ಕುಡಿಯುವ ನೀರಿನಲ್ಲಿ ಹಾನಿಕರ ಜೀವಿಗಳನ್ನು ಕೊಲ್ಲಲು __________ನ್ನು ಸೇರಿಸಲಾಗುತ್ತದೆ.
12. ಸಮುದ್ರದ ನೀರಿನಿಂದ ಉಪ್ಪನ್ನು ತೆಗೆದು ಉಪಯೋಗಕ್ಕೆ ತರುವುದು __________ ಎಂಬ ಪ್ರಕ್ರಿಯೆಯಲ್ಲಿದೆ.
13. ಕಾರ್ಖಾನೆಗಳು __________ ನೀರನ್ನು ಚಿಕಿತ್ಸೆ ನೀಡಿದ ನಂತರ ಬಿಡುಗಡೆ ಮಾಡಬೇಕು.
14. ನೀರನ್ನು ಕುದಿಸುವುದು ಅದರಲ್ಲಿ ಇರುವ __________ ಅನ್ನು ಕೊಲ್ಲಲು ಸಹಾಯ ಮಾಡುತ್ತದೆ.
15. ಗೊಬ್ಬರ ಕೊಳ / ಗೊಬ್ಬರ ಗುಂಡಿಗಳು ನೀರಿನ ಮೂಲಗಳಿಂದ ಕನಿಷ್ಠ __________ ಮೀಟರ್ ದೂರದಲ್ಲಿರ ಬೇಕು.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ(ಸುಲಭ)

16. ನೀರಿನ ಮಾಲಿನ್ಯವು ನೀರನ್ನು ಕುಡಿಯಲು ಅಸುರಕ್ಷಿತವಾಗಿಸುತ್ತದೆ. _______
17. ಕಾಲರ ರೋಗವು ಮಾಲಿನ್ಯಗೊಂಡ ನೀರಿನಿಂದ ಆಗುವುದಿಲ್ಲ. __________

18. ಓ.ಆರ್.ಎಸ್. ದ್ರಾವಣವು ದೇಹದ ಉರಿದ ನೀರಿನ ಕೊರತೆ ಶಮನಕ್ಕೆ ಸಹಾಯಕವಾಗಿದೆ. _______
19. ಕಾರ್ಖಾನೆಗಳು ಯಾವಾಗಲೂ ತಮ್ಮ ಬಳಕೆಯ ನೀರನ್ನು ಚಿಕಿತ್ಸೆ ನೀಡದೇ ಬಿಡುತ್ತವೆ. ________
20. ಮಳೆ ನೀರು ಸಂಗ್ರಹಣೆ, ________ ನೀರನ್ನು ಸಂರಕ್ಷಿಸಲು ಸಹಾಯ ಮಾಡುತ್ತದೆ.
21. ನೀರನ್ನು ಕುದಿಸಿದರೆ ಹಾನಿಕರ ಜೀವಿಗಳನ್ನು ನಾಶಮಾಡಲಾಗುತ್ತದೆ. ________
22. ಮಾಲಿನ್ಯಗೊಂಡ ನೀರಿನಲ್ಲಿ ಕೇವಲ ಕಣ್ಣಿಗೆ ಗೋಚರವಾಗುವ ಮಳೆ, ಮಣ್ಣು ಮತ್ತು ಕಸವಷ್ಟೇ ಇರುತ್ತದೆ. ______
23. ನೀರಿನಲ್ಲಿ ಪಾದರಸ ಮತ್ತು ಫ್ಲೋರೈಡ್ ಮುಂತಾದವುಗಳು ಯಾವುದೇ ಹಾನಿ ಮಾಡುವುದಿಲ್ಲ ________
24. ನೀರು ತೋರಿಕೆಗೆ ಸ್ವಚ್ಛವಿದ್ದರೆ ಕುಡಿಯಲು ಶುದ್ಧಗೊಳಿಸುವ ಅಗತ್ಯವಿಲ್ಲ.________
25. ನೀರಿನ ಮಾಲಿನ್ಯವು ಮೀನುಗಳಂತಹ ಜಲಚರ ಪ್ರಾಣಿಗಳಿಗೆ ಪರಿಣಾಮ ಬೀರುತ್ತದೆ. _________

26. ಹೊಂದಿಸಿ ಬರೆಯಿರಿ (ಸುಲಭ)

A	B
ಅ) ಕ್ಲೋರಿನ್	ಅ) ದೇಹದ ನೀರಿನ ಕೊರತೆಯನ್ನು ಪರಿಹರಿಸುತ್ತದೆ
ಆ) ಓ.ಆರ್.ಎಸ್. ದ್ರಾವಣ	ಆ) ಜೀವಿಗಳನ್ನು ಕೊಲ್ಲಲು ನೀರಿಗೆ ಸೇರಿಸಲಾಗುತ್ತದೆ
ಇ) ಪುನರ್ಜಲೀಕರಣ (Dehydration)	ಇ) ಹಾನಿಕರ ವಸ್ತುಗಳಿಂದ ನೀರಿನ ಮಾಲಿನ್ಯ
ಈ) ಲವಣೀಯತೆ ನಿವಾರಣಾ (Desalting)	ಈ) ಸಮುದ್ರದ ನೀರಿನಿಂದ ಉಪ್ಪುತೆಗೆದು ಶುದ್ಧಗೊಳಿಸುವುದು
ಉ) ಮಾಲಿನ್ಯ ನಿಯಂತ್ರಣ ಮಂಡಳಿ	ಉ) ದೇಹದಿಂದನೀರಿನನಷ್ಟ
ಊ) ನೀರಿನ ಮಾಲಿನ್ಯ	ಊ) ನೀರಿನ ಗುಣಮಟ್ಟವನ್ನುಕಾಯ್ದುಕೊಳ್ಳುವ ಸಂಸ್ಥೆ
ಋ) ಗೊಬ್ಬರ ಕೊಳಗಳ ದೂರ	ಋ) ನೀರಿನಲ್ಲಿನ ಬ್ಯಾಕ್ಟೀರಿಯಾ ಕೊಲ್ಲುತ್ತದೆ
ಎ) ನೀರನ್ನು ಕುದಿಸುವುದು	ಎ) ನೀರಿನ ಮೂಲದಿಂದ ಕನಿಷ್ಠ 10 ಮೀಟರ್ ದೂರ ಇರಬೇಕು

ಏ) ಮಳೆ ನೀರು ಸಂಗ್ರಹಣೆ	ಏ) ಕೈಗಾರಿಕಾ ತ್ಯಾಜ್ಯ, ಕೀಟನಾಶಕ, ಮಣ್ಣು ಮುಂತಾದವುಗಳು
ಐ) ನೀರಿನ ಮಾಲಿನ್ಯದ ಮೂಲಗಳು	ಐ) ನೀರನ್ನು ಸಂರಕ್ಷಿಸಲು ಮಳೆ ನೀರನ್ನು ಸಂಗ್ರಹಿಸುವುದು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

27. ನೀರಿನ ಮಾಲಿನ್ಯವೆಂದರೆ ಏನು?
28. ಕಲುಷಿತ ನೀರಿನಿಂದ ಹರಡುವ ಕಾಯಿಲೆಗಳು ಯಾವುವು?
29. ಕಲುಷಿತ ನೀರನ್ನು ಕುಡಿಯಬಾರದು ಏಕೆ?
30. ಜಲಕ್ಷಯ (ಡಿಹೈಡ್ರೇಶನ್) ಎಂದರೇನು?
31. ನೀರನ್ನು ಕುದಿಸುವುದರ ಮಹತ್ವವೇನು?
32. ಓ.ಆರ್.ಎಸ್. (ORS) ಅನ್ನು ಯಾವ ಉದ್ದೇಶಕ್ಕಾಗಿ ಬಳಸುತ್ತಾರೆ?
33. ನೀರನ್ನು ಶುದ್ಧೀಕರಿಸಲು ನೀವು ಏನು ಮಾಡಬೇಕು?
34. ಮಾಲಿನ್ಯ ನಿಯಂತ್ರಣ ಮಂಡಳಿಯ ಪಾತ್ರವೇನು?
35. ನೀರಿನ ಸಂರಕ್ಷಣೆ ಯಾಕೆ ಅಗತ್ಯವಿದೆ?
36. ನೀರಿನಲ್ಲಿ ಫ್ಲೋರೈಡ್ ಅಥವಾ ಪಾದರಸ ದಂತಹ ಹಾನಿಕಾರಕ ರಾಸಾಯನಿಕಗಳು ಇದ್ದರೆ ಏನು ಆಗುತ್ತದೆ?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

37. ನೀರಿನ ಮಾಲಿನ್ಯಕ್ಕೆ ಕಾರಣವಾಗುವ ಯಾವುದಾದರೂ ಎರಡು ಕಾರಣಗಳನ್ನು ಬರೆ. (ಸುಲಭ)
38. ಕಲುಷಿತ ನೀರು ಕಾಯಿಲೆಗೆ ಕಾರಣವಾಗುತ್ತದೆ ಹೇಗೆ? ಎರಡು ಉದಾಹರಣೆ ನೀಡಿ.(ಸಾಧಾರಣ)
39. ಜಲಕ್ಷಯವಾಗುವಾಗ ದೇಹದಲ್ಲಿ ಏನು ಸಂಭವಿಸುತ್ತದೆ? (ಸಾಧಾರಣ)
40. ಓ.ಆರ್.ಎಸ್. (ORS) ಹೇಗೆ ತಯಾರಿಸಬೇಕು? (ಸಾಧಾರಣ)
41. ಉಪ್ಪು ನೀರನ್ನು ಉಪ್ಪು ತೆಗೆದು ಶುದ್ಧ ಗೊಳಿಸುವಿಕೆಯನ್ನು ಏನೆನ್ನುವರು? ಇದು ಏಕೆ ಮುಖ್ಯ? (ಕಠಿಣ)
42. ಮನೆಯಲ್ಲಿಯೇ ನೀರಿನ ಮಾಲಿನ್ಯವನ್ನು ತಡೆಯಲು ನೀವು ತೆಗೆದುಕೊಳ್ಳಬಹುದಾದ ಕ್ರಮಗಳು ಯಾವುವು? (ಕಠಿಣ)

43. ಕಾರ್ಖಾನೆಗಳು ನೀರನ್ನು ನದಿಗಳಲ್ಲಿ ಬಿಡುವ ಮೊದಲು ಶುದ್ಧಗೊಳಿಸಬೇಕು ಏಕೆ? (ಸಾಧಾರಣ)
44. ಕಲುಷಿತ ನೀರನ್ನು ಕುಡಿಯುವ ಹಾನಿಕಾರಕ ಪರಿಣಾಮಗಳು ಯಾವುವು? (ಸುಲಭ)
45. ಗೊಬ್ಬರದ ಗುಂಡಿಗಳು ಮತ್ತು ಸೋಕು ಗುಂಡಿಗಳು ನೀರಿನ ಮಾಲಿನ್ಯಕ್ಕೆ ಹೇಗೆ ಕಾರಣವಾಗುತ್ತವೆ? (ಕಠಿಣ)
46. ನಗರಗಳಲ್ಲಿ ಮಳೆನೀರನ್ನು ಸಂಗ್ರಹಿಸುವ ಅಗತ್ಯವಿರುವುದು ಏಕೆ? (ಸಾಧಾರಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

47. ನೀರಿನ ಮಾಲಿನ್ಯದ ವಿಭಿನ್ನ ಪ್ರಕಾರಗಳು ಮತ್ತು ಅವುಗಳ ಕಾರಣಗಳನ್ನು ವಿವರಿಸಿ. (ಸುಲಭ)
48. ನೀರಿನ ಮಾಲಿನ್ಯವು ಜಲಚರ ಜೀವಿಗಳಿಗೂ ಮನುಷ್ಯರ ಆರೋಗ್ಯಕ್ಕೂ ಹೇಗೆ ಹಾನಿಕಾರಕವಾಗುತ್ತದೆ? (ಸಾಧಾರಣ)
49. ನೀರಿನ ಮೂಲಗಳನ್ನು ಮಾಲಿನ್ಯದಿಂದ ರಕ್ಷಿಸಲು ನೀವು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ವಿವರಿಸಿ. (ಸುಲಭ)
50. ಜಲಕ್ಷಯವನ್ನು ತಡೆಯಲು ಓ.ಆರ್.ಎಸ್. ಅನ್ನು ಹೇಗೆ ತಯಾರಿಸಿ ಬಳಸಬಹುದು ಎಂಬುದನ್ನು ವಿವರಿಸಿ. (ಸಾಧಾರಣ)
51. ಕುಡಿಯುವ ನೀರನ್ನು ಕುದಿಸುವ ಲಾಭಗಳೇನು? (ಸಾಧಾರಣ)
52. ಸ್ವಚ್ಛ ನೀರಿನ ಮಹತ್ವವನ್ನು ವಿವರಿಸಿ ಮತ್ತು ಅದನ್ನು ಸಂರಕ್ಷಿಸುವ ಮಾರ್ಗಗಳನ್ನು ಬರೆ. (ಸುಲಭ)
53. ಕಲುಷಿತ ನೀರಿನಿಂದ ಉಂಟಾಗುವ ಎರಡು ಕಾಯಿಲೆಗಳ ಬಗ್ಗೆ ಮತ್ತು ಅವುಗಳನ್ನು ತಡೆಯುವ ಮಾರ್ಗಗಳ ಬಗ್ಗೆ ಬರೆಯಿರಿ. (ಸಾಧಾರಣ)
54. ನೀರಿನ ಗುಣಮಟ್ಟವನ್ನು ರಕ್ಷಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯ ಪಾತ್ರವನ್ನು ವಿವರಿಸಿ. (ಕಠಿಣ)
55. ನೀರಿನ ಮಾಲಿನ್ಯ ಪರಿಸರವನ್ನು ಹೇಗೆ ಹಾನಿಗೊಳಿಸುತ್ತದೆ? ಎರಡು ಉದಾಹರಣೆ ನೀಡಿ. (ಸಾಧಾರಣ)
56. ಹಿರಿಯರ ಸಹಾಯದಿಂದ ಕಲುಷಿತ ನೀರನ್ನು ಶುದ್ಧಗೊಳಿಸುವ ಹಂತಗಳನ್ನು ಬರೆ. (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು)

57. ನೀರಿನ ಮಾಲಿನ್ಯದ ಪ್ರಕ್ರಿಯೆ ಮತ್ತು ಅದರ ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮಗಳನ್ನು ವಿವರಿಸಿ. ಕುಡಿಯುವ ಮೊದಲು ನೀರನ್ನು ಶುದ್ಧಗೊಳಿಸುವ ವಿಧಾನಗಳನ್ನು ಬರೆಯಿರಿ ? (ಕಠಿಣ)

58. ಕಾಲರ ರೋಗ ಮತ್ತು ನೀರಿನ ಮಾಲಿನ್ಯದ ನಡುವಿನ ಸಂಬಂಧವನ್ನು ವಿವರಿಸಿ. ಈ ರೀತಿಯ ಕಾಯಿಲೆಗಳನ್ನು ತಡೆಯಲು ನಾವು ಏನು ಮಾಡಬೇಕು? (ಕಠಿಣ)

59. ನೀರಿನ ಸಂರಕ್ಷಣೆಯ ಮಹತ್ವವನ್ನು ವಿವರಿಸಿ ಮತ್ತು ಮನೆ ಹಾಗೂ ಶಾಲೆಯಲ್ಲಿ ನೀರಿನ ಮಾಲಿನ್ಯವನ್ನು ತಡೆಯುವ ಐದು ಮಾರ್ಗಗಳನ್ನು ಬರೆ. (ಕಠಿಣ)

60. ನೀರಿನ ಮಾಲಿನ್ಯ ಜಲಚರ ಪ್ರಾಣಿಗಳಿಗೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ವಿವರಿಸಿ. (ಕಠಿಣ)

61. ನೀರನ್ನು ಶುದ್ಧಗೊಳಿಸುವ ವಿವಿಧ ವಿಧಾನಗಳನ್ನು ವಿವರಿಸಿ. ಕುದಿಸುವಿಕೆ ಮತ್ತು ಶೋಧನೆ ಹೇಗೆ ಸಹಾಯಕವಾಗುತ್ತವೆ ಎಂಬುದನ್ನು ವಿವರಿಸಿ. (ಕಠಿಣ)

62. ಉಪ್ಪು ನೀರಿನಿಂದ ಉಪ್ಪು ತೆಗೆದು ಅದನ್ನು ಕುಡಿಯುವ ನೀರಾಗಿ ಮಾಡುವ ಉಪ್ಪುಹೀನೀಕರಣ (desalting) ಎಂಬ ಕಲ್ಪನೆಯನ್ನು ವಿವರಿಸಿ ಮತ್ತು ಅದರ ಪ್ರಭಾವವನ್ನು ವಿವರಿಸಿ. (ಕಠಿಣ)

63. ಕೈಗಾರಿಕೆಗಳು ನೀರಿನ ಮಾಲಿನ್ಯವನ್ನು ಹೇಗೆ ಕಡಿಮೆ ಮಾಡಬಹುದು? ನೀರನ್ನು ಮರುಬಳಕೆ ಮತ್ತು ಮರುಚಕ್ರಣ ಮಾಡುವ ಮಾರ್ಗಗಳನ್ನು ವಿವರಿಸಿ. (ಕಠಿಣ)

64. ಜಲಕ್ಷಯವನ್ನು ತಡೆಯಲು ಓ.ಆರ್.ಎಸ್. ಉಪಯೋಗಿಸುವ ಮಹತ್ವವನ್ನು ವಿವರಿಸಿ. ಅದನ್ನು ತಯಾರಿಸಲು ಬೇಕಾಗುವ ಪದಾರ್ಥಗಳು ಯಾವುವು ಮತ್ತು ದೇಹಕ್ಕೆ ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ವಿವರಿಸಿ. (ಕಠಿಣ)

65. ಸಮುದಾಯವು ನೀರಿನ ಮಾಲಿನ್ಯವನ್ನು ಕಡಿಮೆ ಮಾಡಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು? ಪ್ರಾಯೋಗಿಕ ಪರಿಹಾರಗಳನ್ನು ಚರ್ಚಿಸಿ. (ಕಠಿಣ)

66. ನೀರಿನ ನಿರ್ವಹಣೆಯ ಹೊಣೆ ನಿಮ್ಮ ಮೇಲಿದೆ ಎಂದು ಭಾವಿಸಿ. ನೀರಿನ ಮಾಲಿನ್ಯವನ್ನು ತಡೆಯಲು ಮತ್ತು ಪ್ರತಿಯೊಬ್ಬರಿಗೂ ಶುದ್ಧ ನೀರನ್ನು ಒದಗಿಸಲು ನೀವು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ? (ಕಠಿಣ)

67. ನೀರಿನ ಮೂಲವಾದ ಬಾವಿ ಚಿತ್ರ ಬಿಡಿಸಿ ಬಣ್ಣ ಹಾಕಿ

ಪಾಠ 8: ಆಹಾರ – ಆರೋಗ್ಯ

ಕಲಿಕಾ ಫಲಗಳು :-

1. ಸಮತೋಲಿತ ಆಹಾರ ಎಂದರೇನು ತಿಳಿಯುವುದು.
2. ವಿವಿಧ ಆಹಾರ ಪದಾರ್ಥಗಳನ್ನು ಪೋಷಕಾಂಶಗಳ ಪ್ರಕಾರ ವರ್ಗೀಕರಿಸುವುದು.
3. ಆಹಾರ ಪದಾರ್ಥಗಳನ್ನು ಹೇಗೆ ಸಂರಕ್ಷಿಸಬೇಕು ಎಂಬುದನ್ನು ತಿಳಿದು ಅನುಸರಿಸುವುದು..
4. ಪ್ರಾಣಿಗಳ ಬಾಯಿ, ಹಲ್ಲುಗಳು ಮತ್ತು ಇತರೆ ಅಂಗಗಳು ಅವರ ಆಹಾರ ಹವ್ಯಾಸಗಳಿಗೆ ಹೇಗೆ ಹೊಂದಿಕೊಳ್ಳುತ್ತವೆ ಎಂಬುದನ್ನು ತಿಳಿದುಕೊಳ್ಳುವುದು.
5. ಶರೀರಕ್ಕೆ ಬೇಕಾದ ಪ್ರಮುಖ ಪೋಷಕಾಂಶಗಳಾದ ಕಾರ್ಬೋಹೈಡ್ರೇಟ್ಸ್, ಪ್ರೋಟೀನ್ಸ್, ಲಿಪಿಡ್, ಮತ್ತು ವಿಟಮಿನ್ಸ್‌ಗಳ ಕಾರ್ಯ ಮತ್ತು ಮೂಲಗಳನ್ನು ತಿಳಿಯುವುದು.
6. ವಿಟಮಿನ್ಸ್‌ಗಳ ಕೊರತೆಗಳಿಂದ ಆಗುವ ರೋಗಗಳನ್ನು ತಿಳಿದುಕೊಳ್ಳುವುದು.
7. ಸಮತೋಲಿತ ಆಹಾರ ಸೇವನೆಯ ಮಹತ್ವವನ್ನು ಅರಿತುಕೊಳ್ಳುವುದು.
8. ಆಹಾರವು ಕೆಟ್ಟುಹೋಗದಂತೆ ಮತ್ತು ಸೊಂಕುಗಳಿಂದ ಮುಕ್ತವಾಗಿರಲು ಅಗತ್ಯ ಕ್ರಮಗಳನ್ನು ತಿಳಿದುಕೊಳ್ಳುವುದು.
9. ಕೈಗಳನ್ನು ತೊಳೆಯುವ ಮಹತ್ವವನ್ನು ಮತ್ತು ಶುಚಿತ್ವದ ನಿಯಮಗಳನ್ನು ಪಾಲಿಸುವ ಮಹತ್ವವನ್ನು ಅರಿತುಕೊಳ್ಳುವುದು.
10. ಆಹಾರ ಸೇವನೆಯಾಗುವಾಗ ಮತ್ತು ತಯಾರಿಕೆಯಾಗುವಾಗ ಸ್ವಚ್ಛತೆ ಮತ್ತುಸುರಕ್ಷತೆ ಎಷ್ಟು ಮಹತ್ವವಾದುದೆಂದು ಅರಿತುಕೊಳ್ಳುವುದು.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ಮುಖ್ಯ ಜೀವಸತ್ವಗಳು ಎಷ್ಟು ಇವೆ?
   ಎ) 6 ಬಿ) 4 ಸಿ) 3 ಡಿ) 8
2. ಬೆಳವಣೆಗೆ ಬೇಕಾಗಿರುವ ಪೋಷಕಾಂಶಗಳು ಇವಾಗಿವೆ.
   ಎ) ಪ್ರೋಟಿನ್ ಗಳು ಬಿ) ಖನಿಜ ಲವಣ ಸಿ) ಜೀವಸತ್ವ ಡಿ) ಶಕ್ತಿ
3. ಪಿಷ್ಟದ ಕೊರತೆಯಿಂದ ಇದು ಉಂಟಾಗುತ್ತದೆ.
   ಎ) ಶಕ್ತಿ ಬಿ) ನಿಶಕ್ತಿ ಸಿ) ಬೆಳವಣಿಗೆ ಡಿ) ಆರೋಗ್ಯ
4. ಹಲ್ಲು ಮತ್ತು ವಸಡಿನ ಆರೋಗ್ಯಕ್ಕೆ ಈ ಕೆಳಗಿನ ಜೀವಸತ್ವ ಅವಶ್ಯಕವಾಗಿದೆ.
   ಎ) ಸಿ ಬಿ) ಡಿ ಸಿ) ಬಿ ಡಿ) ಎ
5. ಹುಲಿ ಸೇವಿಸುವ ಆಹಾರ ಗುರುತಿಸು
   ಎ) ಹಣ್ಣು ಬಿ) ಮಾಂಸ ಸಿ) ತರಕಾರಿ ಡಿ) ಹುಲ್ಲು

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ (ಸುಲಭ)

6. ಧಾನ್ಯಗಳಲ್ಲಿ ಇರುವ ಪೋಷಕಾಂಶ ____________ ಆಗಿದೆ.
7. ಪ್ರತಿದಿನ ಕನಿಷ್ಠ ____________ ಗ್ಲಾಸ್ ನೀರು ಕುಡಿಯಬೇಕು.
8. ವಿಟಮಿನ್ ____________ ನ ಕೊರತೆಯಿಂದ ಇರುಳುಕುರುಡುತನ (Night Blindness) ಉಂಟಾಗುತ್ತದೆ.
9. ಕಿತ್ತಳೆ ಹಣ್ಣಿನಲ್ಲಿ ವಿಟಮಿನ್ ____________ ಹೆಚ್ಚು ಅಂಶವಿದೆ.
10. ಎಲ್ಲಾ ಪೋಷಕಾಂಶಗಳನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸುವ ಆಹಾರವನ್ನು ____________ ಆಹಾರ ಎಂದು ಕರೆಯುತ್ತಾರೆ.
11. ಬೆಣ್ಣೆ ಮತ್ತು ತುಪ್ಪದಲ್ಲಿ ____________ ಪೋಷಕಾಂಶ ಹೆಚ್ಚು ಇರುತ್ತದೆ.
12. ಚಿಟ್ಟೆ ಮಕರಂದ ಸೇವಿಸಲು ಬಳಸುವ ಅಂಗವನ್ನು ____________ ಎನ್ನುತ್ತಾರೆ.
13. ____________ ದೇಹದ ಬೆಳವಣಿಗೆ ಮತ್ತು ಬದಲಾವಣೆಗೆ ಸಹಾಯ ಮಾಡುತ್ತದೆ.
14. ಆಹಾರವನ್ನು ____________ಗಳಿಂದ ರಕ್ಷಿಸಲು ಮುಚ್ಚಬೇಕು.
15. ಕಲುಷಿತ ಆಹಾರ ಸೇವನೆ ____________ ಮತ್ತು ವಾಂತಿ ಮುಂತಾದ ರೋಗಗಳನ್ನು ಉಂಟುಮಾಡಬಹುದು.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ(ಸುಲಭ)

16. ಕಾರ್ಬೋಹೈಡ್ರೇಟುಗಳು ದೇಹಕ್ಕೆ ಶಕ್ತಿಯನ್ನು ಒದಗಿಸುತ್ತವೆ. ______
17. ಸೂರ್ಯನ ಕಿರಣಗಳು ಚರ್ಮದ ಮೇಲೆ ಬೀಳುವಾಗ ಡಿ ವಿಟಮಿನ್ ಉತ್ಪತ್ತಿ ಆಗುತ್ತದೆ.____
18. ಆರೋಗ್ಯವಾಗಿರಲು ನಾವು ಕೇವಲ ಒಂದು ರೀತಿಯ ಆಹಾರವನ್ನು ಸೇವಿಸಬೇಕು. ______
19. ಜಿರಳೆ ಆಹಾರವನ್ನು ಕಲುಷಿತಗೊಳಿಸುವುದಿಲ್ಲ. ________
20. ಪ್ರೋಟೀನುಗಳು ದೇಹವನ್ನು ರೋಗಗಳಿಂದ ರಕ್ಷಿಸಲು ಸಹಾಯ ಮಾಡುತ್ತವೆ. ______
21. ಪ್ರತಿದಿನ 2 ಗ್ಲಾಸ್ ನೀರು ಕುಡಿಯುವುದು ಆರೋಗ್ಯಕ್ಕೆ ಸಾಕು. ________
22. ತರಕಾರಿಗಳನ್ನು ಹೆಚ್ಚು ಬೇಯಿಸಿದರೆ ಹೆಚ್ಚು ಪೋಷಕಾಂಶ ಉಳಿಯುತ್ತದೆ. ________
23. ಹಳಸಿದ ಆಹಾರ ಸೇವನೆಯಿಂದ ಹೊಟ್ಟೆ ಸಂಬಂಧಿತ ರೋಗಗಳು ಉಂಟಾಗಬಹುದು. ________
24. **ಬಿ** ವಿಟಮಿನ್ ಹಲ್ಲು ಮತ್ತು ಮೂಳೆಗಳನ್ನು ರಕ್ಷಿಸುತ್ತದೆ.______
25. ಹುಲಿ ತಾನು ಬೇಟೆಯಾಡಿದ ಪ್ರಾಣಿಯನ್ನುಸೇವಿಸಲುತನ್ನ ಹಲ್ಲುಗಳನ್ನು ಬಳಸುತ್ತದೆ. ______

26. ಹೊಂದಿಸಿ ಬರೆಯಿರಿ (ಸುಲಭ)

A (ವಿಟಮಿನ್‌ಗಳು / ಪ್ರಾಣಿಗಳು)	B (ಬಳಕೆ / ಸಹಾಯಕ ಅಂಗಗಳು)
ಅ) ವಿಟಮಿನ್ B	ಅ) ದೃಷ್ಟಿಶಕ್ತಿ ಮತ್ತು ಚರ್ಮವನ್ನು ಕಾಪಾಡುತ್ತದೆ
ಆ) ವಿಟಮಿನ್ A	ಆ) ಹೃದಯ ಮತ್ತು ಜೀರ್ಣಾಂಗಗಳ ರಕ್ಷಣೆ
ಇ) ವಿಟಮಿನ್ D	ಇ) ಹಲ್ಲು ಮತ್ತು ಹಲ್ಲುಮೂಳೆಗಳನ್ನು ರಕ್ಷಿಸುತ್ತದೆ
ಈ) ವಿಟಮಿನ್ C	ಈ) ಎಲುಬು ಮತ್ತು ಹಲ್ಲುಗಳನ್ನು ಬಲಪಡಿಸುತ್ತದೆ
ಉ) ಚಿಟ್ಟೆ	ಉ) ಮಾಂಸವನ್ನು ಹರಿಯಲು ಹಲ್ಲುಗಳನ್ನು ಬಳಸುತ್ತದೆ
ಊ) ಹುಲಿ	ಊ) ಮಕರಂದ ಹೀರುವ ಹೀರುನಳಿಕೆ ಹೊಂದಿದೆ
ಋ) ಗಿಡುಗ	ಋ) ದಂತ ಮತ್ತು ಸೊಂಡಿಲನ್ನು ಬಳಸಿ ಹುಲ್ಲು ತಿನ್ನುತ್ತದೆ
ಎ) ಕೊಕ್ಕರೆ	ಎ) ಆಹಾರವನ್ನು ಹಿಡಿಯಲು ಬಲವಾದ ಕಾಲುಗಳನ್ನು ಬಳಸುತ್ತದೆ
ಏ) ಆನೆ	ಏ) ಆಹಾರ ಹಿಡಿಯಲು ಮುಳ್ಳು ಗಂಟಲನ್ನು ಬಳಸುತ್ತದೆ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

27. ಸಮತೋಲಿನ ಆಹಾರ ಎಂದರೇನು?
28. ಆಹಾರದಲ್ಲಿ ಕಂಡುಬರುವ ಮೂರು ಮುಖ್ಯ ಪೋಷಕಾಂಶಗಳನ್ನು ಹೆಸರಿಸಿ.
29. ಕಾರ್ಬೋಹೈಡ್ರೇಟ್‌ಗಳು ಎಂದರೇನು?
30. ದೃಷ್ಟಿ ರಕ್ಷಣೆಗೆ ಸಹಾಯ ಮಾಡುವ ವಿಟಮಿನ್ ಯಾವುದು?
31. ನಮ್ಮ ದೇಹದಲ್ಲಿ ಪ್ರೋಟೀನ್‌ಗಳ ಉಪಯೋಗವೇನು?
32. ವಿಟಮಿನ್ ಸಿ ಸಮೃದ್ಧ ಆಹಾರ ಪದಾರ್ಥ ಯಾವದು?
33. ವಿಟಮಿನ್ ಡಿ ಕೊರತೆಯಿಂದ ಏನು ಸಂಭವಿಸುತ್ತದೆ?
34. ಆಹಾರದಲ್ಲಿ ಕೊಬ್ಬಿನ ಮುಖ್ಯ ಕಾರ್ಯವೇನು?
35. ಕಾರ್ಬೋಹೈಡ್ರೇಟ್‌ಗಳಲ್ಲಿ ಸಮೃದ್ಧ ಆಹಾರ ಪದಾರ್ಥ ಯಾವದು?
36. ಕಲುಷಿತಗೊಂಡ ಆಹಾರ ಸೇವಿಸಿದರೆ ಏನು ಸಂಭವಿಸುತ್ತದೆ?
37. ದೇಹವು ವಿಟಮಿನ್ ಡಿ ಅನ್ನು ಹೇಗೆ ಪಡೆಯುತ್ತದೆ?
38. ಪ್ರೋಟೀನ್‌ಗಳಲ್ಲಿ ಸಮೃದ್ಧ ಆಹಾರ ಪದಾರ್ಥಗಳನ್ನು ಹೆಸರಿಸಿ.

39. ಆಹಾರ ಮಾಲಿನ್ಯವನ್ನು ತಪ್ಪಿಸಲು ಆಹಾರವನ್ನು ಮುಚ್ಚಿ ಇಡಬೇಕಾದ ಕಾರಣವೇನು?

40. ತರಕಾರಿಗಳನ್ನು ತಿನ್ನುವ ಮೊದಲು ತೊಳೆಯುವ ಮಹತ್ವವೇನು?

41. ಸ್ಕರ್ವಿ ರೋಗದ ಲಕ್ಷಣಗಳು ಯಾವುವು?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

42. ಪ್ರತಿದಿನ ನೀರು ಕುಡಿಯುವ ಮಹತ್ವವನ್ನು ವಿವರಿಸಿ? (ಕಠಿಣ)

43. ವಿಟಮಿನ್ **ಎ** ಕೊರತೆಯ ಲಕ್ಷಣಗಳನ್ನು ವಿವರಿಸಿ? (ಕಠಿಣ)

44. ಹಸು ಮತ್ತು ಹುಲಿ ಆಹಾರ ಪದ್ಧತಿಯಲ್ಲಿ ಹೇಗೆ ವಿಭಿನ್ನವಾಗಿವೆ? (ಸಾಧಾರಣ)

45. ಆಹಾರವನ್ನು ಸರಿಯಾಗಿ ಸಂಗ್ರಹಿಸದಿದ್ದರೆ ಏನು ಸಮಸ್ಯೆಗಳು ಉಂಟಾಗಬಹುದು? (ಸಾಧಾರಣ)

46. ವಿಟಮಿನ್ **ಸಿ** ನಮ್ಮ ದೇಹವನ್ನು ಹೇಗೆ ರಕ್ಷಿಸುತ್ತದೆ? (ಕಠಿಣ)

47. ದೇಹಕ್ಕೆ ಶಕ್ತಿಯನ್ನು ನೀಡುವಲ್ಲಿ ಕೊಬ್ಬಿನ ಪಾತ್ರವೇನು? (ಕಠಿಣ)

48. ಪ್ರತಿದಿನ ವಿವಿಧ ರೀತಿಯ ಆಹಾರಗಳನ್ನು ಸೇವಿಸುವ ಅಗತ್ಯವೇನು? (ಸಾಧಾರಣ)

49. ವಿಟಮಿನ್ **ಡಿ** ದೇಹಕ್ಕೆ ಹೇಗೆ ಸಹಾಯ ಮಾಡುತ್ತದೆ?

50. ವಿಟಮಿನ್ **ಎ** ದೇಹಕ್ಕೆ ಹೇಗೆ ದೊರೆಯುತ್ತದೆ? (ಸಾಧಾರಣ)

51. ಹಳೆಯ ಅಥವಾ ಹೆಚ್ಚು ಬೇಯಿಸಿದ ಆಹಾರ ಸೇವಿಸುವ ಅಪಾಯಗಳು ಯಾವುವು? (ಕಠಿಣ)

52. ಚಿಟ್ಟೆ ಆಹಾರವನ್ನು ಹೇಗೆ ಸೇವಿಸುತ್ತದೆ? (ಸಾಧಾರಣ)

53. ಸಮತೋಲಿತ ಆಹಾರವು ಆರೋಗ್ಯಕ್ಕೆ ಏಕೆ ಮುಖ್ಯ? (ಕಠಿಣ)

54. ದೇಹದಲ್ಲಿ ಪ್ರೋಟೀನ್‌ಗಳ ಕಾರ್ಯಗಳು ಯಾವುವು? (ಸಾಧಾರಣ)

55. ಮನೆಯಲ್ಲಿ ಆಹಾರ ಸಂರಕ್ಷಣೆ ಮಾಡುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು ಯಾವುವು? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

56. ಕೆಳಗಿನ ಆಹಾರ ಪದಾರ್ಥಗಳನ್ನು ಸರಿಯಾದ ವರ್ಗಗಳಲ್ಲಿ ವರ್ಗೀಕರಿಸಿ . ಅಕ್ಕಿ, ಹುರಳಿಕಾಯಿ, ಹಾಲು, ಕ್ಯಾರೆಟ್, ಬೆಣ್ಣೆ. (ಸಾಧಾರಣ)

57. ಆಹಾರದ ಪಿರಮಿಡ್ ಚಿತ್ರವನ್ನು ಬಿಡಿಸಿ, ಅದರ ಆಹಾರ ವರ್ಗಗಳನ್ನು ಪಟ್ಟಿ ಮಾಡಿ. (ಕಠಿಣ)

58. ಆಹಾರದಲ್ಲಿ ವಿಟಮಿನ್‌ಗಳ ಮಹತ್ವದ ಬಗ್ಗೆ ಒಂದು ಚಿಕ್ಕ ಟಿಪ್ಪಣಿ ಬರೆಯಿರಿ. (ಸಾಧಾರಣ)

59. ಮನೆಯಲ್ಲಿ ಆಹಾರವನ್ನು ಒಣಗಿಸುವಿಕೆ, ಉಪ್ಪು ಹಾಕುವುದು ಮತ್ತು ತಣ್ಣೀಕರಿಸುವಿಕೆ ವಿಧಾನಗಳನ್ನು ಬಳಸಿಕೊಂಡು ಸಂರಕ್ಷಿಸುವ ವಿಧಾನಗಳನ್ನು ವಿವರಿಸಿ. (ಸಾಧಾರಣ)

60. ಈ ಆಹಾರ ಪದಾರ್ಥಗಳಲ್ಲಿ ಇರುವ ಪೋಷಕಾಂಶಗಳನ್ನು ಬರೆಯಿರಿ. (ಕಠಿಣ)

ಅಕ್ಕಿ

ಹುರಳಿಕಾಯಿ

ಬೆಣ್ಣೆ

ಪಾಲಕ್

ಮೊಟ್ಟೆ

ಹಣ್ಣುಗಳು

61. ಕಾರ್ಬೋಹೈಡ್ರೇಟ್‌ಗಳಲ್ಲಿ ಸಮೃದ್ಧ ಐದು ಆಹಾರಗಳನ್ನು ಪಟ್ಟಿ ಮಾಡಿ ಮತ್ತು ಕಾರ್ಬೋಹೈಡ್ರೇಟ್‌ಗಳ ಮಹತ್ವವನ್ನು ವಿವರಿಸಿ. (ಕಠಿಣ)

62. ಪ್ರಾಣಿಗಳ ಆಹಾರ ಪಡೆಯುವ ಪದ್ಧತಿಯಲ್ಲಿ ಕೊಕ್ಕು, ಕಾಲು ಮತ್ತು ಹಲ್ಲುಗಳು ಪಾತ್ರವನ್ನು ವಿವರಿಸಿ. (ಕಠಿಣ)

63. ಕೀಟಗಳು ಅಥವಾ ಬ್ಯಾಕ್ಟೀರಿಯಾ ಸಂಪರ್ಕಿಸಿದ ಆಹಾರ ಸೇವಿಸುವ ಪರಿಣಾಮಗಳು ಯಾವುವು? (ಕಠಿಣ)

64. ಆಹಾರ ಸೇವಿಸುವ ಮೊದಲು ಕೈ ತೊಳೆಯುವ ಮಹತ್ವವೇನು? (ಸಾಧಾರಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು)

65. ದೀಪಾ ದುರ್ಬಲತೆಯನ್ನು ಅನುಭವಿಸುತ್ತಿದ್ದಾಳೆ. ಅವಳು ನಿಯಮಿತವಾಗಿ ಅಕ್ಕಿ, ಹಾಲು ಮತ್ತು ತರಕಾರಿಗಳನ್ನು ಸೇವಿಸುತ್ತಾಳೆ. ಅವಳಿಗೆ ಬೆಳವಣಿಗೆಗೆ ಸಹಾಯ ಮಾಡುವ ಪೋಷಕಾಂಶ ಯಾವುದು ಮತ್ತು ಶಕ್ತಿಯನ್ನು ನೀಡುವ ಪೋಷಕಾಂಶ ಯಾವುದು ಎಂಬುದನ್ನು ವಿವರಿಸಿ. (ಕಠಿಣ)

66. ನಿಮ್ಮ ಸ್ನೇಹಿತನು ಕೇವಲ ಚಾಕೊಲೇಟ್, ಚಿಪ್ಸ್ ಮತ್ತು ತಂಪು ಪಾನೀಯಗಳನ್ನು ಸೇವಿಸುತ್ತಾನೆ. ಅವನ ಆರೋಗ್ಯದ ಮೇಲೆ ಇದರಿಂದ ಏನು ಪರಿಣಾಮಗಳು ಉಂಟಾಗಬಹುದು ಮತ್ತು ಅವನು ತನ್ನ ಆಹಾರ ಪದ್ಧತಿಯಲ್ಲಿ ಯಾವ ಬದಲಾವಣೆಗಳನ್ನು ಮಾಡಬೇಕು ಎಂಬುದನ್ನು ವಿವರಿಸಿ. (ಕಠಿಣ)

67. ನೀವು ಧಾನ್ಯಗಳ ಡಬ್ಬಿ, ತರಕಾರಿಗಳ ತಟ್ಟೆ ಮತ್ತು ರಸದಲೋಟ ಹೊಂದಿದ್ದೀರಿ. ಈ ಆಹಾರ ಪದಾರ್ಥಗಳು ಸಮತೋಲಿತ ಆಹಾರಕ್ಕೆ ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ಒಂದು ಟಿಪ್ಪಣಿ ಬರೆಯಿರಿ. (ಕಠಿಣ)

68. ಹುಲಿ ತನ್ನ ಹಲ್ಲುಗಳನ್ನು ಮಾಂಸ ಸಿಗಿಯಲು ಹೇಗೆ ಬಳಸುತ್ತದೆ ಮತ್ತು ಕೊಕ್ಕರೆ ತನ್ನ ಚುಂಚನ್ನು ಆಹಾರ ಸೇವಿಸಲು ಹೇಗೆ ಬಳಸುತ್ತದೆ ಎಂಬುದನ್ನು ಚಿತ್ರಿಸಿ ಮತ್ತು ವಿವರಿಸಿ. (ಕಠಿಣ)

69. ನೀವು ಒಂದು ಮಾರುಕಟ್ಟೆಯಲ್ಲಿ ಇದ್ದೀರಿ, ಅಲ್ಲಿ ಆಹಾರ ಮುಚ್ಚದೆ ಇಡಲಾಗಿದೆ. ಇದರಿಂದ ಏನು ಸಮಸ್ಯೆಗಳು ಉಂಟಾಗಬಹುದು ಮತ್ತು ಆಹಾರ ಖರೀದಿಸುವಾಗ ಮಾಲಿನ್ಯವನ್ನು ತಪ್ಪಿಸಲು ನೀವು ಏನು ಮಾಡಬಹುದು ಎಂಬುದನ್ನು ವಿವರಿಸಿ. (ಕಠಿಣ)

70. ನೀವು ನಿಮ್ಮ ಕುಟುಂಬಕ್ಕೆ ಒಂದು ಊಟವನ್ನು ತಯಾರಿಸುತ್ತಿದ್ದೀರಿ. ನೀವು ಅಕ್ಕಿ, ಹುರಳಿಕಾಯಿ, ಹಣ್ಣುಗಳು ಮತ್ತು ಹಾಲು ಹೊಂದಿದ್ದೀರಿ. ಸಮತೋಲಿತ ಆಹಾರದ ಮೆನು ಅನ್ನು ತಯಾರಿಸಿ ಮತ್ತು ಪ್ರತಿಯೊಂದು ಆಹಾರ ಪದಾರ್ಥದ ಮಹತ್ವವನ್ನು ವಿವರಿಸಿ. (ಕಠಿಣ)

71. ಮನೆಯಲ್ಲಿ ಆಹಾರವನ್ನು ಸಂರಕ್ಷಿಸಲು ಬಳಸಬಹುದಾದ ವಿಧಾನಗಳನ್ನು ವಿವರಿಸಿ. ಆಹಾರವನ್ನು ಸರಿಯಾಗಿ ಸಂರಕ್ಷಿಸುವ ಅಗತ್ಯವೇನು ಎಂಬುದನ್ನು ವಿವರಿಸಿ. (ಕಠಿಣ)

72. ಒಂದು ಮೇಳದಲ್ಲಿ ಆಹಾರ ಮುಚ್ಚದೆ ಮಾರಾಟವಾಗುತ್ತಿದೆ. ಆಹಾರವನ್ನು ಮುಚ್ಚಿ ಇಡುವ ಮಹತ್ವವನ್ನು ವಿವರಿಸಿ ಮತ್ತು ಮಾಲಿನ್ಯಗೊಂಡ ಆಹಾರ ಸೇವಿಸುವುದರಿಂದ ಯಾವ ರೋಗಗಳು ಉಂಟಾಗಬಹುದು ಎಂಬುದನ್ನು ವಿವರಿಸಿ. (ಕಠಿಣ)

73. ನೀವು ನಿಮ್ಮ ಸ್ನೇಹಿತರೊಂದಿಗೆ ಹೊರಸಂಚಾರ ಯೋಜಿಸುತ್ತಿದ್ದೀರಿ. ಪ್ರತಿಯೊಬ್ಬರಿಗೂ ಸಮತೋಲಿತ ಆಹಾರ ದೊರೆಯಲು ನೀವು ಯಾವ ಆಹಾರಗಳನ್ನು ತೆಗೆದುಕೊಂಡು ಹೋಗುತ್ತೀರಿ ಮತ್ತು ಪ್ರತಿಯೊಂದು ಆಹಾರ ಪದಾರ್ಥದ ಅಗತ್ಯವನ್ನು ವಿವರಿಸಿ. (ಕಠಿಣ)

74. ನೀವು ನಿಮ್ಮ ಕುಟುಂಬದ ಸದಸ್ಯರು ಆರೋಗ್ಯಕರ ಆಹಾರ ಸೇವಿಸಲು ಸಹಾಯ ಮಾಡಲು ಒಣಗಿಸುವಿಕೆ, ಉಪ್ಪು ಹಾಕುವುದು ಮತ್ತು ಶೈತ್ಯೀಕರಿಸುವಿಕೆಯಂತಹ ಆಹಾರ ಸಂರಕ್ಷಣಾ ತಂತ್ರಗಳನ್ನು ಹೇಗೆ ಬಳಸಬಹುದು ಎಂಬುದನ್ನು ವಿವರಿಸಿ. (ಕಠಿಣ)

75. ಹಸು ಚಿತ್ರವನ್ನು ಬಿಡಿಸಿ, ಬಣ್ಣ ಹಾಕಿರಿ. (ಕಠಿಣ)

ಪಾಠ 9: ಆಹಾರ ಅಭ್ಯಾಸ

ಕಲಿಕಾ ಫಲಗಳು :-

1. ನಾವು ಆಹಾರವನ್ನು ಎಲ್ಲಿಂದ ಮತ್ತು ಹೇಗೆ ಪಡೆಯುತ್ತೇವೆ ಎಂದು ವಿವರಿಸಬಹುದು.
2. ಸಾಮೂಹಿಕ ಆಹಾರ ಸೇವನೆಯ ಸಂದರ್ಭಗಳನ್ನು ಗುರುತಿಸಿ, ಆ ಸಂದರ್ಭದಲ್ಲಿ ಅನುಸರಿಸುವ ಕ್ರಮಬದ್ಧತೆಯ ಮಹತ್ವವನ್ನು ಅರ್ಥಮಾಡಿಕೊಳ್ಳಬಹುದು.
3. ಆಹಾರ ಮತ್ತು ಸಂಸ್ಕೃತಿಯ ವೈವಿಧ್ಯತೆಯನ್ನು ಮೆಚ್ಚಿಕೊಳ್ಳಬಹುದು.
4. ತಮ್ಮ ಜಿಲ್ಲೆಯ ಮತ್ತು ಸಮೀಪದ ಜಿಲ್ಲೆಯ ಆಹಾರ ಮತ್ತು ಸಂಸ್ಕೃತಿಯ ವೈವಿಧ್ಯತೆಯನ್ನು ತಿಳಿದುಕೊಳ್ಳಬಹುದು.
5. ಆಹಾರ ಉತ್ಪಾದನೆಯ ಹಂತಗಳನ್ನು ಸರಿಯಾದ ಕ್ರಮದಲ್ಲಿ ಜೋಡಣೆ ಮಾಡಿ, ಪ್ರತಿಯೊಂದು ಹಂತವನ್ನು ವಿವರಣೆ ಮಾಡಬಹುದು.
6. ತಮ್ಮ ಮನೆಯಲ್ಲಿನ ಸಾಮಾನ್ಯ ಆಹಾರ ವಸ್ತುಗಳ ಪಟ್ಟಿ ರಚಿಸಿ, ಅವುಗಳನ್ನು ಎಲ್ಲಿಂದ ಪಡೆಯುತ್ತಾರೆ ಎಂದು ತಿಳಿಸಬಹುದು.
7. ದಿನನಿತ್ಯ ತಯಾರಿಸುವ ಆಹಾರ ಮತ್ತು ಹಬ್ಬಗಳಲ್ಲಿ ತಯಾರಿಸುವ ವಿಶೇಷ ಆಹಾರವನ್ನು ವಿಭಜಿಸಬಹುದು.
8. ಹಬ್ಬ, ಹಳ್ಳಿ ಮೇಳ ಅಥವಾ ಸಾಮೂಹಿಕ ಆಹಾರ ಸೇವನೆಯಲ್ಲಿ ತಾವು ಅನುಭವಿಸಿದ ಅನುಭವಗಳನ್ನು ವಿವರಿಸಬಹುದು
9. ಸಾಮೂಹಿಕ ಆಹಾರ ಸೇವನೆಯ ಸಮಯದಲ್ಲಿ ಸ್ವಚ್ಛತೆ ಮತ್ತು ಸ್ವಚ್ಛತೆಯ ನಿಯಮಗಳನ್ನು ಪಟ್ಟಿ ಮಾಡಿ ಅನುಸರಿಸಬಹುದು.
10. ಆಹಾರದ ಪೋಷಕಾಂಶಗಳು ಮತ್ತು ಸಮತೋಲನ ಆಹಾರ ಸೇವನೆಯ ಮಹತ್ವವನ್ನು ಅರಿತು ಕೊಳ್ಳಬಹುದು.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ಇವುಗಳಲ್ಲಿ ಪ್ರೋಟೀನ್ ಇರುವ ಆಹಾರ
ಎ) ಬಾಳೆಹಣ್ಣು ಬಿ) ಮೊಟ್ಟೆ ಸಿ) ಸೋಪ್ಪು ಡಿ) ತರಕಾರಿ
2. ಅನ್ನವನ್ನು ಈ ಕೆಳಗಿನ ಯಾವ ಪದಾರ್ಥದಿಂದ ತಯಾರಿಸುತ್ತಾರೆ.
ಎ) ಭತ್ತ ಬಿ) ಗೋಧಿ ಸಿ) ನವಣೆ ಡಿ) ಜೋಳ
3. ನಮ್ಮ ನಾಡ ಹಬ್ಬ ಯಾವುದು ?
ಎ) ಕ್ರಿಸ್ ಮಸ್ ಬಿ) ಯುಗಾದಿ ಸಿ) ದಸರ ಡಿ) ರಂಜಾನ್
4. ಒಂದು ಹೆಬ್ಬಾವು ಆಹಾರವಿಲ್ಲದೆ ಇಷ್ಟು ವರ್ಷ ಬದುಕು ಬಲ್ಲದು

ಎ) 4 ವರ್ಷ ಬಿ) 1 ವರ್ಷ ಸಿ) 2 ವರ್ಷ ಡಿ) 3 ವರ್ಷ

5. ಅಕ್ಕಿಯಲ್ಲಿರುವ ಜೀವಸತ್ವ ಇದಾಗಿದೆ.

ಎ) ಬಿ ಬಿ) ಡಿ ಸಿ) ಎ ಡಿ) ಸಿ

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ (ಸುಲಭ)

6. ನಾವು ತಿನ್ನುವ ಆಹಾರವು ____________ ಮತ್ತು ____________ ಮೂಲಗಳಿಂದ ಬರುತ್ತದೆ.
7. ಸಮೂಹ ಭೋಜನ ಸಂದರ್ಭದಲ್ಲಿ ಜನರು ____________, ____________ ಮತ್ತು ____________ ಒದಗಿಸುವ ಮೂಲಕ ಸಹಕಾರ ನೀಡುತ್ತಾರೆ.
8. ಶಾಲೆಯಲ್ಲಿ ಮಧ್ಯಾಹ್ನ ಭೋಜನ ಒಂದು ____________ ಭೋಜನದ ಉದಾಹರಣೆ ಆಗಿದೆ.
9. ಆಹಾರವನ್ನು ಅಡುಗೆ ಮಾಡುವ ಸ್ಥಳದಲ್ಲಿ ಸರಿಯಾದ ____________ ಮತ್ತು ____________ ಇರಬೇಕು.
10. ಮಂಗಳೂರು ಮತ್ತು ಉಡುಪಿ ಹಾಗೂ ಕರಾವಳಿ ಜಿಲ್ಲೆಗಳ ಜನರು ವಿಶೇಷ ಆಹಾರವಾಗಿ ____________ ತಿನ್ನುತ್ತಾರೆ.
11. ಬೆಳಗಾವಿ ಮತ್ತು ಬೀದರ್ ನಂತಹ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿನ ಮುಖ್ಯ ಆಹಾರ ____________ ಆಗಿದೆ.
12. ವಿಟಮಿನ್ B ಬಹುಪಾಲು ____________ ಯ ಹೊರಪದರದಲ್ಲಿ ದೊರೆಯುತ್ತದೆ.
13. ____________ ತರಕಾರಿಗಳನ್ನು ತಿಂದರೆ ಹೆಚ್ಚು ಪೋಷಕಾಂಶ ಉಳಿಯುತ್ತದೆ.
14. ____________ ತಿಂದ ನಂತರ ಆಹಾರದ ಪೋಷಕಾಂಶ ಉತ್ತಮವಾಗಿ ಜೀರ್ಣವಾಗುತ್ತದೆ.
15. ಸಾಮೂಹಿಕ ಭೋಜನದ ಸ್ಥಳ ____________ ಮತ್ತು ____________ ಮುಕ್ತವಾಗಿರಬೇಕು

.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

16. ಸಾಮೂಹಿಕ ಭೋಜನ ಎಂದರೆ ಬಹುಜನರು ಒಟ್ಟಾಗಿ ಊಟ ಮಾಡುವುದು. –
17. ಸಾಮೂಹಿಕ ಭೋಜನದಲ್ಲಿ ಅಡುಗೆ ಮಾಡುವವರು ಶುಚಿಯಾಗಿರಬೇಕು, ಸ್ವಚ್ಛ ಬಟ್ಟೆಯನ್ನು ತೊಟ್ಟಿರಬೇಕು
18. ಅಡುಗೆ ಮಾಡುವ ಸ್ಥಳದಲ್ಲಿ ಸರಿಯಾದ ಬೆಳಕು ಮತ್ತು ಗಾಳಿ ಹರಿವು ಅಗತ್ಯವಿದೆ. –
19. ಅಶುದ್ಧ ಪಾತ್ರೆಗಳಲ್ಲಿ ತಯಾರಾದ ಆಹಾರವನ್ನು ತಿನ್ನುವುದು ಸುರಕ್ಷಿತವಾಗಿದೆ. –
20. ಹೆಚ್ಚಾಗಿ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು. –

21. ಹಣ್ಣುಗಳನ್ನು ಊಟಕ್ಕೆ ಮುಂಚೆ ತಿಂದರೆ ಪೋಷಕಾಂಶ ಉತ್ತಮವಾಗಿ ಜೀರ್ಣವಾಗುತ್ತದೆ. –
22. ಪ್ರದೇಶದಲ್ಲಿ ಲಭ್ಯವಿರುವ ಆಹಾರದ ಆಧಾರದಲ್ಲಿ ಜನರ ಆಹಾರದ ಅಭ್ಯಾಸ ರೂಪುಗೊಳ್ಳುತ್ತದೆ. –
23. ಕಚ್ಚಾ ಅಥವಾ ಅರ್ಧ ಬೆಂದ ತರಕಾರಿಗಳಲ್ಲಿ ಹೆಚ್ಚು ಪೋಷಕಾಂಶ ಇರುತ್ತದೆ. –
24. ಕ್ರಿ.ಪೂ. 278 ರಲ್ಲಿ ಈಜಿಪ್ತ್ ನಲ್ಲಿ ಬೆಳೆದ ಮೂಲಂಗಿ ಕೆಂಪು ಬಣ್ಣದ್ದಾಗಿತ್ತು. –
25. ನೀವು ತಿನ್ನುವ ಆಹಾರದ ಬಹುಭಾಗ ದೇಹವನ್ನು ಬಿಸಿಯಾಗಿಡಲು ಬಳಸಲಾಗುತ್ತದೆ. –

26. ಹೊಂದಿಸಿ ಬರೆಯಿರಿ (ಸುಲಭ)

A	B
ಅ) ಸಾಮೂಹಿಕ ಭೋಜನ (Mass feeding)	ಅ) ಒಟ್ಟಾಗಿ ಊಟ ಮಾಡುವ ದೊಡ್ಡ ಗುಂಪು
ಆ) ಕರಾವಳಿ ಜಿಲ್ಲೆಗಳು (Coastal districts)	ಆ) ಜನರು ವಿಶೇಷವಾಗಿ ಮೀನು ತಿನ್ನುತ್ತಾರೆ
ಇ). ಮಧ್ಯಾಹ್ನದ ಊಟ (Midday meal)	ಇ) ಜೋಳ ಮುಖ್ಯ ಆಹಾರ
ಈ) ಉತ್ತರ ಜಿಲ್ಲೆಗಳು (Northern districts)	ಈ) ಸಾಮೂಹಿಕ ಭೋಜನದ ಉದಾಹರಣೆ
ಉ) ಭೋಜನದ ಮುನ್ನ ಎಚ್ಚರಿಕೆ (Precautions)	ಉ) ಹೊರಪದರದಲ್ಲಿ ಸಿಕ್ಕುತ್ತದೆ
ಊ) ಅಕ್ಕಿಯಲ್ಲಿ ವಿಟಮಿನ್ B (Vitamin B in rice)	ಊ) ಶುದ್ದ ನೀರು, ಶುದ್ದ ಪಾತ್ರೆಗಳು, ಶುದ್ದ ಸ್ಥಳ
ಋ) ಹೆಚ್ಚು ಬೇಯಿಸಿದ ತರಕಾರಿ (Overcooked veg.)	ಋ) ಹಣ್ಣಿನ ಪೋಷಕಾಂಶ ಉತ್ತಮವಾಗಿ ಜೀರ್ಣವಾಗುತ್ತದೆ
ಎ) ಹಣ್ಣು ತಿನ್ನುವುದು (Eating fruits)	ಎ) ಪೋಷಕಾಂಶ ನಾಶವಾಗುತ್ತದೆ
ಏ) ದೇಹದಲ್ಲಿ ಆಹಾರದ ಬಳಕೆ (Food use)	ಏ) ಕಪ್ಪು
ಐ) ಕ್ರಿ.ಪೂ. 278ರ ಈಜಿಪ್ಟ್ ನಲ್ಲಿ ಮೂಲಂಗಿ ಬಣ್ಣ	ಐ) ದೇಹ ಬಿಸಿಯಾಗಿಡಲು ಬಳಸಲಾಗುತ್ತದೆ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

27. ನಾವು ಆಹಾರವನ್ನು ಎಲ್ಲಿ ಪಡೆಯುತ್ತೇವೆ?
28. ಸಮೂಹ ಆಹಾರ ವಿತರಣೆ ಎಂದರೆ ಏನು?

29. ನಿಮ್ಮ ಜಿಲ್ಲೆಯಲ್ಲಿ ತಯಾರಾಗುವ ಒಂದು ವಿಶೇಷ ಆಹಾರವನ್ನು ಹೆಸರಿಸಿ?
30. ಸಮೂಹ ಆಹಾರ ವಿತರಣೆಯಲ್ಲಿ ಸ್ವಚ್ಛತೆಯ ಮಹತ್ವವೇನು?
31. ಮಂಗಳೂರು ಮತ್ತು ಉಡುಪಿ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬಳಸುವ ಆಹಾರ ಯಾವುದು?
32. ಸಮೂಹ ಆಹಾರ ವಿತರಣೆಯಲ್ಲಿ ಕುಡಿಯಲು ಏನು ನೀಡಬೇಕು?
33. ಬೆಳಗಾವಿ ಮೊದಲಾದ ಉತ್ತರ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಬಳಸುವ ಆಹಾರ ಯಾವುದು?
34. ಸಮೂಹ ಆಹಾರ ವಿತರಣೆಯಲ್ಲಿ ಸ್ವಯಂಸೇವಕರ ಪಾತ್ರವೇನು?
35. ವಿಭಿನ್ನ ಪ್ರದೇಶಗಳ ಆಹಾರ ಅಭ್ಯಾಸದ ಮಹತ್ವವೇನು?
36. ತರಕಾರಿಗಳನ್ನು ಅರ್ಧ ಬೇಯಿಸಿ ಸೇವಿಸಲು ಕಾರಣವೇನು?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

37. ಕೃಷಿಯಿಂದ ಆರಂಭಿಸಿ ಆಹಾರ ಉತ್ಪಾದನೆಯ ಪ್ರಕ್ರಿಯೆ ವಿವರಿಸಿ. (ಕಠಿಣ)
38. ಸಮೂಹ ಆಹಾರ ವಿತರಣೆಯಲ್ಲಿ ಅಡುಗೆ ಹಾಗೂ ಸೇವನೆ ವೇಳೆ ಯಾವ ಮುನ್ನೆಚ್ಚರಿಕೆಗಳು ಅಗತ್ಯ? (ಸಾಧಾರಣ)
39. ಆಹಾರ ಸಂಸ್ಕೃತಿಯ ವೈವಿಧ್ಯತೆ ಏಕೆ ಮುಖ್ಯ? (ಕಠಿಣ)
40. ವಿಭಿನ್ನ ಜಿಲ್ಲೆಗಳಲ್ಲಿ ಆಹಾರದ ಅಭ್ಯಾಸವನ್ನು ಪ್ರಭಾವಿತ ಮಾಡುವ ಪ್ರಮುಖ ಅಂಶಗಳೇನು?(ಸುಲಭ)
41. ಸಮೂಹ ಆಹಾರ ವಿತರಣೆಯಲ್ಲಿ ಸ್ವಚ್ಛತೆ ಕಾಪಾಡಲು ತೆಗೆದುಕೊಳ್ಳುವ ಕ್ರಮಗಳೇನು? (ಸಾಧಾರಣ)
42. ದೇಶದ ವಿಭಿನ್ನ ಪ್ರದೇಶಗಳಲ್ಲಿ ಆಹಾರದ ಅಭ್ಯಾಸ ಏಕೆ ವಿಭಿನ್ನವಾಗಿರುತ್ತದೆ ಎಂಬುದನ್ನು ವಿವರಿಸಿ. (ಸಾಧಾರಣ)
43. ನಿಮ್ಮ ಮನೆಯಲ್ಲಿಯೇ ಹಬ್ಬದ ಸಂದರ್ಭಗಳಲ್ಲಿ ತಯಾರಾಗುವ ವಿಶೇಷ ಆಹಾರಗಳನ್ನು ವಿವರಿಸಿ. (ಸುಲಭ)
44. ಸಮೂಹ ಆಹಾರ ವಿತರಣೆಯಲ್ಲಿ ಆಹಾರ ಮತ್ತು ಪರಿಸರವನ್ನು ಹೇಗೆ ಸ್ವಚ್ಛವಾಗಿ ಇಡಬಹುದು? (ಸಾಧಾರಣ)
45. "ಅಹಾರದ ಅಭ್ಯಾಸ ಆ ಪ್ರದೇಶದಲ್ಲಿ ಲಭ್ಯವಿರುವ ಆಹಾರದ ಮೇಲೆ ಅವಲಂಬಿತವಾಗಿದೆ" ಎಂಬ ವಾಕ್ಯದ ಅರ್ಥವೇನು? (ಕಠಿಣ)
46. ಆಹಾರದ ಅಭ್ಯಾಸಗಳು ಒಂದು ಪ್ರದೇಶದ ಅಥವಾ ಕುಟುಂಬದ ಸಂಪ್ರದಾಯಗಳೊಂದಿಗೆ ಹೇಗೆ ಸಂಬಂಧ ಹೊಂದಿವೆ ಎಂಬುದನ್ನು ವಿವರಿಸಿ. (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

47. ನಿಮ್ಮ ಮನೆಯಲ್ಲಿ ಪ್ರತಿದಿನ ತಯಾರಾಗುವ ಆಹಾರವನ್ನೂ, ಹಬ್ಬಗಳಲ್ಲಿ ತಯಾರಾಗುವ ಆಹಾರವನ್ನೂ ಪಟ್ಟಿ ಮಾಡಿ ಹಾಗೂ ಹೋಲಿಸಿ. (ಸುಲಭ)
48. ಹಳ್ಳಿಯ ಹಬ್ಬ ಅಥವಾ ಜಾತ್ರೆಯಲ್ಲಿ ಸಮೂಹ ಆಹಾರ ಸೇವನೆಯಲ್ಲಿ ಪಾಲ್ಗೊಂಡ ಅನುಭವದ ಬಗ್ಗೆ ಚಿಕ್ಕ ಟಿಪ್ಪಣಿ ಬರೆಯಿರಿ. (ಕಠಿಣ)
49. ನಿಮ್ಮ ಮನೆಯಲ್ಲಿ ಬಳಸುವ 10 ಆಹಾರ ವಸ್ತುಗಳನ್ನು ಪಟ್ಟಿ ಮಾಡಿ ಮತ್ತು ಅವು ಎಲ್ಲಿ ದೊರಕುತ್ತವೆ ಎಂಬುದನ್ನು ಬರೆಯಿರಿ. (ಸುಲಭ)
50. ಶಾಲೆಯಲ್ಲಿ ಮಧ್ಯಾಹ್ನದ ಭೋಜನ ಸೇವಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳೇನು?(ಸಾಧಾರಣ)
51. ನಿಮ್ಮ ಮತ್ತು ಸ್ನೇಹಿತರ ಮನೆಯ ಹಬ್ಬದ ಆಹಾರಗಳ ಹೋಲಿಕೆ ಮಾಡಿ. (ಸುಲಭ)
52. ಆಹಾರದ ಸ್ವಚ್ಛತೆಗೆ ಇರುವ ಮಹತ್ವ ಮತ್ತು ಸಮೂಹ ಆಹಾರದಲ್ಲಿ ಅದನ್ನು ಹೇಗೆ ಕಾಯ್ದುಕೊಳ್ಳಬಹುದು ಎಂಬುದನ್ನು ವಿವರಿಸಿ. (ಕಠಿಣ)
53. ನಿಮ್ಮ ಜಿಲ್ಲೆಯಲ್ಲಿ ತಯಾರಾಗುವ ವಿಶೇಷ ಆಹಾರದ ವಿವರಣೆಯೊಂದಿಗೆ ಇತರ ಪ್ರದೇಶದ ಆಹಾರದ ಹೋಲಿಕೆಯನ್ನು ನೀಡಿರಿ. (ಕಠಿಣ)
54. ಕಡಲ ತೀರದ ಪ್ರದೇಶ ಮತ್ತು ಬಯಲು ಸೀಮೆ ಪ್ರದೇಶದ ಜನರ ಆಹಾರದ ಅಭ್ಯಾಸದಲ್ಲಿ ಇರುವ ವ್ಯತ್ಯಾಸಗಳನ್ನು ಗುರುತಿಸಿ. (ಕಠಿಣ)
55. ಊಟಕ್ಕೆ ಮೊದಲು ಹಣ್ಣು ತಿನ್ನುವುದರಿಂದ ಏನು ಪ್ರಯೋಜನ? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು)

56. ನಿಮ್ಮ ಜಿಲ್ಲೆಯಲ್ಲಿ ವಿವಿಧ ಪ್ರದೇಶಗಳ ಭೂಗೋಳ ಮತ್ತು ಹವಾಮಾನ ಹೇಗೆ ಆಹಾರದ ಅಭ್ಯಾಸವನ್ನು ಪ್ರಭವಿಸುತ್ತದೆ ಎಂಬುದನ್ನು ವಿವರಿಸಿ. (ಕಠಿಣ)
57. ಹಳ್ಳಿಯ ಹಬ್ಬಗಳು ಮತ್ತು ಜಾತ್ರೆಗಳಲ್ಲಿ ಸಮೂಹ ಆಹಾರ ಸೇವನೆಯ ಪಾತ್ರ ಹಾಗೂ ಸಹಕಾರದ ಮಹತ್ವದ ಬಗ್ಗೆ ಒಂದು ವಿವರವಾದ ಪರಿಚ್ಛೇದ ಬರೆಯಿರಿ. (ಕಠಿಣ)
58. ನೀವು ಒಂದು ಜಾತ್ರೆಯಲ್ಲಿ ಇದ್ದೀರಿ ಎಂದು ಕಲ್ಪಿಸಿ, ಅಡುಗೆಯ ಪ್ರಕ್ರಿಯೆಯನ್ನು, ಸಾಮಗ್ರಿಗಳ ಸಂಗ್ರಹದಿಂದ ಆಹಾರ ವಿತರಣೆಯವರೆಗೆ ವಿವರಿಸಿ. ಸ್ವಯಂಸೇವಕರ ಪಾತ್ರವನ್ನು ಸೇರಿಸಿ. (ಕಠಿಣ)
59. ನಿಮ್ಮ ಜಿಲ್ಲೆಯ ಒಂದು ಪಾರಂಪರಿಕ ಆಹಾರದ ಬಗ್ಗೆ ಪರಿಚಯ ನೀಡಿ. ಅದು ಹೇಗೆ ತಯಾರಿಸಲಾಗುತ್ತದೆ ಮತ್ತು ಏಕೆ ವಿಶೇಷವಾಗಿದೆ ಎಂಬುದನ್ನು ವಿವರಿಸಿ. (ಕಠಿಣ)
60. ತಾಜಾ ಅಥವಾ ಅರ್ಧ ಬೇಯಿಸಿದ ತರಕಾರಿಗಳನ್ನು ತಿನ್ನುವುದರಿಂದ ಏನು ಲಾಭ? ಹೆಚ್ಚು ಬೇಯಿಸಿದ ತರಕಾರಿಗಳನ್ನು ಏಕೆ ತಪ್ಪಿಸಬೇಕು ? ಎಂಬುದರ ಬಗ್ಗೆ ಬರೆಯಿರಿ. (ಕಠಿಣ)

61. ನಿಮ್ಮ ಜಿಲ್ಲೆಯ ಆಹಾರದ ಅಭ್ಯಾಸ ಮತ್ತು ಪಕ್ಕದ ಜಿಲ್ಲೆಯ ಆಹಾರದ ಅಭ್ಯಾಸವನ್ನು ಹೋಲಿಸಿ, ಕನಿಷ್ಠ ಎರಡು ವಿಭಿನ್ನ ಆಹಾರ ಅಥವಾ ತಯಾರಿಕೆಗಳನ್ನು ಒಳಗೊಂಡಿರಲಿ. (ಕಠಿಣ)

62. ಸಮೂಹ ಆಹಾರ ವಿತರಣೆಯಲ್ಲಿ ಅಡುಗೆ ಪ್ರದೇಶಗಳ ಮತ್ತು ಅಡುಗೆ ಮಾಡುವವರ ಸ್ವಚ್ಛತೆ ಹೇಗೆ ಆಹಾರದ ಗುಣಮಟ್ಟವನ್ನು ಪ್ರಭಾವಿತ ಮಾಡುತ್ತದೆ ಎಂಬುದನ್ನು ವಿವರಿಸಿ. (ಕಠಿಣ)

63. ನೀವು ಜಾತ್ರೆ, ಹಬ್ಬ ಅಥವಾ ಸಮುದಾಯದ ಭೋಜನದಲ್ಲಿ ಭಾಗವಹಿಸಿದ ಅನುಭವವನ್ನು ವಿವರಿಸಿ. (ಕಠಿಣ)

64. ನಿಮ್ಮ ಜಿಲ್ಲೆಯ ಆಹಾರದವಿಭಿನ್ನ ಅಭ್ಯಾಸಗಳ ಬಗ್ಗೆ ಪ್ರಬಂಧವೊಂದನ್ನು ಬರೆಯಿರಿ. ನಿಮ್ಮ ಸಂಸ್ಕೃತಿಗೆ ಸಾಂದರ್ಭಿಕವಾದ ಆಹಾರ ಉದಾಹರಣೆಗಳನ್ನು ನೀಡಿ. (ಕಠಿಣ)

65. ಹಬ್ಬಗಳಲ್ಲಿ ಸಮೂಹ ಆಹಾರ ಸೇವನೆ ವೇಳೆ ಸಮುದಾಯದ ಪಾತ್ರವೇನು? ಆಹಾರದ ಉತ್ತಮ ವ್ಯವಸ್ಥೆಗೆ ಸಮುದಾಯದ ಕೊಡುಗೆಗಳ ಬಗ್ಗೆ ಬರೆಯಿರಿ. (ಕಠಿಣ)

66. ಜಾತ್ರೆ ಚಿತ್ರ ನೋಡಿ ಚಿಕ್ಕ ಟಿಪ್ಪಣಿ ಬರೆ. (ಕಠಿಣ)



ಪಾಠ 10: ವಸತಿ – ವೈವಿಧ್ಯತೆ

ಕಲಿಕಾ ಫಲಗಳು :-

1. ಕಾಲಕ್ರಮೇಣ ಮನೆ ನಿರ್ಮಾಣದಲ್ಲಿ ಕಂಡುಬರುವ ಬದಲಾವಣೆಗಳನ್ನು ಗುರುತಿಸುವರು
2. ನಗರ ಮತ್ತು ಗ್ರಾಮೀಣ ಪ್ರದೇಶಗಳ ಮನೆಯ ರಚನೆಗಳಲ್ಲಿ ಇರುವ ವ್ಯತ್ಯಾಸಳನ್ನು ತಿಳಿದುಕೊಳ್ಳುವರು. ಮತ್ತು ಸ್ಲಮ್ ಪ್ರದೇಶಗಳ ಬಗ್ಗೆ ತಿಳಿದುಕೊಳ್ಳುವರು
3. ಪಕ್ಷಿಗಳ ಗೂಡಿನ ವಿಧಗಳು, ಪ್ರಾಣಿಗಳ ನಿವಾಸಗಳು ಮತ್ತು ಅವುಗಳನ್ನು ನಿರ್ಮಿಸಲು ಬಳಸುವ ವಸ್ತುಗಳಲ್ಲಿ ಇರುವ ವಿಭಿನ್ನತೆಯನ್ನು ಗುರುತಿಸುವರು.
4. ಮನೆಯ ಅಗತ್ಯತೆ, ಮನೆ ನಿರ್ಮಾಣಕ್ಕೆ ಬೇಕಾಗುವ ವಸ್ತುಗಳು ಮತ್ತು ನಿರ್ಮಾಣ ವಿಧಾನಗಳನ್ನು ತಿಳಿದುಕೊಳ್ಳುವರು.
5. ನಮ್ಮ ರಾಜ್ಯದ ವಿವಿಧ ಭಾಗಗಳಲ್ಲಿ ಮನೆಯ ನಿರ್ಮಾಣ ಶೈಲಿಗಳನ್ನು ಮತ್ತು ವಸ್ತುಗಳನ್ನು ಪರಸ್ಪರ ಹೋಲಿಸಿ ತಿಳಿದುಕೊಳ್ಳುವರು.
6. ವಿಭಿನ್ನ ಹವಾಮಾನ ಪ್ರಕಾರ ಮತ್ತು ವಸ್ತುಗಳ ಲಭ್ಯತೆ ಪ್ರಕಾರ ಮನೆಯ ವಿನ್ಯಾಸ ಹೇಗೆ ಬದಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವರು.
7. ಬಹುಮಹಡಿ ಕಟ್ಟಡಗಳ ಹಿತ-ಹಾನಿ ಮತ್ತು ಅವುಗಳ ಪ್ರಯೋಜನಗಳನ್ನು ಚರ್ಚಿಸಿ ವಿವರಿಸುವರು.
8. ಜಾಗತಿಕ ಮಟ್ಟದಲ್ಲಿ ಅತಿ ಎತ್ತರದ ಕಟ್ಟಡಗಳ ಹಾಗೂ ಅತಿ ದೊಡ್ಡ ಸ್ಲಮ್‌ಗಳ ಕುರಿತು ಮಾಹಿತಿ ಪಡೆದುಕೊಳ್ಳುವರು.
9. ಕೈಯಲ್ಲಿ ಲಭ್ಯವಿರುವ ವಸ್ತುಗಳಿಂದ ಪ್ರಾಣಿಗಳ ವಾಸಸ್ಥಳಗಳ ಮಾದರಿಗಳನ್ನು ಸೃಷ್ಟಿಸುವ ಪ್ರಯತ್ನ ಮಾಡುವರು.
10. ಪರಿಸರ ಸ್ನೇಹಿ ಮನೆ ನಿರ್ಮಾಣದ ನೂತನ ವಿಧಾನಗಳು ಮತ್ತು ತಂತ್ರಗಳನ್ನು ತಿಳಿದುಕೊಳ್ಳುವರು.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ಮನೆ ನಮಗೆ ಏಕೆ ಅತ್ಯವಶ್ಯಕ ?

ಎ) ರಕ್ಷಣೆ ಬಿ) ಜೀವಸಲು ಸಿ) ಬದುಕುಲು ಡಿ) ವಾಸಮಾಡಲು

2. ದುಬೈನಲ್ಲಿರುವ ಬುರ್ಜ್ ಖಲೀಫಾ ಪ್ರಪಂಚದ ಅತ್ಯಂತ ಎತ್ತರ ಕಟ್ಟಡ ಇದರ ಅಳತೆ ಎಷ್ಟು?

ಎ) 3722 ಅಡಿ ಬಿ) 2722 ಅಡಿ ಸಿ) 1722 ಅಡಿ ಡಿ) 0722 ಅಡಿ

3. ನಾವು ಎಂತಹ ಮನೆಗಳನ್ನು ಕಟ್ಟಿಕೊಳ್ಳಬಹುದು?

ಎ) ಪರಿಸರ ಸ್ನೇಹಿ ಬಿ) ಗಾಳಿ ಸ್ನೇಹಿ ಸಿ) ಮಳೆ ಸ್ನೇಹಿ ಡಿ) ಭೂಮಿ ಸ್ನೇಹಿ

4. ಗೀಜಗ ಎಲ್ಲಿ ವಾಸಿಸುತ್ತದೆ.?

ಎ) ಮನೆ ಬಿ) ಗುಹೆ ಸಿ) ಗೂಡು ಡಿ) ಮೇಲಿನ ಎಲ್ಲವೂ

5. ಮನೆಗಳ ನಿರ್ಮಾಣಕ್ಕೆ ಬಳಸುವ ವಸ್ತುಗಳು

ಎ) ಕಟ್ಟಿಗೆ ಬಿ) ಇಟ್ಟಿಗೆ ಸಿ) ಸಿಮೆಂಟ್ ಡಿ) ಎಲ್ಲವೂ

ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ (ಸುಲಭ)

6. ಜೇವರ್ಗಿಯ ಜನರು ತಮ್ಮ ಮನೆಗಳನ್ನು ____________ ಕಲ್ಲುಗಳನ್ನು ಬಳಸಿ ನಿರ್ಮಿಸುತ್ತಾರೆ.
7. ಹೆಚ್ಚಿನ ಮಳೆಯಾಗುವ ಪ್ರದೇಶಗಳಲ್ಲಿನ ಮನೆಗಳ ಮೇಲ್ಛಾವಣಿ ____________ ಆಗಿರುತ್ತವೆ.
8. ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಲು ____________,ಇಟ್ಟಿಗೆಗಳು ಮತ್ತು ಉಕ್ಕಿನ ರಾಡುಗಳನ್ನು ಬಳಸುತ್ತಾರೆ.
9. ಕೊಳಗೇರಿ ಪ್ರದೇಶಗಳಲ್ಲಿ ಸರಿಯಾದ ____________ ಇಲ್ಲದೆ, ಶೌಚಾಲಯದ ಅನುಕೂಲತೆ ಕಡಿಮೆ ಇರುತ್ತದೆ.
10. ವೆಂಕ್ಕಜ್ಜಿಯ ಮೊದಲನೆಯ ಮನೆ ಮಣ್ಣಿನ ಗೋಡೆ ಮತ್ತು ____________ ಮಡಿಲಿನಿಂದ ನಿರ್ಮಿತವಾಗಿತ್ತು.
11. ವಿಶ್ವದ ಅತ್ಯುನ್ನತ ಕಟ್ಟಡ ____________ ದುಬೈನಲ್ಲಿ ಇದೆ.
12. ಜೇನುನೊಣಗಳು ____________ ಎಂಬ ತಮ್ಮ ಆಶ್ರಯವನ್ನು ಮೇಣದಿಂದ ನಿರ್ಮಿಸುತ್ತವೆ.
13. ಭಾರತದಲ್ಲಿನ ಅತಿದೊಡ್ಡ ಕೊಳಗೇರಿ ಪ್ರದೇಶ ____________ಮುಂಬೈನಲ್ಲಿದೆ.
14. ಮನೆ ಕಟ್ಟುವಲ್ಲಿ ಬಳಸುವ ವಸ್ತುಗಳು ಸ್ಥಳೀಯ ____________ ಮತ್ತು ____________ ಮೇಲೆ ಆಧಾರಿತವಾಗಿವೆ.
15. ಕೆಲವು ಹಳ್ಳಿಗಳಲ್ಲಿನ ಮನೆಗಳಲ್ಲಿ ಗೋಡೆ ಮತ್ತು ನೆಲವನ್ನು ಲೇಪಿಸಲು ____________ ಮತ್ತು ನೀರನ್ನು ಬಳಕೆ ಮಾಡುತ್ತಾರೆ.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

16. ಹೆಚ್ಚು ಮಳೆಯಾಗುವ ಪ್ರದೇಶಗಳ ಮನೆಗಳಲ್ಲಿ ಸಮತಟ್ಟಾದ ಮೇಲ್ಛಾವಣಿ ಇರುತ್ತವೆ.–
17. ಬಹುಮಹಡಿ ಕಟ್ಟಡಗಳಲ್ಲಿ ಲಿಫ್ಟ್ ಮತ್ತು ಮೆಟ್ಟಿಲುಗಳಿರುತ್ತವೆ. –
18. ಕೊಳಗೇರಿಗಳಲ್ಲಿ ಉತ್ತಮ ಗಾಳಿಯ ಹರಿವು ಮತ್ತು ಸ್ವಚ್ಛ ಪರಿಸರ ಇರುತ್ತದೆ. –

19. ಪ್ರಾಣಿಗಳು ಆಶ್ರಯ ನಿರ್ಮಿಸಲು ಯಾವಾಗಲೂ ಒಂದೇ ರೀತಿಯ ವಸ್ತುಗಳನ್ನು ಬಳಸುತ್ತವೆ. –
20. ಸಿಮೆಂಟ್ ಮತ್ತು ಉಕ್ಕುಗಳು ಆಧುನಿಕ ಕಟ್ಟಡಗಳಲ್ಲಿ ಸಾಮಾನ್ಯವಾಗಿ ಬಳಸುವ ವಸ್ತುಗಳು. –
21. ಪಿಗ್ಮಿಗಳು ನಿರ್ಮಿಸುವ ಗುಹೆಗಳು ಬಹುಶಃ ದೊಡ್ಡ ಪ್ರದೇಶವನ್ನು ವ್ಯಾಪಿಸುತ್ತವೆ. –
22. ಹುಲ್ಲು ಅಥವಾ ಕೊಳಗಳಿಂದ ತಯಾರಾದ ಛಾವಣಿ 'ತಾರಸಿ ಛಾವಣಿ' ಎನ್ನುತ್ತಾರೆ. –
23. ಜೇವರ್ಗಿಯ ಮನೆಗಳ ಛಾವಣಿಯನ್ನು ಸಾಮಾನ್ಯವಾಗಿ ಲೋಹದ ಶೀಟುಗಳಿಂದ ಮಾಡುತ್ತಾರೆ.-
24. ಬಹುಮಹಡಿ ಕಟ್ಟಡಗಳು ನಗರಗಳಲ್ಲಿ ಹೆಚ್ಚು ವಾಸಸ್ಥಾನ ಒದಗಿಸುತ್ತವೆ. –
25. ಮರಗುಟಿಕ ಮರದೊಳಗೆ ಪೊಟರೆ ಮಾಡುವ ಮೂಲಕ ಗೂಡು ತಯಾರಿಸುತ್ತದೆ. –
26. **ಹೊಂದಿಸಿ ಬರೆಯಿರಿ (ಸುಲಭ)**

A (ಪ್ರಾಣಿ/ಪಕ್ಷಿ)	**ಗೂಡುಗಳನ್ನು ಕಟ್ಟುವ ವಿಧಾನ**
ಅ) ಬಿಳಿ ಇರುವೆ (White ant)	ಅ) ಕಡ್ಡಿಗಳು ಮತ್ತು ಹುಲ್ಲುಗಳಿಂದ ತಯಾರಿಸಿದ ಗೂಡು
ಆ) ಗುಬ್ಬಚ್ಚಿ (Sparrow)	ಆ) ಮಣ್ಣು ಮತ್ತು ಮಣ್ಣಿನಿಂದ ತಯಾರಿಸಿದ ಚಿಕ್ಕ ಗುಂಡಿಗಳು
ಇ) ಜೇನು ನೊಣ (Honey bee)	ಇ) ಹುಲ್ಲು ಮತ್ತು ಕಡ್ಡಿಗಳಿಂದ ಮಾಡಿದ ಗೂಡು
ಈ) ಜಾಲೆ ಹಕ್ಕಿ (Weaver bird)	ಈ) ಮೇಣದಿಂದ ತಯಾರಿಸಿದ ಗೂಡು
ಉ) ಮರಕೊಕ್ಕರೆ (Woodpecker)	ಉ) ಮರದೊಳಗಿನ ತೆರೆಗಳಲ್ಲಿ ಗೂಡು ನಿರ್ಮಿಸುತ್ತದೆ
ಊ) ಗಿಳಿ (Parrot)	ಊ) ಮರದೊಳಗೆ ಪೊಟರೆ ಮಾಡಿ ಗೂಡು ನಿರ್ಮಿಸುತ್ತದೆ
ಋ) ಮೀನು (Fish)	ಋ) ಕಾಡಿನಲ್ಲಿ ಬಿಲ (ಗುಹೆ)
ಎ) ಹುಲಿ (Tiger)	ಎ) ನೀರಿನಲ್ಲಿರುವ ಪ್ರದೇಶಗಳು (ಜಲಾವಾಸ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

27. ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ಮನೆಗಳನ್ನು ಕಟ್ಟಲು ಯಾವ ವಸ್ತುಗಳನ್ನು ಬಳಸಲಾಗುತ್ತದೆ?

28. ಚಿಕ್ಕಮಗಳೂರಿನ ಕೊಪ್ಪದಲ್ಲಿ ಸಾಮಾನ್ಯವಾಗಿ ಯಾವ ರೀತಿಯ ಮೇಲ್ಛಾವಣಿ ಬಳಕೆಯಲ್ಲಿದೆ?
29. ಬಹುಮಹಡಿ ಕಟ್ಟಡಗಳು ಎಂದರೆ ಏನು?
30. ಬೆಂಗಳೂರು ನಗರದಲ್ಲಿ ಮೇಲ್ಛಾವಣಿ ನಿರ್ಮಾಣಕ್ಕೆ ಬಳಸುವ ಒಂದು ವಸ್ತುವಿನ ಹೆಸರನ್ನು ಬರೆಯಿರಿ
31. ಬಹುಮಹಡಿ ಕಟ್ಟಡಗಳ ಪ್ರಮುಖ ದುಷ್ಪರಿಣಾಮ ಏನು?
32. ಕುಡಿವಾಡಿ/ ಕೊಳಗೇರಿ (ಸ್ಲಮ್) ಎಂದರೆ ಏನು?
33. ಚಿಕ್ಕಮಗಳೂರಿನಂತಹ ಪ್ರದೇಶಗಳಲ್ಲಿ ಹುಲ್ಲು ಉಪಯೋಗಿಸುವ ಲಾಭವೇನು?
34. ವೆಂಕಜ್ಜಿಯ ಬಾಲ್ಯದ ಮನೆಯ ಗೋಡೆ ಕಟ್ಟಲು ಬಳಸಿದ ಪರಂಪರೆ ವಸ್ತು ಯಾವುದು?
35. ಆಧುನಿಕ ಬಹುಮಹಡಿ ಕಟ್ಟಡಗಳಲ್ಲಿ ಬಳಸುವ ಒಂದು ವಸ್ತು ಹೆಸರಿಸು.
36. ವೆಂಕಜ್ಜಿ ತಮ್ಮ ಬಾಲ್ಯದಲ್ಲಿ ಯಾವ ರೀತಿಯ ಮನೆಯಲ್ಲಿ ವಾಸವಿದ್ದರು?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

37. ಜೇವರ್ಗಿಯಲ್ಲಿ ಕಲ್ಲುಗಳಿಂದ ಮನೆ ನಿರ್ಮಾಣ ಮಾಡುವ ಕಾರಣವೇನು? (ಸುಲಭ)
38. ಕೊಪ್ಪದಲ್ಲಿ ಗೊಬ್ಬರದ ಮೇಲ್ಛಾವಣಿಗಳನ್ನು ಬಳಸುವ ಪ್ರಮುಖ ಕಾರಣವೇನು? (ಕಠಿಣ)
39. ಬಹುಮಹಡಿ ಕಟ್ಟಡಗಳ ಲಾಭ ಹಾಗೂ ನಷ್ಟಗಳೆನ್ನುವುದು ಯಾವುದು? (ಕಠಿಣ)
40. ವಿವೇಕ್ ವಿವರಿಸಿದಂತೆ ಕುಡಿವಾಡಿಗಳಲ್ಲಿ ಸಾಮಾನ್ಯ ಸಮಸ್ಯೆಗಳು ಯಾವುವು? (ಕಠಿಣ)
41. ವೆಂಕಜ್ಜಿಯ ಕುಟುಂಬ ಹಟ್ಟಿ ಬೆಂಕಿಯಲ್ಲಿ ಸುಟ್ಟ ನಂತರ ಹೊಸ ಮನೆ ಏಕೆ ಕಟ್ಟಿತು? (ಸುಲಭ)
42. ಕಾಲಕ್ರಮೇಣ ಮನೆ ನಿರ್ಮಾಣ ಶೈಲಿ ಹೇಗೆ ಬದಲಾಗಿದೆ ಎಂಬುದನ್ನು ವಿವರಿಸಿ. (ಕಠಿಣ)
43. ಮನೆ ನಿರ್ಮಾಣಕ್ಕೆ ಬಳಸುವ ವಸ್ತುಗಳು ಸ್ಥಳೀಯ ಹವಾಮಾನಕ್ಕೆ ಹೇಗೆ ಹೊಂದಿಕೊಳ್ಳುತ್ತವೆ? (ಕಠಿಣ)
44. ವೆಂಕಜ್ಜಿಯ ಮದುವೆಯ ನಂತರ ಅವರ ಮನೆಯ ಜನರು ಯಾವ ವಸ್ತುಗಳಿಂದ ಮನೆ ಕಟ್ಟಿದರು? (ಕಠಿಣ)
45. ಕೆಲವೊಂದು ಪ್ರದೇಶಗಳಲ್ಲಿ ಯಾಕೆ ಬಿದಿರು ಮನೆ ನಿರ್ಮಾಣಕ್ಕೆ ಬಳಸಲಾಗುತ್ತದೆ? (ಕಠಿಣ)

46. ಕುಡಿವಾಡಿಗಳ / ಕೊಳಗೇರಿ ಪರಿಸ್ಥಿತಿಗಳನ್ನು ಸುಧಾರಿಸಲು ಯಾವ ಬದಲಾವಣೆಗಳನ್ನು ಮಾಡಬಹುದು? (ಸುಲಭ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

47. ಬಾಲ್ಯದಲ್ಲಿ ವೆಂಕಜ್ಜಿಯವರು ವಾಸಿಸುತ್ತಿದ್ದ ಮನೆಯ ವೈಶಿಷ್ಟ್ಯಗಳು ಯಾವುವು? (ಕಠಿಣ)
48. ಬಾಲ್ಯದ ಮನೆ ಮತ್ತು ನವೀನ ಮನೆ ನಡುವಿನ ಬದಲಾವಣೆಗಳನ್ನು ವಿವರಿಸಿ. (ಕಠಿಣ)
49. ತೇನೇಹೆಣ್ಣು, ಇಲಿ ಹುಳು ಮತ್ತು ಹಕ್ಕಿಗಳ ಮನೆಗಳನ್ನು ಹೇಗೆ ಹೋಲಿಸಬಹುದು?(ಸಾಧಾರಣ)
50. ಕೊಳಕು ಪ್ರದೇಶಗಳ ಜನರು ಎದುರಿಸುವ ಮುಖ್ಯ ಸಮಸ್ಯೆಗಳು ಯಾವುವು?. (ಕಠಿಣ)
51. ಪ್ರತಿಕೂಲ ಪರಿಸರದಲ್ಲಿರುವ ಮನೆಗಳು ಹೇಗೆ ನಿರ್ಮಿಸಲ್ಪಡುತ್ತವೆ ಎಂಬುದಕ್ಕೆ ಉದಾಹರಣೆ ನೀಡಿ. (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು)

52. ಮನೆ ಹೇಗೆ ಬದಲಾಗುತ್ತವೆ ಮತ್ತು ಈ ಬದಲಾವಣೆಯು ಸಮಾಜದ ಮೇಲೆ ಹೇಗೆ ಪರಿಣಾಮ ಬೀರುತ್ತದೆ? (ಕಠಿಣ)
53. ನೀವು ಕೊಳಕು ಪ್ರದೇಶದಲ್ಲಿ ವಾಸಿಸುತ್ತಿದ್ದರೆ, ನಿಮ್ಮ ಪರಿಸರವನ್ನು ಸುಧಾರಿಸಲು ಯಾವ ಕ್ರಮಗಳನ್ನು ಕೈಗೊಳ್ಳುತ್ತೀರಿ? (ಕಠಿಣ)
54. ಪ್ರಾಣಿಗಳು ತಮ್ಮ ಮನೆಗಳನ್ನು ರಚಿಸುವ ವಿಧಾನವು ನಮಗೆ ಯಾವ ಪಾಠವನ್ನು ಕಲಿಸುತ್ತದೆ? (ಕಠಿಣ)
55. ಮನೆ ಕೇವಲ ಆಶ್ರಯವಲ್ಲ, ಅದು ಸಂಸ್ಕೃತಿ ಮತ್ತು ಪರಂಪರೆಯ ಪ್ರತಿಬಿಂಬವೂ ಹೌದು. ಈ ಹೇಳಿಕೆಯನ್ನು ವಿವರಿಸಿ. (ಕಠಿಣ)
56. ಮನೆ ಚಿತ್ರ ಬಿಡಿಸಿ ಬಣ್ಣ ಹಾಕಿ ಮನೆ ಕಟ್ಟಲು ಬಳಸುವ ಸಾಮಗ್ರಿಗಳ ಹೆಸರು ಬರೆಯಿರಿ. (ಕಠಿಣ)

ಪಾಠ 11: ಕಸ - ರಸ

ಕಲಿಕಾ ಫಲಗಳು :-

1. ಗ್ರಾಮೀಣ ಮತ್ತು ನಗರ ಪ್ರದೇಶದ ತ್ಯಾಜ್ಯಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬಲ್ಲರು.
(ಗ್ರಾಮೀಣ ಮತ್ತು ನಗರ ತ್ಯಾಜ್ಯಗಳಲ್ಲಿ ಇರುವ ವ್ಯತ್ಯಾಸವನ್ನು ವಿವರಿಸಬಲ್ಲರು.)

2. ತ್ಯಾಜ್ಯ ವಸ್ತುಗಳನ್ನು ಸರಿಯಾಗಿ ವಿಂಗಡಿಸುವ ಮತ್ತು ವಿಲೇವಾರಿ ಮಾಡುವ ವಿಧಾನಗಳನ್ನು ಅರ್ಥಮಾಡಿ ಕೊಳ್ಳುತ್ತಾರೆ. (ಒಣ ತ್ಯಾಜ್ಯ, ಹಸಿ ತ್ಯಾಜ್ಯ ಹಾನಿಕರ ತ್ಯಾಜ್ಯ, ರೋಗಪೂರಿತ ತ್ಯಾಜ್ಯಗಳನ್ನು ಗುರುತಿಸಿ ಸರಿಯಾಗಿ ನಿಭಾಯಿಸಲು ಕಲಿಯುತ್ತಾರೆ.)

3. ತ್ಯಾಜ್ಯವನ್ನು ಕಡಿಮೆ ಮಾಡುವ ಅಭ್ಯಾಸವನ್ನು ರೂಢಿಸಿಕೊಳ್ಳುತ್ತಾರೆ. (ಅವಶ್ಯಕತೆ ಕಡಿಮೆ ಮಾಡಿದರೆ ತ್ಯಾಜ್ಯವೂ ಕಡಿಮೆಯಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.)

4. ಪುನಃಬಳಕೆ (Reuse) ಮತ್ತು ಪುನರ್‌ಚಕ್ರಣ (Recycle) ತಂತ್ರಗಳನ್ನು ಅರ್ಥಮಾಡಿ ಕೊಳ್ಳುತ್ತಾರೆ.
(ಹಳೆಯ ವಸ್ತುಗಳನ್ನು ಹೊಸದಾಗಿ ಬಳಸುವುದು ಮತ್ತು ಮರುಬಳಕೆ ಮಾಡುವ ಕುರಿತು ತಿಳಿದುಕೊಳ್ಳುತ್ತಾರೆ.)

5. ಅವಶೇಷ ಆಹಾರ, ಕೊಳೆತ ತರಕಾರಿಗಳನ್ನು ಗೊಬ್ಬರವಾಗಿ ಪರಿವರ್ತಿಸಲು ಕಲಿಯುತ್ತಾರೆ.
(ಕಂಪೋಸ್ಟ್ ಮಾಡುವ ವಿಧಾನವನ್ನು ತಿಳಿದುಕೊಳ್ಳುತ್ತಾರೆ.)

6. ತ್ಯಾಜ್ಯ ವಸ್ತುಗಳಿಂದ ಹೊಸ ಉಪಯುಕ್ತ ವಸ್ತುಗಳನ್ನು ತಯಾರಿಸುವಲ್ಲಿ ಆಸಕ್ತಿ ತೋರಿಸುತ್ತಾರೆ.
(ಪ್ಲಾಸ್ಟಿಕ್ ಮುಂತಾದವುಗಳಿಂದ ಪೆನ್ ಸ್ಟ್ಯಾಂಡ್, ಪುಷ್ಪದಾನಿ ತಯಾರಿಸುತ್ತಾರೆ.)

7. ಜಲಾವಶೇಷವನ್ನು ಗಿಡಗಳಿಗೆ ಬಳಸಿ ಅಥವಾ ಸೋಕ್ ಪಿಟ್‌ಗೆ ಹರಿಸಲು ಪ್ರಾಮುಖ್ಯತೆ ನೀಡುತ್ತಾರೆ. (ನಿಲ್ಲಿಸಿದ ನೀರಿಂದ ಸೊಳ್ಳೆಗಳು ಹುಟ್ಟಿ ರೋಗ ಹರಡುವುದನ್ನು ತಡೆಗಟ್ಟುವುದು.)

8. ಮಾಲಿನ್ಯ ನಿಯಂತ್ರಣ ಮತ್ತು ಸ್ವಚ್ಛತೆ ಪಾಲನೆಗಾಗಿ ಸಮಾಜದಲ್ಲಿ ಜಾಗೃತಿ ಮೂಡಿಸುತ್ತಾರೆ.
(ಪೋಸ್ಟರ್ ಹಾಕುವುದು, ಸಹಪಾಠಿಗಳನ್ನು ಪ್ರೇರೇಪಿಸುವುದು, ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.)

9. ಮಣ್ಣಿನಲ್ಲಿ ವಸ್ತುಗಳು ಎಷ್ಟು ವರ್ಷದಲ್ಲಿ ಕ್ಷಯವಾಗುತ್ತವೆ ಎಂಬ ಅರಿವು ಹೊಂದುತ್ತಾರೆ.
(ಉದಾ: ಕಾಟನ್ ಬಟ್ಟೆ – ೧ ತಿಂಗಳು, ನೈಲಾನ್ ಬಟ್ಟೆ – ೫೦೦ ವರ್ಷಗಳು)

10. ವ್ಯಕ್ತಿಗತ ಹಾಗೂ ಸಮೂಹ ಮಟ್ಟದಲ್ಲಿ ತ್ಯಾಜ್ಯ ನಿರ್ವಹಣೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುತ್ತಾರೆ.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ

1. ಕಸದ ಪೆಟ್ಟಿಗೆಯ ಮೇಲೆ ಯಾವ ಸಂಕೇತವನ್ನು ಕಾಣಬಹುದು?
   A) ಹೂವಿನ ಚಿತ್ರ B) ಆಹಾರದ ಚಿತ್ರ C) ಪುನಚಕ್ರಣ ಸಂಕೇತ D) ನೀರಿನ ಟ್ಯಾಂಕ್
2. ಹಸಿರು ಬುಟ್ಟಿಯಲ್ಲಿ ಯಾವ ರೀತಿಯ ಕಸ ಹಾಕಬೇಕು?
   A) ತಿನ್ನದ ಕಸ B) ಹಾಸುಹೊರೆಯ ಕಸ C) ಪ್ಲಾಸ್ಟಿಕ್ ಕಸ D) ಗಾಜಿನ ತೂಕುಡಿಗಳ ಕಸ
3. ಕೆಂಪು ಬುಟ್ಟಿಯಲ್ಲಿ ಯಾವ ರೀತಿಯ ಕಸ ಹಾಕಬೇಕು?
   A) ಹಸಿರು ತರಕಾರಿ B) ಹಾಸುಹೊರೆಯ ಆಹಾರ C) ಪುನಚಕ್ರಣ ಆಗದ ಕಸ D) ತಾಜಾ ಹಣ್ಣುಗಳು
4. ನಾಡಿನ ಸ್ವಚ್ಛತೆ ಕಾಯ್ದುಕೊಳ್ಳಬೇಕಾದ್ದು ಯಾರು?
   A) ಶಾಲೆಯ ಶಿಕ್ಷಕ B) ಪುರಸಭೆ C) ಪ್ರತಿ ನಾಗರಿಕ D) ಪೊಲೀಸ್
5. ಗೊಬ್ಬರ ತಯಾರಿಸಲು ಬಳಸುವ ವಿಧಾನ ಯಾವದು?
   A) ಜೈವಿಕ ಪದ್ಧತಿ B) ಕೈಗಾರಿಕಾ ಪದ್ಧತಿ C) ತೈಲ ಪದ್ಧತಿ D) ರಾಸಾಯನಿಕ ವಿಧಾನ

ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ (ಸುಲ)

6. ತರಕಾರಿಗಳು, ಹಣ್ಣುಗಳ ತೊಳೆಗಳು, ಟೀ ತಿಂಡಿಗಳು ಮತ್ತು ಬ್ರೆಡ್ ತುಂಡುಗಳು _________ ತ್ಯಾಜ್ಯಕ್ಕೆ ಉದಾಹರಣೆಗಳಾಗಿವೆ.
7. ಪ್ಲಾಸ್ಟಿಕ್, ಗಾಜು, ಲೋಹದ ತುಂಡುಗಳು ಮತ್ತು ರಬ್ಬರ್ _________ ತ್ಯಾಜ್ಯಕ್ಕೆ ಉದಾಹರಣೆಗಳಾಗಿವೆ.
8. ಹಾನಿಕರ ತ್ಯಾಜ್ಯಗಳಲ್ಲಿ ಬಣ್ಣಗಳು, ಕೀಟನಾಶಕಗಳು ಮತ್ತು _________ ರಾಸಾಯನಿಕಗಳು ಸೇರಿವೆ.
9. ಗೊಬ್ಬರವನ್ನು _________ ತ್ಯಾಜ್ಯವನ್ನು ಪರಿವರ್ತಿಸಿ ತಯಾರಿಸಲಾಗುತ್ತದೆ.
10. ಮನೆಯ ಬಳಿಯ ನಿಂತ ನೀರು _________ ಮತ್ತು ನೊಣಗಳ ರಕ್ಷಣಾ ಸ್ಥಳವಾಗುತ್ತದೆ.
11. ಕಚ್ಚಾ ಸಾಮಗ್ರಿ ಆಯುವವರು_________ ತ್ಯಾಜ್ಯವನ್ನು ಸಂಗ್ರಹಿಸಿ ಮರುಬಳಕೆಗೆ ಸಹಾಯ ಮಾಡುತ್ತಾರೆ..

12. ಹಳೆಯ ಬಾಟಲಿಗಳು, ಡಬ್ಬಿಗಳು ಮತ್ತು ಪ್ಲಾಸ್ಟಿಕ್‌ಗಳನ್ನು _________ ಹಳೆಯ ವಸ್ತುಗಳನ್ನು ಸ್ವೀಕರಿಸುವವರಿಗೆ ನೀಡಬೇಕು.

13. ಬಳಸಿದ ಬ್ಯಾಂಡೇಜ್ ಮತ್ತು ಸಿರಿಂಜ್‌ಗಳು _________ ತ್ಯಾಜ್ಯವಾಗಿ ಪರಿಗಣಿಸಲಾಗುತ್ತವೆ.

14. ಕೆಡುವ ತ್ಯಾಜ್ಯದಿಂದ ತಯಾರಿಸಿದ ಗೊಬ್ಬರವು ಭೂಮಿಯ _________ ಹೆಚ್ಚಿಸಲು ಸಹಾಯಮಾಡುತ್ತದೆ.

15. ಬಳಸಿದ ಪ್ಲಾಸ್ಟಿಕ್, ಗಾಜು ಮತ್ತು ಕಾಗದದಿಂದ ತಯಾರಿಸಲಾದ ಹೊಸ ವಸ್ತುಗಳನ್ನು _________ ಎನ್ನುತ್ತಾರೆ.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲ□)

16. ಒದ್ದೆ ತ್ಯಾಜ್ಯದಲ್ಲಿ ತರಕಾರಿ ತೊಳೆಗಳು ಮತ್ತು ಉಳಿದ ಆಹಾರ ಬರುತ್ತದೆ. –

17. ಒಣ ತ್ಯಾಜ್ಯದಲ್ಲಿ ಉಳಿದ ಆಹಾರ ಮತ್ತು ಮಾಂಸ ಬರುತ್ತದೆ. –

18. ಹಾನಿಕರ ತ್ಯಾಜ್ಯವನ್ನು ಹೂಳು ಗೊಬ್ಬರ ಗುಂಡಿಯಲ್ಲಿ ಹಾಕಬೇಕು. –

19. ನಿಂತ ನೀರಿನಲ್ಲಿ ಸೊಳ್ಳೆಗಳು ನೆಲೆಸುವ ಮೂಲಕ ಕಾಯಿಲೆ ಹರಡಬಹುದು. –

20. ಮರುಬಳಕೆ ಎಂದರೆ ತ್ಯಾಜ್ಯವನ್ನು ಹೊಸದಾಗಿ ಉಪಯುಕ್ತ ವಸ್ತುಗಳನ್ನಾಗಿ ಪರಿವರ್ತಿಸುವುದು. –

21. ಪ್ಲಾಸ್ಟಿಕ್ ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಸುಳಿಯುತ್ತದೆ. –

22. ಹೂಳು ಗೊಬ್ಬರವನ್ನು ಸಸ್ಯ ಬೆಳೆಸಲು ಮತ್ತು ಮಣ್ಣಿನ ಫಲವತ್ತತೆ ಹೆಚ್ಚಿಸಲು ಬಳಸಬಹುದು. –

23. ಕಚ್ಚಾ ಸಾಮಗ್ರಿ ಆಗುವವರು ಹೂಳು ಗೊಬ್ಬರ ತಯಾರಿಸಲು ಒದ್ದೆ ತ್ಯಾಜ್ಯ ಸಂಗ್ರಹಿಸುತ್ತಾರೆ. –

24. ತ್ಯಾಜ್ಯ ಕಡಿಮೆ ಮಾಡಲು ಪ್ಲಾಸ್ಟಿಕ್ ಗಳ ಬಳಕೆಯನ್ನು ಕಡಿಮೆ ಮಾಡುವುದು ಉತ್ತಮ. –

25. ಬಳಸಿದ ಬ್ಯಾಂಡೇಜಗಳು ಮತ್ತು ಸೂಜಿಗಳು ಮಾಲಿನ್ಯಕಾರಿ ತ್ಯಾಜ್ಯದ ಉದಾಹರಣೆಗಳು. –

26.ಹೊಂದಿಸಿ ಬರೆಯಿರಿ (ಸುಲ□)

A	B
ಅ) ಒಣ ತ್ಯಾಜ್ಯ (Dry waste)	ಅ) ತರಕಾರಿ ತೊಳೆಗಳು, ಉಳಿದ ಆಹಾರ
ಆ) ಒದ್ದೆ ತ್ಯಾಜ್ಯ (Wet waste)	ಆ) ಪ್ಲಾಸ್ಟಿಕ್, ಗಾಜು, ಲೋಹದ ತುಂಡುಗಳು
ಇ) ಮಾಲಿನ್ಯಕಾರಿ ತ್ಯಾಜ್ಯ	ಇ) ಬಣ್ಣಗಳು, ಕೀಟನಾಶಕಗಳು, ಬ್ಯಾಟರಿಗಳು
ಈ) ಹಾನಿಕರ ತ್ಯಾಜ್ಯ (Hazardous)	ಈ) ಬಳಸಿದ ಬ್ಯಾಂಡೇಜ್, ಸಿರಿಂಜ್‌ಗಳು

A	B
ಉ) ಹೂಳು ಗೊಬ್ಬರ (Compost)	ಉ) ಮರುಬಳಕೆ ಅಥವಾ ಮರುಸೃಷ್ಟಿಗಾಗಿ ಒಣ ತ್ಯಾಜ್ಯ
ಊ) ರಾಕ್ಪಿಕರ್ಸ್ / ಚಿಕಲಿಗರು ಸಂಗ್ರಹಿಸುತ್ತಾರೆ	ಊ) ಕೆಟ್ಟಿರುವ ಒದ್ದೆ ತ್ಯಾಜ್ಯದಿಂದ ತಯಾರಿಸಿದ ಗೊಬ್ಬರ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಒಂದು ಅಂಕದ ಪ್ರಶ್ನೆಗಳು)(ಸುಲ□)

27. ಕಸದ ಅರ್ಥವೇನು?
28. ಪಾಠದಲ್ಲಿ ಉಲ್ಲೇಖಿಸಲಾದ ಎರಡು ವಿಧದ ಕಸ ಹೆಸರಿಸಿ.
29. ತರಕಾರಿಗಳ ತೊಗಟೆ ಮತ್ತು ಹಣ್ಣುಗಳ ತೊಳೆಗಳನ್ನು ಏನು ಮಾಡಬೇಕು?
30. ಅಪಾಯಕಾರಿಯಾದ ಎರಡು ರೀತಿಯ ಕಸ ಹೆಸರಿಸಿ.
31. ಪುನರ್ಬಳಕೆ ಎಂದರೇನು?
32. ಕಸ ಸಂಗ್ರಹಣೆಯಲ್ಲಿ ಕಸ ಆಯಿವವರು ಪಾತ್ರವೇನು?
33. ಮನೆಯ ಹೊರ□□ ನೀರು ನಿಂತಿದ್ದರೆ ಏನು ಆಗುತ್ತದೆ?
34. ಪ್ಲಾಸ್ಟಿಕ್ ಬ್ಯಾಗ್ ಗಳ ಬಳಕೆಯನ್ನು ಏಕೆ ಕಡಿಮೆ ಮಾಡಬೇಕು?
35. ಕೊಳೆತ ಕಸದ ಒಂದು ಉಪಯೋಗವನ್ನು ಹೇಳಿ.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಎರಡು ಅಂಕದ ಪ್ರಶ್ನೆಗಳು)

36. ಕಸದ ಪುನರ್ಬಳಕೆಯ ಎರಡು ವಿಧಾನಗಳನ್ನು ತಿಳಸಿ(ಸುಲಭ)
37. ಅಪಾಯಕಾರಿಯಾದ ಕ□ □□□□□□□□ ಮಾಡುವುದು ಏಕೆ ಮುಖ್ಯ? ಸಸ್ಯ ಬೆಳವಣಿಗೆಯಲ್ಲಿ ಗೊಬ್ಬರದ ಪಾತ್ರವೇನು?(ಕ□□□)
38. ನಿಂತ ನೀರಿನಿಂದ ಉಂಟಾಗುವ ರೋಗಗಳನ್ನು ಹೇಗೆ ತಡೆಗಟ್ಟಬಹುದು? (ಕಠಿಣ)
39. ಪ್ಲಾಸ್ಟಿಕ್ ಮತ್ತು ಡಬ್ಬಿಗಳಂತಹ ನಿಷ್ಕ್ರಿಯ ಕಸವನ್ನು ಏನು ಮಾಡಬೇಕು? (ಕಠಿಣ)
40. ಉಳಿದ ಆಹಾರ ಅಥವಾ ಅಡಿಗೆ ಮನೆಯ ಕಸದ ಜೊತೆ ಏನು ಮಾಡಬೇಕು? (ಸಾಧಾರಣ
41. ಹಳ್ಳಿಗಳಲ್ಲಿ ಒದ್ದೆಯಾದ ಕಸವನ್ನು ರಸಾಯನಿಕವಾಗಿ ಹೇಗೆ ಉಪಯೋಗಿಸಬಹುದು? (ಕಠಿಣ)
42. ಒಣ ಮತ್ತು ಒದ್ದೆ ಕಸದ ನಡುವಿನ ವ್ಯತ್ಯಾಸ ಏನು? (ಕಠಿಣ)
43. ಕಸದ ಪ್ರಮಾಣವನ್ನು ಕಡಿಮೆ ಮಾಡಲು ನಾವು ಏನು ಮಾಡಬೇಕು? (ಸಾಧಾರಣ
44. ಪರಿಸರದಲ್ಲಿ ಪ್ಲಾಸ್ಟಿಕ್ ಕಸ ಸಮಯದೊಂದಿಗೆ ಏನು ಮಾಡುತ್ತದೆ? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ಮೂರು ಅಂಕದ ಪ್ರಶ್ನೆಗಳು)

45. ವಿವಿಧ ವಿಧದ ಕಸಗಳು ಯಾವುವು ಮತ್ತು ಅವುಗಳನ್ನು ಹೇಗೆ ನಿರ್ವಹಿಸಬೇಕು? (ಕಠಿಣ)

46. ಒದ್ದೆ ಕಸವನ್ನು ಒಬ್ಬರವಾಗಿ ಪರಿವರ್ತಿಸಲು ಬಳಸುವ ವಿಧಾನವನ್ನು ವಿವರಿಸಿ. (ಕಠಿಣ)

47. ಪುನ ಚಕ್ರಣ ಹೇಗೆ ಕಸವನ್ನು ಕಡಿಮೆ ಮಾಡುತ್ತದೆ ಮತ್ತು ಸಂಪತ್ತು ಉಳಿಸಲು ಸಹಾಯ ಮಾಡುತ್ತದೆ ಎಂಬುದನ್ನು ವಿವರಿಸಿ. (ಕಠಿಣ)

48. ಮಾಲಿನ್ಯವಾದ ಕಸದ ವೈವಿಧ್ಯಮಯಕ್ಕೆ ಸೂಕ್ತವಾದ ವಿಧಾನವೊಂದನ್ನು ವಿವರಿಸಿ. (ಕಠಿಣ)

49. ಅಪಾಯಕಾರಿಯಾದ ಕಸವನ್ನು ಸರಿಯಾಗಿ ವಿಲೇವಾರಿ ಮಾಡದಿದ್ದರೆ ಏನು ಸಂಭವಿಸಬಹುದು? (ಕಠಿಣ)

50. ಮನೆಯಲ್ಲಿರುವ ಪ್ಲಾಸ್ಟಿಕ್ ವಸ್ತುಗಳ ಪುನರ್ಬಳಕೆಯ ಲಾಭಗಳೇನು? (ಸಾಧಾರಣ

51. ನಗರ ಪ್ರದೇಶದಲ್ಲಿ ಕಸದ ಸಂರಕ್ಷಣೆಯ ಕೊರತೆಯಿಂದ ಉಂಟಾಗುವ ಪರಿಣಾಮಗಳೇನು? (ಸಾಧಾರಣ

52. ದೈನಂದಿನ ಜೀವನದಲ್ಲಿ ಕಸದ ಪ್ರಮಾಣವನ್ನು ಹೇಗೆ ಕಡಿಮೆ ಮಾಡಬಹುದು? ಉದಾಹರಣೆ ನೀಡಿ. (ಕಠಿಣ)

53. ಒಣ ಮತ್ತು ಒದ್ದೆ ಕಸವನ್ನು ಬೇರ್ಪಡಿಸುವುದು ಏಕೆ ಮುಖ್ಯ? (ಸಾಧಾರಣ

54. ಸಾರ್ವಜನಿಕ ಸ್ಥಳಗಳಲ್ಲಿ ನಾವು ನಿರಂತರವಾಗಿ ಕಸ ಎಸೆದರೆ ಏನು ಸಂಭವಿಸಬಹುದು? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ (ನಾಲ್ಕು ಅಂಕದ ಪ್ರಶ್ನೆಗಳು)

55. ಪಾಠದಲ್ಲಿ ಚರ್ಚಿಸಿದ ವಿಭಿನ್ನ ಕಸದ ವಿಧಾನಗಳ ಕುರಿತು ಚಿಕ್ಕ ಪರಿಚಯ ಬರೆಯಿರಿ. (ಕಠಿಣ)

56. ನೀವು ನಿಮ್ಮ ಮನೆ ಮತ್ತು ಶಾಲೆಯಲ್ಲಿ ಕಸವನ್ನು ಕಡಿಮೆ ಮಾಡುವುದು ಹೇಗೆ? ಕನಿಷ್ಠ ಮೂರು ಸಲಹೆ ನೀಡಿ. (ಸಾಧಾರಣ


57. ಹಳೆಯ ಪ್ಲಾಸ್ಟಿಕ್ ಬಾಟಲಿ, ಕಾಗದ, ಟಿನ್ ಮುಂತಾದ ವಸ್ತುಗಳನ್ನು ಏನು ಮಾಡಬಹುದು? ಪುನಶ್ಚಕ್ರಣದ ನಂತರದ ಉಪಯೋಗವನ್ನು ವಿವರಿಸಿ. (ಕಠಿಣ)

58. ಕಂಪೋಸ್ಟ್ ಮಾಡುವುದು ಪರಿಸರ ಮತ್ತು ಸಸ್ಯಗಳಿಗೆ ಹೇಗೆ ಲಾಭದಾಯಕ ?ಎಂದು ವಿವರಿಸಿ.(ಸಾಧಾರಣ)

59. ಮನೆಗಳಲ್ಲಿ ಕಸವನ್ನು ಬೇರ್ಪಡಿಸುವ ಮಹತ್ವವನ್ನು ಚರ್ಚಿಸಿ. ಇದು ಸರಿಯಾದ ನಿರ್ವಹಣೆಗೆ ಹೇಗೆ ಸಹಾಯ ಮಾಡುತ್ತದೆ? (ಕಠಿಣ)

60. ಕಸದ ಮತ್ತು ನಿಂತ ನೀರಿನಿಂದ ಉಂಟಾಗುವ ರೋಗಗಳನ್ನು ತಡೆಗಟ್ಟಲು ತಗೆದುಕೊಳ್ಳಬೇಕಾದ ಕ್ರಮಗಳನ್ನು ವಿವರಿಸಿ. (ಕಠಿಣ)

61. ದೈನಂದಿನ ಜೀವನದಲ್ಲಿ ಪ್ಲಾಸ್ಟಿಕ್ ಕಸದ ಪ್ರಮಾಣವನ್ನು ಕಡಿಮೆ ಮಾಡುವ ಬಗ್ಗೆ ಪ್ರಬಂಧ ಬರೆಯಿರಿ. (ಕಠಿಣ)
62. ನಿಮ್ಮ ಬೀದಿಗಳಲ್ಲಿ ಯಾವ ರೀತಿಯಲ್ಲಿ ಕಸವನ್ನು ಎಸೆದಿಲ್ಲ ಎಂದು ಖಚಿತ ಪಡಿಸಿಕೊಳ್ಳಬಹುದು ಎಂಬುದನ್ನು ವಿವರಿಸಿ. (ಕಠಿಣ)
63. ಅಪಾಯಕಾರಿಯಾದ ಕಸವು ಪರಿಸರದ ಮೇಲೆ ಬೀರುವ ಪರಿಣಾಮಗಳೇನು ಮತ್ತು ಅದನ್ನು ಹೇಗೆ ನಿರ್ವಹಿಸಬೇಕು? (ಕಠಿಣ)
64. ತಪ್ಪಾದ ರೀತಿಯಲ್ಲಿ ಕಸವನ್ನು ನಿರ್ವಹಿಸಿದರೆ ಪರಿಸರದ ಮೇಲೆ ಬೀರುವ ಪರಿಣಾಮಗಳೇನು? ಈ ಸಮಸ್ಯೆಗಳನ್ನು ಹೇಗೆ ನಿವಾರಿಸಬಹುದು? (ಕಠಿಣ)
65. ನಾಲ್ಕು ವಿಧದ ಕಸದ ತೊಟ್ಟಿಗೆ ಸರಿಯಾದ ಬಣ್ಣ ಹಾಕಿ ಕಸದ ವಿಧವನ್ನು ಹೆಸರಿಸು. (ಕಠಿಣ)



ಪಾಠ 12: ನಕ್ಷೆ ಕಲಿ – ದಾರಿ ತಿಳಿ

ಕಲಿಕಾ ಫಲಗಳು :-

1. ದಿಕ್ಕುಗಳನ್ನು ಗುರುತಿಸಲು ಸ್ಥಳೀಯ ಸಂಕೇತಗಳನ್ನು ಬಳಸಲು ಶಕ್ತರಾಗುತ್ತಾರೆ. (ಉದಾ: ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ದಿಕ್ಕುಗಳನ್ನು ಗುರುತಿಸುವುದು)
2. ಸರಳ ನಕ್ಷೆಗಳನ್ನು ರಚಿಸುವ ಪ್ರಾಥಮಿಕ ಕೌಶಲ್ಯವನ್ನು ಅರಿತುಕೊಳ್ಳುತ್ತಾರೆ. (ಉದಾ: ಕೊಠಡಿಯ ನಕ್ಷೆ, ಹಳ್ಳಿ ಅಥವಾ ಶಾಲೆಗೆ ಹೋಗುವ ಮಾರ್ಗದ ನಕ್ಷೆ)
3. ಭಿನ್ನ ಸಂಕೇತಗಳನ್ನು ಬಳಸಿಕೊಂಡು ಸ್ಥಳಗಳನ್ನು ಗುರುತಿಸಿ ನಕ್ಷೆಗಳನ್ನು ಬಿಡಿಸಬಲ್ಲರು.
(ಉದಾ: ಮನೆ, ತೊಟ್ಟಿಲು, ಶಾಲೆ, ದೇವಾಲಯ ಮುಂತಾದ ಸಂಕೇತಗಳು)
4. ನಕ್ಷೆಯಲ್ಲಿ ಒಂದು ವಸ್ತುವಿನ ಸ್ಥಾನವನ್ನು ಬೇರೆ ವಸ್ತುಗಳ ಪೋಷಕವಾಗಿ ಗುರುತಿಸಬಲ್ಲರು.
(ಉದಾ: ದೊಡ್ಡ ಮರದ ಆಧಾರದ ಮೇಲೆ ಪಕ್ಕದ ಸ್ಥಳಗಳ ದಿಕ್ಕುಗಳನ್ನು ಹೇಳುವುದು)
5. ಅಳತೆಯ ಪ್ರಕಾರ ನಕ್ಷೆ ತಯಾರಿಸಿ, ಗಾತ್ರವನ್ನು ಸೆಂಟಿಮೀಟರ್‌ನಲ್ಲಿ ಪರಿವರ್ತಿಸಲು ಕಲಿಯುತ್ತಾರೆ.
6. ನಕ್ಷೆಯಲ್ಲಿ ಚೌಕಗಳನ್ನು ಗುರುತಿಸಿ, ವಸ್ತುಗಳ ಸ್ಥಾನವನ್ನು ಅಕ್ಷರಗಳು ಮತ್ತು ಸಂಖ್ಯೆಗಳ ಬಳಕೆ ಮೂಲಕ ಗುರುತಿಸುತ್ತಾರೆ. (ಉದಾ: A1 ಚೌಕದಲ್ಲಿ ಕಿಟಕಿ, C3 ಚೌಕದಲ್ಲಿ ಮೇಜು ಇತ್ಯಾದಿ)
7. ದಿಕ್ಕುಗಳು ಮತ್ತು ಲ್ಯಾಂಡ್‌ಮಾರ್ಕ್‌ಗಳ ಆಧಾರದ ಮೇಲೆ ಮಾರ್ಗ ನಕ್ಷೆಗಳನ್ನು ತಯಾರಿಸಲು ಶಕ್ತರಾಗುತ್ತಾರೆ. (ಉದಾ: ಗಾಂಧಿ ವೃತ್ತದಿಂದ ತಾಲ್ಲೂಕು ಕಚೇರಿಗೆ ಹೋಗುವ ಮಾರ್ಗ ನಕ್ಷೆ)
8. ಬಸ್ ಪ್ರಯಾಣದ ಸಂದರ್ಭದಲ್ಲಿ ಕಾಣಬಹುದಾದ ಸ್ಥಳ ಗುರುತುಗಳನ್ನು ಗುರುತಿಸಲು ಮತ್ತು ಪಟ್ಟಿಯನ್ನಾಗಿಸಲು ಕಲಿಯುತ್ತಾರೆ. (ಉದಾ: ಹೋಟೆಲ್, ಆಸ್ಪತ್ರೆ, ಮೈದಾನ, ಶಾಲೆ ಇತ್ಯಾದಿ)
9. ನಕ್ಷೆಗಳಲ್ಲಿ ಉಪಯೋಗವಾಗುವ ಮಾನದಂಡ, ಗ್ರಿಡ್ (grid), ದಿಕ್ಕುಗಳು, ಲ್ಯಾಂಡ್ ಮಾರ್ಕ್‌ಗಳ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾರೆ.
10. ವಿಭಿನ್ನ ಮಾದರಿಯ ನಕ್ಷೆಗಳ (ಭೌಗೋಳಿಕ ನಕ್ಷೆ, ಹವಾಮಾನ ನಕ್ಷೆ, ರೈಲು ಮಾರ್ಗ ನಕ್ಷೆ, ಮಣ್ಣಿನ ನಕ್ಷೆ ಇತ್ಯಾದಿ) ಪರಿಚಯವನ್ನು ಪಡೆಯುತ್ತಾರೆ.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ಸೂರ್ಯ ಉದಯಿಸುವ ದಿಕ್ಕು ಯಾವುದು ?
ಎ) ಉತ್ತರ ಬಿ) ದಕ್ಷಿಣ ಸಿ) ಪಶ್ಚಿಮ ಡಿ) ಪೂರ್ವ

2. ಭಾರತದಲ್ಲಿ ಕರ್ನಾಟಕ ರಾಜ್ಯವು ಯಾವ ದಿಕ್ಕಿನಲ್ಲಿ ಇದೆ?

ಎ) ಉತ್ತರ ಬಿ) ದಕ್ಷಿಣ ಸಿ) ಪಶ್ಚಿಮ ಡಿ) ಪೂರ್ವ

3. ವಿಶ್ವ ಭೂಪಟವೇ _______ ಆಗಿದೆ.

ಎ) ನಕ್ಷೆ ಬಿ) ದಾರಿ ಸಿ) ದಿಕ್ಕು ಡಿ) ಭೂಮಿ

4. ಮೊಟ್ಟಮೊದಲ ಬಾರಿಗೆ ನಕ್ಷೆಗಳನ್ನು ರಚಿಸಿದವರು ಯಾರು ?

ಎ) ಭಾರತೀಯರು ಬಿ) ಈಜಿಪ್ತಿಯನ್ನರು ಸಿ) ಅಮೆರಿಕನ್ನರು ಡಿ) ಬ್ರಿಟೀಷರು

5. ಭಾರತದ ಉತ್ತರದಲ್ಲಿರುವ ಪ್ರಸಿದ್ಧ ಪರ್ವತ ಯಾವುದು ?

ಎ) ಮೌಂಟ್ ಎವರೆಸ್ಟ್ ಬಿ) ಹಿಮಾದ್ರಿ ಬೆಟ್ಟ ಸಿ) ಹಿಮಾಲಯ ಪರ್ವತ ಡಿ) ಕಾಂಚನಗಂಗ

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ (ಸುಲಭ)

6. ನಾಲ್ಕುಮುಖ್ಯ ದಿಕ್ಕುಗಳು _________, _________, _________ ಮತ್ತು _________.
7. ಪಾಠದ ಉದಾಹರಣೆಯಲ್ಲಿ ಎರಡು ಕಾಲಿಡಿಕೆಗಳು _________ ಮೀಟರ್‌ಗೆ ಸಮಾನವಾಗಿವೆ.
8. ಗ್ರಾಮ ನಕ್ಷೆಯಲ್ಲಿ ಉಲ್ಲೇಖ ಬಿಂದುವಾಗಿ ಬಳಸಿದ ದೊಡ್ಡ _________ ಮರ.
9. ಉದಾಹರಣೆಯಲ್ಲಿ ಕೊಠಡಿಯ ಉದ್ದ _________ ಮೀಟರ್‌ಗಳಾಗಿತ್ತು.
10. ನಕ್ಷೆಯಲ್ಲಿ ಉದ್ದವನ್ನು ಸಾಮಾನ್ಯವಾಗಿ _________ ಅಥವಾ _______ಗಳಲ್ಲಿ ಅಳೆಯಲಾಗುತ್ತದೆ.
11. ನಕ್ಷೆಗಳಲ್ಲಿ ಗೃಹಚೌಕ (grid) ರಚಿಸಲು ಸಹಾಯ ಮಾಡುವ ಕಲ್ಪಿತ ರೇಖೆಗಳು _________ ಮತ್ತು _________
12. _________ ನಕ್ಷೆಗಳು ಪರ್ವತಗಳು ಮತ್ತು ನದಿಗಳಂತಹ ಭೌತಿಕ ಲಕ್ಷಣಗಳನ್ನು ತೋರಿಸುತ್ತವೆ.
13. ಗ್ರಾಮ ನಕ್ಷೆಯಲ್ಲಿ ಅಂಚೆ ಕಚೇರಿ _________ ದಿಕ್ಕಿನಲ್ಲಿ ಸ್ಥಿತವಾಗಿದೆ.
14. ಯಾಸ್ಮಿನ್ ತನ್ನ ತರಗತಿಯ ಉದ್ದ ಹಾಗೂ ಅಗಲವನ್ನು ತನ್ನ _________ ಬಳಸಿ ಅಳೆಯುತ್ತಾಳೆ.
15. ತರಗತಿಯ ನಕ್ಷೆ ಬಿಡಿಸಲು ಬಳಸಿದ ಮಾಪನ 1 ಮೀಟರ್ = _______ ಸೆಂಟಿಮೀಟರ್‌ಗಳಾಗಿತ್ತು.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

16. ನಕ್ಷೆಯಲ್ಲಿ ಉತ್ತರ ದಿಕ್ಕು ಕೆಳಭಾಗದಲ್ಲಿರುತ್ತದೆ. –
17. ಕೊಠಡಿಯ ಉದ್ದ ಮತ್ತು ಅಗಲವನ್ನು ಕಾಲಿಡಿಕೆಗಳಿಂದ ಅಳೆಯಬಹುದು. –
18. ಮಾರ್ಗ ನಕ್ಷೆಯಲ್ಲಿ ಸ್ಥಳವನ್ನು ಗುರುತಿಸಲು ಪ್ರಾಮುಖ್ಯ ಸ್ಥಳ ಗುರುತು ಸಹಾಯ ಮಾಡುತ್ತದೆ.-
19. ರೇಖಾಂಶ ಮತ್ತು ಅಕ್ಷಾಂಶ ರೇಖೆಗಳು ಭೂಮಿಯ ಮೇಲೆ ಸರಿವಾದ ರೇಖೆಗಳಾಗಿವೆ. –
20. ನಕ್ಷೆ ಒಂದು ಉಲ್ಲೇಖ ಬಿಂದು ಆಧಾರದ ಮೇಲೆ ಸ್ಥಳದ ದಿಕ್ಕು ತೋರಿಸುತ್ತದೆ. –

21. ಪ್ರತಿಯೊಬ್ಬರ ಕಾಲಿಡಿಕೆ ಉದ್ದ ಒಂದೇ ರೀತಿ ಇರುತ್ತದೆ. –
22. ಮಾರ್ಗ ನಕ್ಷೆಯಲ್ಲಿ ಮಸೀದಿ ಒಂದು ಸ್ಥಳ ಗುರುತಾಗಿ ಬಳಸಬಹುದು. -
23. ನಕ್ಷೆಯ ಮಾಪನ ಮಾಪದಿಂದ ಸರಿಯಾದ ಅಳತೆಯನ್ನು ನಕ್ಷೆಯ ಅಳತೆಗೆ ಪರಿವರ್ತಿಸಬಹುದು. –
24. ನಕ್ಷೆಗಳು ಜನಸಂಖ್ಯೆಯ ಪ್ರದೇಶಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತಿಲ್ಲ. –
25. ನಕ್ಷೆಗಳನ್ನು ರಚಿಸಲು ಚಿಹ್ನೆಗಳನ್ನು ಮೊದಲು ಬಳಸದವರು ಗ್ರೀಕರು. –
26. **ಹೊಂದಿಸಿ ಬರೆಯಿರಿ (ಸುಲಭ)**

A	B
ಅ) ಯಾಸ್ಮಿನ್ (Yasmin)	ಅ) ನಕ್ಷೆಯ ಮುಖ್ಯ ದಿಕ್ಕು
ಆ) ಉತ್ತರ (North)	ಆ) ತನ್ನ ತರಗತಿಯ ನಕ್ಷೆ ಬಿಡಿಸಿದಳು
ಇ) ರೇಖಾಂಶ-ಅಕ್ಷಾಂಶಗಳು	ಇ) ಕೊಠಡಿಯ ಉದ್ದ ಮತ್ತು ಅಗಲವನ್ನು ಅಳೆಯಲು ಬಳಸಲಾಗುವುದು
ಈ) ಕಾಲಿಡಿಕೆಗಳು (Footsteps)	ಈ) ನಕ್ಷೆಯಲ್ಲಿ ಚೌಕ ರಚಿಸಲು ಕಲ್ಪಿತ ರೇಖೆಗಳು
ಉ) ಮಾಪನ ಮಾಪ (Scale)	ಉ) ಗ್ರಾಮ ನಕ್ಷೆಯ ಉಲ್ಲೇಖ ಬಿಂದು
ಊ) ಸ್ಥಳ ಗುರುತುಗಳು (Landmarks)	ಊ) ಮಾರ್ಗ ನಕ್ಷೆಯಲ್ಲಿ ಸ್ಥಳ ಗುರುತಿಸಲು ಸಹಾಯ ಮಾಡುತ್ತದೆ
ಋ) ಆಲದ ಮರ (Banyan Tree)	ಋ) ನಕ್ಷೆಯಲ್ಲಿ ಮೀಟರ್‌ಗಳನ್ನು ಸೆಂ.ಮೀ.ಗೆ ಪರಿವರ್ತಿಸುತ್ತದೆ
ಎ) ನಕ್ಷೆ ಘಟಕಗಳು (Map Units)	ಎ) ಎರಡು ಸ್ಥಳಗಳ ನಡುವಿನ ಮಾರ್ಗವನ್ನು ತೋರಿಸುತ್ತದೆ
ಏ) ಗ್ರೀಕರು (Greeks)	ಏ) ಸೆಂಟಿಮೀಟರ್ ಅಥವಾ ಇಂಚುಗಳು
ಐ) ಮಾರ್ಗ ನಕ್ಷೆ (Route Map)	ಐ) ಮೊದಲ ನಕ್ಷೆಗಳನ್ನು ರಚಿಸಿದ ಪುರಾತನ ಜನರು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಒಂದು ಅಂಕದ ಪ್ರಶ್ನೆಗಳು)(ಸುಲಭ)

27. ನಕ್ಷೆಯಲ್ಲಿ ಉತ್ತರ ದಿಕ್ಕಿಗೆ ಏನು ಚಿಹ್ನೆ ಬಳಸುತ್ತಾರೆ?
28. ನಕ್ಷೆಯಲ್ಲಿ ಎಷ್ಟು ದಿಕ್ಕುಗಳಿವೆ?

29. ಹಳ್ಳಿಯ ನಕ್ಷೆಯಲ್ಲಿ ಮಧ್ಯದಲ್ಲಿರುವ ದೊಡ್ಡ ಮರದ ಹೆಸರು ಏನು?

30. ಪಾಠದಲ್ಲಿ "@KTBS" ಈ ಚಿಹ್ನೆ ಏನು ಸೂಚಿಸುತ್ತದೆ?

31. ಅರಣ್ಯ ಮರದ ದೃಷ್ಟಿಯಿಂದ ಗ್ರಂಥಾಲಯ ಯಾವ ದಿಕ್ಕಿನಲ್ಲಿ ಇದೆ?

32. ನಕ್ಷೆಗಳಲ್ಲಿ ಎಷ್ಟು ಬಗೆಗಳ ಚಿಹ್ನೆಗಳನ್ನು ಬಳಸಲಾಗುತ್ತದೆ?

33. ಅಂಚೆ ಕಚೇರಿ ದೃಷ್ಟಿಯಿಂದ ಶಾಲೆ ಯಾವ ದಿಕ್ಕಿನಲ್ಲಿ ಇದೆ?

34. ನಕ್ಷೆಯಲ್ಲಿ ಲ್ಯಾಂಡ್ ಮಾರ್ಕ್ ಎಂದರೇನು?

35. ಉದ್ಯಾನವನದಿಂದ ದೇವಾಲಯಕ್ಕೆ ಹೋಗಲು ಯಾವ ದಿಕ್ಕಿನಲ್ಲಿ ಹೋಗಬೇಕು?

36. ಆಸ್ಪತ್ರೆ ದೃಷ್ಟಿಯಿಂದ ಮಸೀದಿ ಯಾವ ದಿಕ್ಕಿನಲ್ಲಿ ಇದೆ.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಎರಡು ಅಂಕದ ಪ್ರಶ್ನೆಗಳು)

37. ಈ ಕೆಳಗಿನ ಸ್ಥಳಗಳು ಅರಣ್ಯ ಮರದ ದೃಷ್ಟಿಯಿಂದ ಯಾವ ದಿಕ್ಕಿನಲ್ಲಿ ಇವೆ? (ಕಠಿಣ)
    a. ಕೆರೆ
    b. ಗ್ರಂಥಾಲಯ
    c. ಶಾಲೆ

38. ನಕ್ಷೆ ಬಿಡಿಸುವಾಗ ಲ್ಯಾಂಡ್‌ಮಾರ್ಕ್‌ಗಳು/ ಭೂ ಗುರುತುಗಳು ಏಕೆ ಮುಖ್ಯ? (ಕಠಿಣ)

39. ನಕ್ಷೆಯ ಸಹಾಯದಿಂದ ದಿಕ್ಕುಗಳನ್ನು ಹೇಗೆ ಕಂಡುಹಿಡಿಯುವುದು? .(ಸಾಧಾರಣ)

40. ನಕ್ಷೆಯಲ್ಲಿ ಸ್ಥಳೀಯ ಚಿಹ್ನೆ ಮತ್ತು ಸಾರ್ವಜನಿಕ ಚಿಹ್ನೆಗಳ ವ್ಯತ್ಯಾಸವೇನು? (ಕಠಿಣ)

41. ನಕ್ಷೆಯಲ್ಲಿ ಚಿಹ್ನೆ ಇಲ್ಲದ ಸ್ಥಳದ ದಿಕ್ಕು ಹೇಗೆ ಪತ್ತೆ ಹಚ್ಚುವುದು? .(ಸಾಧಾರಣ)

42. ನಿಮ್ಮ ತರಗತಿಯ ನಕ್ಷೆ ಬಿಡಿಸಲು ಬೇಕಾದ ಮಾಪನ ವಿಧಾನವನ್ನು ವಿವರಿಸಿ.(ಕಠಿಣ)

43. ಯಾಸ್ಮಿನ್ ತನ್ನ ತರಗತಿಯ ನಕ್ಷೆ ಬಿಡಿಸಲು ತೆಗೆದುಕೊಂಡ ಹೆಜ್ಜೆಗಳನ್ನು ವಿವರಿಸಿ. (ಸಾಧಾರಣ)

44. ನಿಖರವಾದ ನಕ್ಷೆ ಬಿಡಿಸಲು ಮಾಪನ (scale) ಬಳಸುವುದರಿಂದ ಆಗುವ ಪ್ರಯೋಜನವೇನು? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಮೂರು ಅಂಕದ ಪ್ರಶ್ನೆಗಳು)

45. ಮಾಪನ ಬಳಸಿ ಕೊಠಡಿಯ ಉದ್ದ ಮತ್ತು ಅಗಲವನ್ನು ಎಳೆದು ನಕ್ಷೆ ಬಿಡಿಸುವ ವಿಧಾನವನ್ನು ವಿವರಿಸಿ.(ಕಠಿಣ)

46. ಕೊಠಡಿಯ ಸರಳ ನಕ್ಷೆಯಲ್ಲಿ ವಸ್ತುಗಳ ಸ್ಥಾನವನ್ನು ಹೇಗೆ ತೋರಿಸಬಹುದು? .(ಸಾಧಾರಣ)

47. ನಕ್ಷೆಯಲ್ಲಿ ವಸ್ತುಗಳ ಸ್ಥಾನದ ಪತ್ತೆಗೆ ಗ್ರಿಡ್ ಪದ್ಧತಿ (grid system) ಬಳಸುವ ಲಾಭಗಳು ಯಾವುವು? (ಕಠಿಣ)
48. ನಿಮ್ಮ ಶಾಲೆಯ ನಕ್ಷೆ ಒಂದು ಬಿಡಿಸಿ, ದಿಕ್ಕುಗಳು ಮತ್ತು ಮಹತ್ವದ ಸ್ಥಳಗಳನ್ನು ತೋರಿಸಿ. (ಕಠಿಣ)
49. ನಕ್ಷೆ ಬಿಡಿಸುವಾಗ ಚಿಹ್ನೆಗಳನ್ನು ಬಳಸುವ ಮಹತ್ವವನ್ನು ವಿವರಿಸಿ. (ಕಠಿಣ)
50. ಅನುರ್ ತಾಲ್ಲೂಕು ಕಚೇರಿಗೆ ದಾರಿದರ್ಶನ ನೀಡಲು ಬಳಸಿದ ಭೂ ಗುರುತುಗಳನ್ನು ಕ್ರಮವಾಗಿ ಸೂಚಿಸಿ.(ಸಾಧಾರಣ)
51. ಮನೆಯಿಂದ ಶಾಲೆಗೆ ಹೋಗುವ ದಾರಿಯ ಸರಳ ನಕ್ಷೆ ಬಿಡಿಸಲು ಅಗತ್ಯದ ದೂರ ಮಾಪನದ ಪ್ರಕ್ರಿಯೆಯನ್ನು ವಿವರಿಸಿ. (ಕಠಿಣ)
52. ವಿಶ್ವ ನಕ್ಷೆ ಮತ್ತು ಸ್ಥಳೀಯ ನಕ್ಷೆಯ ನಡುವಿನ ಪ್ರಮುಖ ವ್ಯತ್ಯಾಸಗಳನ್ನು ವಿವರಿಸಿ. (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ನಾಲ್ಕು ಅಂಕದ ಪ್ರಶ್ನೆಗಳು) (ಕಠಿಣ)

53. ನಿಮ್ಮ ಮನೆಗಳಿಂದ ಶಾಲೆಗೆ ಹೋಗುವ ದಾರಿಯ ನಕ್ಷೆ ಬಿಡಿಸಿ. ಕನಿಷ್ಟ 4 ಲ್ಯಾಂಡ್ ಮಾರ್ಕ್‌ಗಳನ್ನು ಸೇರಿಸಿ.
54. ನಕ್ಷೆಯಲ್ಲಿ ದಿಕ್ಕುಗಳನ್ನು ಉಪಯೋಗಿಸಿ ಸ್ಥಳವನ್ನು ಹೇಗೆ ಪತ್ತೆಹಚ್ಚುವುದು ಎಂಬುದನ್ನು ವಿವರಿಸಿ.
55. ಗ್ರಿಡ್ ಪದ್ಧತಿಯಿಂದ ನಿಮ್ಮ ತರಗತಿಯ ವಿನ್ಯಾಸವನ್ನು ಬಿಡಿಸಿ ಮತ್ತು ಟೇಬಲ್, ಕುರ್ಚಿ, ಇತರ ವಸ್ತುಗಳ ಸ್ಥಳಗಳನ್ನು ಗುರುತಿಸಿ.
56. ಯಾಸ್ಮಿನ್‌ನ ಉದಾಹರಣೆಯಂತೆ ಹೆಜ್ಜೆಗಳನ್ನು ಮೀಟರ್‌ಗಳಿಗೆ ಪರಿವರ್ತಿಸುವ ಪ್ರಕ್ರಿಯೆ ಮತ್ತು ಅವಶ್ಯಕತೆಯನ್ನು ವಿವರಿಸಿ.
57. ಹವಾಮಾನ ನಕ್ಷೆ, ರೈಲು ಮಾರ್ಗ ನಕ್ಷೆ ಮುಂತಾದ ವಿಭಿನ್ನ ನಕ್ಷೆಗಳು ವಿಭಿನ್ನ ಉದ್ದೇಶಗಳಿಗೆ ಹೇಗೆ ಸಹಾಯಕವಾಗುತ್ತವೆ?
58. ನಿಮ್ಮ ಊರಿನ ಭೂಗೋಳಿಕ ಲಕ್ಷಣಗಳನ್ನು ತೋರಿಸಲು ನಕ್ಷೆ ಹೇಗೆ ಉಪಯುಕ್ತವಾಗುತ್ತದೆ? ಲ್ಯಾಂಡ್‌ಮಾರ್ಕ್‌ಗಳು ಮತ್ತು ದಿಕ್ಕುಗಳೊಂದಿಗೆ ವಿವರಿಸಿ.
59. ಸರಳ ಕೊಠಡಿ ಅಥವಾ ತರಗತಿಯ ನಕ್ಷೆ ಬಿಡಿಸುವಾಗ ಹೆಜ್ಜೆ ಮಾಪನಗಳ ಪಾತ್ರವನ್ನು ವಿವರಿಸಿ.
60. ಅನ್ವರ್ ನು ತಾಲ್ಲೂಕು ಕಚೇರಿಗೆ ದಿಕ್ಕು ತೋರಿಸಲು ಲ್ಯಾಂಡ್‌ಮಾರ್ಕ್‌ಗಳು ಮತ್ತು ದಿಕ್ಕುಗಳನ್ನು ಹೇಗೆ ಸಂಯೋಜಿಸಲಾಗಿದೆ ಎಂಬುದನ್ನು ವಿವರಿಸಿ.
61. ನಿನ್ನ ಮನೆಯಿಂದ ಶಾಲೆಗೆ ಹೋಗುವ ಮಾರ್ಗ ನಕ್ಷೆಯನ್ನು ತಯಾರಿಸು.

ಪಾಠ 13: - ಅದ್ಭುತ ಯಂತ್ರ - ನಮ್ಮ ದೇಹ

ಕಲಿಕಾ ಫಲಗಳು :-

1. ಐದು ಜ್ಞಾನೇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ) ಅವುಗಳ ಕಾರ್ಯಗಳೊಂದಿಗೆ ಸರಿ ಹೊಂದಿಸಬಹುದು.
2. **ಬಾಹ್ಯ ಮತ್ತು ಆಂತರಿಕ ಅಂಗಗಳನ್ನು ಗುರುತಿಸಿ**, ಅವುಗಳ ಪಾತ್ರವನ್ನು ವಿವರಿಸಬಹುದು.
3. **ಮುಖ್ಯ ಆಂತರಿಕ ಅಂಗಗಳನ್ನು ಹೆಸರಿಸಬಹುದು** ಮತ್ತು ಅವುಗಳು ಈ ಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತವೆ:
    - **ಉಸಿರಾಟ (Respiration)** – ಮೂಗು, ಶ್ವಾಸನಾಳ , ಶ್ವಾಸಕೋಶಗಳು
    - **ರಕ್ತಸಂಚಾರ (Blood circulation)** – ಹೃದಯ, ರಕ್ತನಾಳಗಳು
    - **ಜೀರ್ಣಕ್ರಿಯೆ (Digestion)** – ಬಾಯಿ, ಗಂಟಲು, ಅನ್ನನಾಳ,ಜಠರ,ಸಣ್ಣ ಕರಳು, ದೊಡ್ಡ ಕರಳು, ಮಲದ್ವಾರ.
    - **ವಿಸರ್ಜನೆ (Excretion)** – ಮೂತ್ರಪಿಂಡ, ಮೂತ್ರನಾಳ, ಮೂತ್ರಕೋಶ, ಮೂತ್ರದ್ವಾರ.
4. **ಉಸಿರಾಟದ ಪ್ರಕ್ರಿಯೆಯನ್ನು ಮತ್ತು ಉಸಿರಾಟದ ಒಳ್ಳೆಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬಹುದು**,
5. **ಹೃದಯದ ಸ್ಥಳವನ್ನು ದೇಹದಲ್ಲಿ ಗುರುತಿಸಬಹುದು** ಮತ್ತು **ಸರಳ ಸ್ಟೆತಸ್ಕೋಪ್ ಮಾದರಿಯೊಂದಿಗೆ ಹೃದಯದ ಬಡಿತವನ್ನು ಗುರುತಿಸಿ ಮತ್ತು ಎಣಿಸಬಹುದು.**
6. **ರಕ್ತಸಂಚಾರದ ಪ್ರಕ್ರಿಯೆಯನ್ನು ವಿವರಿಸಬಹುದು** ಮತ್ತು ಶುದ್ಧ ಮತ್ತು ಅಶುದ್ಧ ರಕ್ತದ ನಡುವಿನ ವ್ಯತ್ಯಾಸವನ್ನು ತಿಳಿಸಬಹುದು.
7. **ಜೀರ್ಣಾಂಗಗಳನ್ನು ಗುರುತಿಸಿ** ಅವುಗಳ ಕಾರ್ಯವನ್ನು ತಿಳಿಯುವರು
8. **ಉತ್ತಮ ಆಹಾರ ಮತ್ತು ಆಹಾರ ಸೇವನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ತಿಳಿಸಬಹುದು.**
9. **ವಿಸರ್ಜನೆ ಅಂಗಗಳನ್ನು ಹೆಸರಿಸಿ**, ಅವುಗಳು ಶರೀರದಿಂದ ಕಶ್ಮಲ ಹೊರಹಾಕುವ ರೀತಿಯನ್ನು ವಿವರಿಸಬಹುದು.
10. **ವೈಯಕ್ತಿಕ ಸ್ವಚ್ಛತೆ ಸಂಬಂಧಿಸಿದ ಒಳ್ಳೆಯ ಅಭ್ಯಾಸಗಳನ್ನು ಅನುಸರಿಸಬಹುದು**, ಉದಾಹರಣೆಗೆ: ಸ್ನಾನ ಮಾಡುವುದು, ಹೈಜಿನ್ ಪಾಲಿಸುವುದು, ಸಾಕಷ್ಟು ನೀರು ಕುಡಿಯುವುದು. ವ್ಯಾಯಾಮ ಮಾಡುವುದು.

11. **ಮಾನವ ದೇಹದ ಬಗ್ಗೆ ಕುತೂಹಲಕರವಾದ ಸಂಗತಿಗಳನ್ನು ನೆನಪಿಸಬಹುದು ಮತ್ತು ಹಂಚಿಕೊಳ್ಳಬಹುದು**, ಉದಾಹರಣೆಗೆ: ಎಲುಬುಗಳ ಸಂಖ್ಯೆ, ಜೀರ್ಣಕ್ರಿಯೆ ಅಂಗದ ಉದ್ದ, ಹೃದಯದ ಬಡಿತಗಳು.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ನಮ್ಮ ಜ್ಞಾನೇಂದ್ರಿಯಗಳ ಸಂಖ್ಯೆ
   ಎ) 3 ಬಿ) 5 ಸಿ) 2 ಡಿ) 6
2. ಚರ್ಮದ ಕೆಲಸವೇನು
   ಎ) ವಾಸನೆ ನೋಡಲು ಬಿ) ಬಿಸಿತಂಪು ಅನುಭವ ಸಿ) ರುಚಿ ನೋಡಲು ಡಿ) ಕೇಳಲು
3. ನೋಡಲು ಸಹಾಯ ಮಾಡುವ ಅಂಗ
   ಎ) ಮೂಗು ಬಿ) ಕಣ್ಣು ಸಿ) ಕಿವಿ ಡಿ) ನಾಲಿಗೆ
4. ಗಾಳಿಯನ್ನು ಯಾವ ಅಂಗದ ಮೂಲಕ ತೆಗೆದುಕೊಳ್ಳುತ್ತೇವೆ.
   ಎ) ಚರ್ಮ ಬಿ) ನಾಲಿಗೆ ಸಿ) ಮೂಗು ಡಿ) ಬಾಯಿ
5. ನಮ್ಮ ದೇಹಕ್ಕೆ ರಕ್ತ ಪೂರೈಸುವ ಅಂಗ
   ಎ) ಶ್ವಾಸಕೋಶ ಬಿ) ಜಠರ ಸಿ) ಮೂತ್ರಪಿಂಡ ಡಿ) ಹೃದಯ

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ (ಸುಲಭ)

6. _________ ನಮ್ಮ ದೇಹದ ಒಳಾಂಗಗಳನ್ನು ರಕ್ಷಿಸುತ್ತದೆ.
7. _________ ಮತ್ತು _________ ನಮ್ಮ ದೇಹಕ್ಕೆ ಆಕೃತಿ ಹಾಗೂ ರಚನೆ ನೀಡುತ್ತದೆ.
8. ನಾವು ಗಾಳಿಯನ್ನು _________ ಮೂಲಕ ಒಳಗೆ ಎಳೆದುಕೊಳ್ಳುತ್ತೇವೆ.
9. ಆಮ್ಲಜನಕವನ್ನು ಒಳಗೆಳೆದು ಕಾರ್ಬನ್ ಡೈ ಆಕ್ಸೈಡನ್ನು ಹೊರಹಾಕುವ ಪ್ರಕ್ರಿಯೆಯನ್ನು _________ ಎನ್ನುತ್ತಾರೆ.
10. ದೇಹದ ಎಲ್ಲಾ ಭಾಗಗಳಿಗೆ ರಕ್ತವನ್ನು ಪಂಪ್ ಮಾಡುವ ಅಂಗ _________.
11. ರಕ್ತ ಶುದ್ಧವಾಗುವ ಅಂಗ _________.
12. ದೇಹದಿಂದ ಮಲಮೂತ್ರದ ವಿಸರ್ಜನೆಗೆ ಸಹಾಯಮಾಡುವ ಅಂಗ _________.
13. ಅಗಿದ ಆಹಾರವು _________ ಮೂಲಕ ಹೊಟ್ಟೆಗೆ ಹೋಗುತ್ತದೆ.
14. ಜೀರ್ಣಕ್ರಿಯೆ _________ ಯಲ್ಲಿ ಆರಂಭವಾಗುತ್ತದೆ.
15. ಜೀರ್ಣವಾಗದ ಆಹಾರವು _________ ಮೂಲಕ ಹೊರಹೋಗುತ್ತದೆ.
16. _________ ವಾಸನೆಯನ್ನು ಗುರುತಿಸಲು ಸಹಾಯಮಾಡುತ್ತದೆ.
17. _________ ಶಬ್ದಗಳನ್ನು ಕೇಳಿಸಲು ಸಹಾಯಮಾಡುತ್ತದೆ.

18. _________ ಉಷ್ಣತೆ, ತಂಪು ಮತ್ತು ಸ್ಪರ್ಶವನ್ನು ತಿಳಿಯಲು ಸಹಾಯಮಾಡುತ್ತದೆ.

19. _________ ಆಹಾರವನ್ನು ಚಪ್ಪರಿಸಲು ಸಹಾಯಮಾಡುತ್ತದೆ.

20. ದೇಹದಿಂದ ಬೇಡದ ವಸ್ತುಗಳನ್ನು ಹೊರಹಾಕುವ ಪ್ರಕ್ರಿಯೆಯನ್ನು _________ ಎನ್ನುತ್ತಾರೆ.

21. ಪ್ರತಿ ದಿನ ಕನಿಷ್ಠ _________ ಲೀಟರ್ ಸ್ವಚ್ಛ ನೀರನ್ನು ಕುಡಿಯಬೇಕು.

22. ನಮ್ಮ ದೇಹದಲ್ಲಿ ಸುಮಾರು _________ ಎಲುಬುಗಳು ಇವೆ.

23. ನಮ್ಮ ದೇಹದಲ್ಲಿ _________ ಗಿಂತ ಹೆಚ್ಚು ಜೋಡಣೆಗಳು ಇವೆ.

24. ಹೃದಯವು ಒಂದು ನಿಮಿಷಕ್ಕೆ ಸುಮಾರು _________ ಬಾರಿ ಹೊಡೆಯುತ್ತದೆ.

25. ನಮ್ಮ ದೇಹದಲ್ಲಿ _________ ಮೂತ್ರಪಿಂಡಗಳಿವೆ.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

26. ಚರ್ಮವು ದೇಹವನ್ನು ಆವರಿಸಿ ರಕ್ಷಿಸುತ್ತದೆ.

27. ನಾವು ಕೇಳುವುದಕ್ಕೆ ನಾವು ನಾಲಿಗೆ ಬಳಸುತ್ತೇವೆ.

28. ಶ್ವಾಸಕೋಶವು ಗಾಳಿಯಿಂದ ಆಮ್ಲಜನಕವನ್ನು ಶೋಷಿಸುತ್ತದೆ.

29. ಹೃದಯವು ನಮ್ಮ ಮುಷ್ಟಿಗೆ ಹೋಲಿಸದಷ್ಟು ದೊಡ್ಡದು.

30. ಆಹಾರ ನಳಿಕೆಯಿಂದ ಹೊಟ್ಟೆಗೆ ಸಾಗುತ್ತದೆ.

31. ರಕ್ತ ದೇಹದ ಎಲ್ಲಾ ಭಾಗಗಳಲ್ಲಿ ಹರಡುವುದಿಲ್ಲ.

32. ಜೀರ್ಣವಾಗದ ಆಹಾರವು ಸಣ್ಣ ಅಂತರಾಳದಿಂದ ರಕ್ತಕ್ಕೆ ಸೇರುತ್ತದೆ.

33. ದೊಡ್ಡ ಅಂತರಾಳವು ಆಹಾರವನ್ನು ಸಂಪೂರ್ಣ ಜೀರ್ಣಗೊಳಿಸುತ್ತದೆ.

34. ಕಿಡ್ನಿ ದೇಹದಿಂದ ಮಲಮೂತ್ರವನ್ನು ಹೊರಹಾಕಲು ಸಹಾಯಮಾಡುತ್ತದೆ

35. ಬಾಯಿ ಮೂಲಕ ಶ್ವಾಸ ತೆಗೆದುಕೊಳ್ಳುವುದು ಒಳ್ಳೆಯದು.

36. ಕೆಮ್ಮುವಾಗ ಬಾಯಿ ಮುಚ್ಚುವುದು ಸೋಂಕು ಹರಡುವುದನ್ನು ತಡೆಯುತ್ತದೆ.

37. ಆಹಾರ ತಿನ್ನುವಾಗ ಬೇಗ ಬೇಗ ತಿನ್ನುವುದು ಒಳ್ಳೆಯದು.

38. ಹೃದಯವು ಎಡಬದಿಯ ಎದೆಯೊಳಗೆ ಇರುತ್ತದೆ.

39. ಸ್ಟೆಥಸ್ಕೋಪ್ ಅನ್ನು ದೃಷ್ಟಿ ಪರೀಕ್ಷೆಗೆ ಬಳಸುತ್ತಾರೆ.

40. ದಿನವೊಂದಕ್ಕೆ 10 ಬಾರಿ ಆಳವಾದ ಉಸಿರಾಟ ಅಭ್ಯಾಸ ಮಾಡುವುದು ಒಳ್ಳೆಯದು.

41.ಹೊಂದಿಸಿ ಬರೆಯಿರಿ (ಸುಲಭ)

A	B
ಅ) ಕಿವಿ	ಅ. ವಸ್ತುಗಳನ್ನು ನೋಡುವುದು
ಆ) ಕಣ್ಣು	ಆ. ಶಬ್ದಗಳನ್ನು ಕೇಳುವುದು
ಇ) ನಾಲಿಗೆ	ಇ. ವಾಸನೆಯನ್ನು ಗುರುತಿಸುವುದು
ಈ) ಮೂಗು	ಈ. ರುಚಿಯನ್ನು ಗುರುತಿಸುವುದು
ಉ) ಹೃದಯ	ಉ. ಉಷ್ಣತೆ, ತಂಪು, ಸ್ಪರ್ಶವನ್ನು ತಿಳಿಯುವುದು
ಊ) ಚರ್ಮ	ಊ. ರಕ್ತವನ್ನು ಪಂಪ್ ಮಾಡುವ ಅಂಗ
ಋ) ಕಿಡ್ನಿ	ಋ. ಶ್ವಾಸಕ್ರಿಯೆಗೆ ಬಳಸುವ ಅಂಗ
ಎ) ಶ್ವಾಸಕೋಶ	ಎ. ರಕ್ತ ಶೋಧಿಸಿ ಮೂತ್ರವನ್ನು ನಿರ್ಮಿಸುವುದು
ಏ) ಸಣ್ಣ ಕರುಳು	ಏ. ಆಹಾರವನ್ನು ಭಾಗಶಃ ಜೀರ್ಣಗೊಳಿಸುವುದು
ಐ) ಹೊಟ್ಟೆ	ಐ. ಜೀರ್ಣಗೊಂಡ ಆಹಾರವನ್ನು ರಕ್ತಕ್ಕೆ ಕಳುಹಿಸುವುದು
ಒ) ಅನ್ನನಾಳ	ಒ. ಗಾಳಿಯನ್ನು ಶ್ವಾಸಕೋಶಕ್ಕೆ ಕರೆದೊಯ್ಯುವುದು
ಓ) ಸ್ಟೆತಸ್ಕೋಪ್	ಓ. ಆಹಾರವನ್ನು ಹೊಟ್ಟೆಗೆ ಕರೆದೊಯ್ಯುವುದು
ಔ) ದೊಡ್ಡ ಅಂತರಾಳ	ಔ. ದೇಹಕ್ಕೆ ಆಕಾರ ಮತ್ತು ರಚನೆ ನೀಡುವುದು
ಅಂ) ಎಲುಬು ಮತ್ತು ಮಾಂಸಖಂಡಗಳು	ಅಂ. ಜೀರ್ಣವಾಗದ ಆಹಾರವನ್ನು ಹೊರಹಾಕುವುದು
ಅಃ) ಶ್ವಾಸನಾಳ	ಅಃ. ಹೃದಯದ ಬಡಿತ ಪರಿಶೀಲನೆಗೆ ಉಪಕರಣ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಒಂದು ಅಂಕದ ಪ್ರಶ್ನೆ) (ಸುಲಭ)

42. ನಮ್ಮ ದೇಹವನ್ನು ಯಾಕೆ ಅದ್ಭುತ ಯಂತ್ರ ಎಂದು ಕರೆಯುತ್ತಾರೆ?.
43. ಹೃದಯದ ಮುಖ್ಯ ಕಾರ್ಯವೇನು?
44. ಮೂಳೆಗಳ ಮುಖ್ಯ ಕಾರ್ಯವೇನು?
45. ಚರ್ಮದ ಮುಖ್ಯ ಕಾರ್ಯವೇನು?
46. ಅನ್ನನಾಳ ಕಾರ್ಯವೇನು?
47. ನರಮಂಡಲದ ಮುಖ್ಯ ಕಾರ್ಯವೇನು?
48. ಆಮ್ಲಜನಕದ ಮಹತ್ವವೇನು?.
49. ಅನಿಲ ವಿನಿಮಯವು ಎಲ್ಲಿ ನಡೆಯುತ್ತದೆ?

50. ಆಹಾರ ಜೀರ್ಣಕ್ರಿಯೆಯ ಪ್ರಕ್ರಿಯೆ ಎಲ್ಲಿ ಆರಂಭವಾಗುತ್ತದೆ?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಎರಡು ಅಂಕದ ಪ್ರಶ್ನೆಗಳು)

51. ದೇಹದ ಮುಖ್ಯ ಅಂಗಗಳು ಯಾವುವು ಮತ್ತು ಅವುಗಳ ಕಾರ್ಯವೇನು? (ಸಾಧಾರಣ)
52. ಹೃದಯದ ಕಾರ್ಯವನ್ನು ವಿವರಿಸಿ. (ಕಠಿಣ)
53. ಶ್ವಾಸಕೋಶಗಳ ಕಾರ್ಯವನ್ನು ವಿವರಿಸಿ.(ಸುಲಭ)
54. ಕಣ್ಣುಗಳ ಕಾರ್ಯವನ್ನು ವಿವರಿಸಿ. (ಸುಲಭ)
55. ಮೂಗಿನ ಕಾರ್ಯವನ್ನು ವಿವರಿಸಿ. (ಸುಲಭ)
56. ಕಿವಿಗಳ ಕಾರ್ಯವನ್ನು ವಿವರಿಸಿ. (ಸುಲಭ)
57. ಚರ್ಮದ ಕಾರ್ಯವನ್ನು ವಿವರಿಸಿ. (ಸುಲಭ)
58. ದೇಹದ ತಾಪಮಾನವನ್ನು ನಿಯಂತ್ರಿಸುವ ಅಂಗವನ್ನು ವಿವರಿಸಿ. (ಸಾಧಾರಣ)
59. ದೇಹದಲ್ಲಿ ಎಷ್ಟು ಎಲುಬುಗಳಿವೆ ಮತ್ತು ಅವುಗಳ ಕಾರ್ಯವೇನು? (ಕಠಿಣ)
60. ದೇಹದ ಯಂತ್ರದಂತೆ ಕೆಲಸ ಮಾಡುವ ಭಾಗಗಳನ್ನು ವಿವರಿಸಿ. (ಸಾಧಾರಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಮೂರು ಅಂಕದ ಪ್ರಶ್ನೆಗಳು)

61. ಜಠರದಲ್ಲಿ ಆಹಾರ ಹೇಗೆ ಜೀರ್ಣಗೊಳ್ಳುತ್ತದೆ? (ಕಠಿಣ)
62. ಹೃದಯದ ರಚನೆ ಮತ್ತು ಕಾರ್ಯವಿಧಾನವನ್ನು ವಿವರಿಸಿ. (ಕಠಿಣ)
63. ಶ್ವಾಸಕೋಶಗಳ ಮೂಲಕ ಆಮ್ಲಜನಕ ಹೇಗೆ ರಕ್ತಕ್ಕೆ ಸೇರುತ್ತದೆ? (ಕಠಿಣ)
64. ಮೂತ್ರಪಿಂಡಗಳು ದೇಹದಿಂದ ತ್ಯಾಜ್ಯಗಳನ್ನು ಹೇಗೆ ಹೊರಹಾಕುತ್ತವೆ? (ಕಠಿಣ)
65. ಚರ್ಮದ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.(ಸಾಧಾರಣ)
66. ಮೂಳೆಗಳು ದೇಹಕ್ಕೆ ಯಾವ ರೀತಿಯಲ್ಲಿ ಬೆಂಬಲ ನೀಡುತ್ತವೆ? (ಕಠಿಣ)
67. ನರಮಂಡಲದ ಮುಖ್ಯ ಅಂಗಗಳು ಯಾವುವು ಮತ್ತು ಅವುಗಳ ಕಾರ್ಯವೇನು?
68. ರಕ್ತದ ಸಂಚಲನದ ಪ್ರಕ್ರಿಯೆಯನ್ನು ವಿವರಿಸಿ. (ಕಠಿಣ)
69. ದೇಹದ ಉಷ್ಣತೆಯನ್ನು ನಿಯಂತ್ರಿಸುವಲ್ಲಿ ಚರ್ಮದ ಪಾತ್ರವೇನು? (ಕಠಿಣ)
70. ಆಹಾರದ ಜೀರ್ಣಕ್ರಿಯೆಯಲ್ಲಿ ಲಿವರ್‌ನ ಪಾತ್ರವನ್ನು ವಿವರಿಸಿ. (ಸಾಧಾರಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ನಾಲ್ಕು ಅಂಕದ ಪ್ರಶ್ನೆಗಳು)

71. ಜೀರ್ಣಕ್ರಿಯೆಯ ಪ್ರಕ್ರಿಯೆಯನ್ನು ವಿವರಿಸಿ.(ಕಠಿಣ)
72. ಹೃದಯದ ರಚನೆ ಮತ್ತು ರಕ್ತ ಸಂಚಲನದ ಪ್ರಕ್ರಿಯೆಯನ್ನು ವಿವರಿಸಿ. (ಕಠಿಣ)
73. ಶ್ವಾಸಕೋಶಗಳ ಕಾರ್ಯವಿಧಾನವನ್ನು ವಿವರಿಸಿ. (ಕಠಿಣ)

74. ಮೂತ್ರಪಿಂಡಗಳ ಮೂಲಕ ತ್ಯಾಜ್ಯಹೊರಹಾಕುವ ಪ್ರಕ್ರಿಯೆಯನ್ನು ವಿವರಿಸಿ. (ಕಠಿಣ)

75. ಚರ್ಮದ ರಚನೆ ಮತ್ತು ಅದರ ವಿವಿಧ ಕಾರ್ಯಗಳನ್ನು ವಿವರಿಸಿ. (ಕಠಿಣ)

76. ಮೂಳೆಗಳ ರಚನೆ ಮತ್ತು ದೇಹಕ್ಕೆ ನೀಡುವ ಬೆಂಬಲವನ್ನು ವಿವರಿಸಿ. (ಕಠಿಣ)

77. ನರಮಂಡಲದ ಪ್ರಮುಖ ಅಂಗಗಳು ಮತ್ತು ಅವುಗಳ ಕಾರ್ಯಗಳನ್ನು ವಿವರ(ಕಠಿಣ)

78. ರಕ್ತದ ಸಂಚಲನದ ಪ್ರಕ್ರಿಯೆ ಮತ್ತು ಅದರ ಮಹತ್ವವನ್ನು ವಿವರಿಸಿ. (ಕಠಿಣ)

79. ದೇಹದ ಉಷ್ಣತೆಯನ್ನು ನಿಯಂತ್ರಿಸುವಲ್ಲಿ ಚರ್ಮದ ಪಾತ್ರವನ್ನು ವಿವರಿಸಿ. (ಕಠಿಣ)

80. ಆಹಾರದ ಜೀರ್ಣಕ್ರಿಯೆಯಲ್ಲಿ ಲಿವರ್‌ನ ಪಾತ್ರವನ್ನು ವಿವರಿಸಿ. (ಕಠಿಣ)

81. ಮಾನವನ ಶ್ವಾಸಕಾಂಗದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ. (ಕಠಿಣ)

ಪಾಠ 14 ಸಂಚಾರಿ ನಿಯಮಗಳು

ಕಲಿಕಾ ಫಲಗಳು :-

1. ಸಂಚಾರಿ ನಿಯಮಗಳು ಮತ್ತು ಸಂಕೇತ ದೀಪದ ಮಹತ್ವವನ್ನು ಅರಿತು ತಿಳಿಯುತ್ತಾರೆ.
2. ರಸ್ತೆಯಲ್ಲಿ ನಡೆಯುವವರು (ಪಾದಚಾರಿ) ಎಲ್ಲಿ ಮತ್ತು ಹೇಗೆ ರಸ್ತೆ ದಾಟಬೇಕು ಎಂಬುದನ್ನು ತಿಳಿದುಕೊಳ್ಳುತ್ತಾರೆ.
3. ಕೆಂಪು, ಹಳದಿ ಮತ್ತು ಹಸಿರು ಬಣ್ಣದ ಸಂಕೇತ ದೀಪಗಳ(ಸಿಗ್ನಲ್ ಲೈಟ್ಸ್) ಅರ್ಥವನ್ನು ಅರ್ಥಮಾಡಿ ಕೊಳ್ಳುತ್ತಾರೆ.
4. ಜೀಬ್ರಾ ಕ್ರಾಸಿಂಗ್ ಎಂಬುದು ಏನು ಮತ್ತು ಅದನ್ನು ಹೇಗೆ ಉಪಯೋಗಿಸಬೇಕು ಎಂಬುದನ್ನು ತಿಳಿಯುತ್ತಾರೆ.
5. ಟ್ರಾಫಿಕ್ ನಿಯಮಗಳನ್ನು ಪಾಲಿಸುವುದರಿಂದ ಪ್ರಾಣಾಪಾಯಕರ ಅಪಘಾತಗಳನ್ನು ತಪ್ಪಿಸಬಹುದು ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.
6. ಅಪಘಾತ ಸಂಭವಿಸುವ ಹಲವಾರು ಪರಿಸ್ಥಿತಿಗಳನ್ನು ಮತ್ತು ಅದರ ತಡೆಯುವ ಮುಂಜಾಗ್ರತಾ ಕ್ರಮಗಳನ್ನು ವಿವರಿಸಬಹುದು.
7. ಸೇತುಮಾಡುವ ರಸ್ತೆಯಲ್ಲಿ ಕಂಡುಬರುವ ವಿವಿಧ ಸಂಚಲನ ಸಂಕೇತಗಳ (ಸೈನ್ ಬೋರ್ಡ್‌ಗಳ) ಅರ್ಥವನ್ನು ತಿಳಿದುಕೊಳ್ಳುತ್ತಾರೆ ಮತ್ತು ಅವುಗಳನ್ನು ಗುರುತಿಸಬಹುದು.
8. ರಸ್ತೆಯಲ್ಲಿ ನಡೆಯುವವರು ಪಾಲಿಸಬೇಕಾದ ಸರಿಯಾದ ಮತ್ತು ತಪ್ಪಾದ ಚಟುವಟಿಕೆಗಳನ್ನು ಗುರುತಿಸಬಹುದು.
9. ಸಾಮಾಜಿಕ ಜವಾಬ್ದಾರಿಯೊಂದಿಗೆ ರಸ್ತೆ ಸುರಕ್ಷತೆ ನಿಯಮಗಳನ್ನು ಅನುಸರಿಸುವ ಪ್ರವೃತ್ತಿಯನ್ನು ಬೆಳೆಸುತ್ತಾರೆ.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ರಸ್ತೆಯಲ್ಲಿ ನಡೆಯುವಾಗ ಯಾವ ಬದಿಯಲ್ಲಿ ನಡೆಯಬೇಕು ?
ಎ) ಬಲ ಬಿ) ಎಡ ಸಿ) ಎಡ ಮತ್ತು ಬಲ ಡಿ) ಎಲ್ಲಿ ಬೇಕಾದರೂ
2. ನಾಲ್ಕು ರಸ್ತೆಗಳು ಸೇರಿರುವ ಜಾಗಕ್ಕೆ ಏನೆನ್ನುವರು?
ಎ) ಚೌಕ (ವೃತ್ತ) ಬಿ) ತ್ರಿಭುಜ ಸಿ) ಆಯತ ಡಿ) ಸಮತಲ
3. ಸಂಕೇತ ದೀಪಗಳಲ್ಲಿ ಎಷ್ಟು ಬಣ್ಣಗಳು ಇರುತ್ತವೆ.?
ಎ) 5 ಬಿ) 3 ಸಿ) 2 ಡಿ) 4
4. ಕೆಂಪು ದೀಪದ ಸಂಕೇತ ಏನನ್ನು ಸೂಚಿಸುತ್ತದೆ.?
ಎ) ನಿಲ್ಲು ಬಿ) ಸಿದ್ದರಾಗಿ ಸಿ) ಹೊರಡಿ ಡಿ) ತಟಸ್ಥರಾಗಿ
5. ಅಂಬುಲೆನ್ಸ್ ವಾಹನದ ಉಚಿತ ವ್ಯವಸ್ಥೆ ಸಂಖ್ಯೆ ಯಾವುದು ?
ಎ) 112 ಬಿ) 1098 ಸಿ) 108 ಡಿ) 211

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ (ಸುಲಭ)

6. ಜನರು ರಸ್ತೆಯನ್ನು ದಾಟಲು ಬಳಸುವ ಬಿಳಿ ರೇಖೆಗಳನ್ನು _________ crossing ಎಂದು ಕರೆಯುತ್ತಾರೆ.
7. ಕೆಂಪು ಬೆಳಕಿನ ಅರ್ಥ _________
8. ಹಸಿರು ಬೆಳಕು _________ ಎಂದು ಸೂಚಿಸುತ್ತದೆ.
9. ನಾವು ರಸ್ತೆ ದಾಟಬೇಕಾದರೆ _________ crossing ನಲ್ಲಿ ಮಾತ್ರ ದಾಟಬೇಕು.
10. ವಾಹನಗಳ ಚಲನವಲನವನ್ನು ನಿಯಂತ್ರಿಸುವವರು _________ ಪೊಲೀಸರು.
11. _________ ಬೆಳಕು ಸಿದ್ದವಾಗಿರಿ ಎಂದು ಹೇಳುತ್ತದೆ.
12. _________ ಎಂದರೆ ಕಾಲಿನಲ್ಲಿ ನಡೆಯುವ ಜನರು.
13. ಟ್ರಾಫಿಕ್ ಸಿಗ್ನಲ್‌ಗಳು ರಸ್ತೆ_________ ತಪ್ಪಿಸಲು ಸಹಾಯ ಮಾಡುತ್ತವೆ.
14. ನಾಲ್ಕು ರಸ್ತೆಗಳು ಸೇರುವ ಸ್ಥಳವನ್ನು _________ ಎಂದು ಕರೆಯುತ್ತಾರೆ.
15. ನಾವು ರಸ್ತೆ ಬದಿಯಲ್ಲಿ _________ ಬದಿಯಲ್ಲಿ ನಡೆಯಬೇಕು.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

16. ಕೆಂಪು ಬೆಳಕು ನಿಲ್ಲು ಎಂದು ಹೇಳುತ್ತದೆ.
17. ಪಾದಚಾರಿ ಅವರು ತಮ್ಮ ಇಚ್ಛೆಯಂತೆ ಯಾವುದೇ ಸ್ಥಳದಲ್ಲಿ ರಸ್ತೆ ದಾಟಬಹುದು.
18. ಕೆಂಪು ಬೆಳಕು ಇರೋ ವೇಳೆಯಲ್ಲಿ ವಾಹನಗಳು ನಿಲ್ಲಬೇಕು.
19. ರಸ್ತೆಯಲ್ಲಿ ಆಟವಾಡುವುದು ಸುರಕ್ಷಿತವಾಗಿದೆ.

20. ಟ್ರಾಫಿಕ್ ಸಿಗ್ನಲ್‌ಗಳು ಅಪಘಾತ ತಪ್ಪಿಸಲು ಸಹಾಯ ಮಾಡುತ್ತವೆ.

21. ಚಾಲನೆಯಲ್ಲಿರುವ ವಾಹನಕ್ಕೆ ಹಾರಲು ಅಥವಾ ಬರುವುದು ಸುರಕ್ಷಿತವಾಗಿದೆ.

22. ಜೇಬ್ರಾ ಕ್ರಾಸಿಂಗ್ ಬಳಸಿ ರಸ್ತೆ ದಾಟುವುದು ಸುರಕ್ಷಿತವಾಗಿದೆ.

23. ಹಸಿರು ಬೆಳಕು 'ಹೋಗಿ' ಎಂದು ಸೂಚಿಸುತ್ತದೆ.

24. ಬಸ್ಸಿಗೆ ಹತ್ತುವಾಗ ಸಾಲಿನಲ್ಲಿ ನಿಲ್ಲಬೇಕು.

25. ರೈಲು ಬರುತ್ತಿರುವಾಗ ರೈಲು ಹಳಿ ದಾಟುವುದು ಸುರಕ್ಷಿತ.

26.ಹೊಂದಿಸಿ ಬರೆಯಿರಿ (ಸುಲಭ)

A	B
ಅ) ಜಿಬ್ರಾ ಕ್ರಾಸಿಂಗ್	ಅ) ನಿಲ್ಲು
ಆ) ಕೆಂಪು ಬೆಳಕು	ಆ) ಇಲ್ಲಿ ದಾಟಬೇಕು
ಇ) ಹಸಿರು ಬೆಳಕು	ಇ) ಸಿದ್ದವಾಗಿರಿ
ಈ) ಹಳದಿ ಬೆಳಕು	ಈ) ಹೋಗು
ಉ) ಟ್ರಾಫಿಕ್ ಪೊಲೀಸ್	ಉ) ಆಸ್ಪತ್ರೆ ಸಮೀಪದಲ್ಲಿ
ಊ) ಹಾರಿಸುವುದು ನಿಷೇಧ	ಊ) ನಿಧಾನವಾಗಿ ಹೋಗಿ
ಋ) ಎಡ ತಿರುವು	ಋ) ವಾಹನಗಳನ್ನು ನಿಯಂತ್ರಿಸುವವರು
ಎ) ಆಸ್ಪತ್ರೆ ಜೋನ	ಎ) ದಿಕ್ಕು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಒಂದು ಅಂಕದ ಪ್ರಶ್ನೆಗಳು)(ಸುಲಭ)

27. ಪಾದಚಾರಿ ಮಾರ್ಗದ ಉಪಯೋಗವೇನು?

28. ಕೆಂಪು ದೀಪ ಅರ್ಥವೇನು?

29. ರಸ್ತೆ ದಾಟುವಾಗ ನಾವು ಏನು ಗಮನಿಸಬೇಕು?

30. ವಾಹನ ಚಲಾಯಿಸುವಾಗ ಮೊಬೈಲ್ ಉಪಯೋಗಿಸುವುದು ಸರಿಯೇ?

31. ಟ್ರಾಫಿಕ್ ಪೊಲೀಸ್‌ರ ಪಾತ್ರವೇನು?.

32. ರಸ್ತೆ ಗುರುತುಗಳು ಏಕೆ ಅಗತ್ಯ?

33. ವಾಹನ ಚಾಲಕರು ಯಾವ ನಿಯಮ ಪಾಲಿಸಬೇಕು?

34. ಪಾದಚಾರಿ ಸೇತುವೆಯ ಉಪಯೋಗವೇನು?

35. ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದರೆ ಏನು ಸಂಭವಿಸಬಹುದು?

36. ಶಾಲಾ ಬಸ್ಸಿನಲ್ಲಿ ಪ್ರಯಾಣಿಸುವಾಗ ಮಕ್ಕಳಿಗೆ ಏನು ಗಮನಿಸಬೇಕು?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಎರಡು ಅಂಕದ ಪ್ರಶ್ನೆಗಳು)

37. ಟ್ರಾಫಿಕ್ ನಿಯಮಗಳನ್ನು ಪಾಲಿಸುವ ಮಹತ್ವವನ್ನು ವಿವರಿಸಿ. (ಕಠಿಣ)
38. ರಸ್ತೆ ಗುರುತುಗಳು ಹೇಗೆ ಸಹಾಯ ಮಾಡುತ್ತವೆ?(ಸುಲಭ)
39. ಪಾದಚಾರಿ ಮಾರ್ಗದ ಉಪಯೋಗವನ್ನು ವಿವರಿಸಿ.(ಸುಲಭ)
40. ವಾಹನ ಚಾಲನೆ ಮಾಡುವಾಗ ಸುರಕ್ಷಿತ ಅಂತರವನ್ನು ಕಾಯ್ದುಕೊಳ್ಳುವುದು ಏಕೆ ಅಗತ್ಯ? (ಕಠಿಣ)
41. ಟ್ರಾಫಿಕ್ ಪೊಲೀಸ್‌ರ ಕೆಲಸಗಳನ್ನು ವಿವರಿಸಿ. (ಕಠಿಣ)
42. ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದರೆ ಏನು ಪರಿಣಾಮಗಳು ಉಂಟಾಗಬಹುದು? (ಸಾಧಾರಣ)
43. ಶಾಲಾ ಬಸ್ಸಿನಲ್ಲಿ ಪ್ರಯಾಣಿಸುವ ಮಕ್ಕಳಿಗೆ ನೀಡಬೇಕಾದ ಸೂಚನೆಗಳು ಯಾವುವು? (ಸಾಧಾರಣ)
44. ರಸ್ತೆ ದಾಟುವಾಗ ಮಕ್ಕಳಿಗೆ ನೀಡಬೇಕಾದ ಸಲಹೆಗಳು ಯಾವುವು? (ಕಠಿಣ)
45. ವಾಹನ ಚಾಲನೆ ಮಾಡುವಾಗ ಎಚ್ಚರಿಕೆ ವಹಿಸುವುದು ಹೇಗೆ ಸಹಾಯ ಮಾಡುತ್ತದೆ? (ಸಾಧಾರಣ)
46. ಟ್ರಾಫಿಕ್ ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವ ಉಪಾಯಗಳು ಯಾವುವು? (ಸಾಧಾರಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಮೂರು ಅಂಕದ ಪ್ರಶ್ನೆಗಳು)

47. ಟ್ರಾಫಿಕ್ ನಿಯಮಗಳನ್ನು ಪಾಲಿಸುವುದರಿಂದ ಸಮಾಜಕ್ಕೆ ಏನು ಲಾಭ? (ಕಠಿಣ)
48. ಪಾದಚಾರಿ ಸೇತುವೆಗಳ ಉಪಯೋಗ ಮತ್ತು ಅವುಗಳ ಅಗತ್ಯತೆ ಬಗ್ಗೆ ವಿವರಿಸಿ.(ಸುಲಭ)
49. ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದರೆ ಸಂಭವಿಸಬಹುದಾದ ಅಪಾಯಗಳನ್ನು ವಿವರಿಸಿ. (ಕಠಿಣ)
50. ಶಾಲಾ ಬಸ್ಸಿನಲ್ಲಿ ಮಕ್ಕಳ ಸುರಕ್ಷತೆಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು ಯಾವುವು? (ಸಾಧಾರಣ)
51. ಟ್ರಾಫಿಕ್ ಪೊಲೀಸ್‌ರ ಪಾತ್ರ ಮತ್ತು ಅವರ ಕೆಲಸಗಳ ಮಹತ್ವವನ್ನು ವಿವರಿಸಿ. ವಾಹನ ಚಾಲನೆ ಮಾಡುವಾಗ ಎಚ್ಚರಿಕೆ ವಹಿಸುವುದರಿಂದ ಹೇಗೆ ಅಪಘಾತಗಳನ್ನು ತಪ್ಪಿಸಬಹುದು? (ಕಠಿಣ)
52. ರಸ್ತೆ ಗುರುತುಗಳು ಮತ್ತು ಅವರ ಅರ್ಥಗಳನ್ನು ವಿವರಿಸಿ. (ಸಾಧಾರಣ)
53. ಪಾದಚಾರಿ ಮಾರ್ಗದ ಉಪಯೋಗ ಮತ್ತು ಅವುಗಳ ಅಗತ್ಯತೆ ಬಗ್ಗೆ ವಿವರಿಸಿ. (ಕಠಿಣ)
54. ಟ್ರಾಫಿಕ್ ನಿಯಮಗಳ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡುವ ಮಹತ್ವವನ್ನು ವಿವರಿಸಿ. (ಸಾಧಾರಣ)
55. ಟ್ರಾಫಿಕ್ ನಿಯಮಗಳನ್ನು ಪಾಲಿಸುವ ಮೂಲಕ ನಾವು ಹೇಗೆ ಸಮಾಜಕ್ಕೆ ಮಾದರಿ ಆಗಬಹುದು? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ನಾಲ್ಕುಅಂಕದ ಪ್ರಶ್ನೆಗಳು)

56. ಟ್ರಾಫಿಕ್ ನಿಯಮಗಳನ್ನು ಪಾಲಿಸುವ ಮಹತ್ವ ಮತ್ತು ಅವುಗಳನ್ನು ಉಲ್ಲಂಘಿಸಿದರೆ ಸಂಭವಿಸಬಹುದಾದ ಪರಿಣಾಮಗಳು(ಕಠಿಣ)
57. ಪಾದಚಾರಿ ಸೇತುವೆಗಳ ಉಪಯೋಗ, ಅವುಗಳ ಅಗತ್ಯತೆ ಮತ್ತು ಅವುಗಳನ್ನು ಹೇಗೆ ಬಳಸಬೇಕು(ಕಠಿಣ)
58. ಶಾಲಾ ಬಸ್ಸಿನಲ್ಲಿ ಮಕ್ಕಳ ಸುರಕ್ಷತೆಗಾಗಿ ಪಾಲಿಸಬೇಕಾದ ನಿಯಮಗಳು ಮತ್ತು ಅವುಗಳ ಮಹತ್ವ(ಕಠಿಣ)
59. ಟ್ರಾಫಿಕ್ ಪೊಲೀಸ್‌ರ ಕೆಲಸಗಳು, ಅವರ ಪಾತ್ರ ಮತ್ತು ಅವರು ಹೇಗೆ ಟ್ರಾಫಿಕ್ ನಿಯಂತ್ರಣ ಮಾಡುತ್ತಾರೆ . (ಕಠಿಣ)
60. ರಸ್ತೆ ಗುರುತುಗಳು, ಅವುಗಳ ಅರ್ಥ ಮತ್ತು ಅವುಗಳನ್ನು ಹೇಗೆ ಅನುಸರಿಸಬೇಕು ತಿಳಿಸಿ.(ಸಾಧಾರಣ)
61. ಸಂಕೇತ ದೀಪ ಚಿತ್ರ ಬರೆದು ಬಣ್ಣ ಹಾಕಿರಿ.(ಸಾಧಾರಣ)

ಪಾಠ-15 ಸಾರಿಗೆ – ಸಂಪರ್ಕ

ಕಲಿಕಾ ಫಲಗಳು :-

1. ಹಿಂದಿನ ಕಾಲ ಮತ್ತು ಈಗ ಬಳಸುವ ಸಾರಿಗೆ ಪ್ರಾಣಿಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.
2. ಸಾರಿಗೆಗಾಗಿ ಬಳಸುವ ಪ್ರಾಣಿಗಳ ಪ್ರೀತಿ ಗೌರವ ಮತ್ತು ಕಾಳಜಿಯುಳ್ಳ ವರ್ತನೆ ಮಾಡುತ್ತಾರೆ.
3. ಕಾಲಕ್ರಮೇಣ ಸಾರಿಗೆ ವಿಧಾನಗಳಲ್ಲಿ ಸಂಭವಿಸಿದ ಬದಲಾವಣೆಗಳನ್ನು ಗುರುತಿಸುತ್ತಾರೆ.
4. ಹಳೆಯ ಮತ್ತು ಹೊಸ ಸಾರಿಗೆ ಮಾಧ್ಯಮಗಳನ್ನು ಹೋಲಿಸಿ ಅರ್ಥಮಾಡಿಕೊಳ್ಳುತ್ತಾರೆ.
5. ಲೆಟರ್, ರೇಡಿಯೋ, ದೂರವಾಣಿ, ಇಂಟರ್ನೆಟ್ ಮೊದಲಾದ ಸಂವಹನ ಸಾಧನಗಳನ್ನು ಮತ್ತು ಅವುಗಳ ಉಪಯೋಗವನ್ನು ತಾಳೆಹೊಂದಿಸುತ್ತಾರೆ.
6. ಗ್ರಹಾಂಬೆಲ್, ರೈಟ್ ಬ್ರದರ್ಸ್ ಮುಂತಾದ ವಿಜ್ಞಾನಿಗಳ ಕೊಡುಗೆಗಳನ್ನು ಗುರುತಿಸುತ್ತಾರೆ.
7. ಹತ್ತಿರದ ಅಂಚೆ ಕಚೇರಿಗೆ ಭೇಟಿ ನೀಡಿ ಅಥವಾ ಅಂಚೆ ಸಿಬ್ಬಂದಿಯರೊಡನೆ ಮಾತನಾಡಿ ಸ್ಟಾಂಪ್, ಕವರ್, ಪಾರ್ಸೆಲ್ ಮತ್ತು ಸ್ಪೀಡ್ ಪೋಸ್ಟ್ ಬಗ್ಗೆ ಮಾಹಿತಿ ಸಂಗ್ರಹಿಸುತ್ತಾರೆ. ಮತ್ತು ಪತ್ರ ಬರೆಯುವುದನ್ನು ಕಲಿಯುತ್ತಾರೆ
8. ಹಳೆಯ ಹಾಗೂ ಹೊಸ ಸಂವಹನ ಮಾಧ್ಯಮಗಳನ್ನು ಚಿತ್ರಗಳ ಮೂಲಕ ಗುರುತಿಸಿ ವಿಂಗಡಿಸುತ್ತಾರೆ.
9. ದಿನಪತ್ರಿಕೆ, ರೇಡಿಯೋ, ಟಿವಿ, ಮೊಬೈಲ್ ಮತ್ತು ಇಂಟರ್ನೆಟ್‌ನ ಉಪಯೋಗವನ್ನು ಅರ್ಥಮಾಡಿ ಕೊಳ್ಳುತ್ತಾರೆ.
10. ಸಾರಿಗೆ ಮತ್ತು ಸಂವಹನದಿಂದ ಜೀವನ ಹೇಗೆ ಸುಲಭ ಮತ್ತು ಸಂಪರ್ಕಿತವಾಗಿದೆ ಎಂಬುದನ್ನು ಅರ್ಥಮಾಡಿ ಕೊಳ್ಳುತ್ತಾರೆ.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ಸಾರಿಗೆ ಅಂದರೆ ಏನು?

A) ಕ್ರೀಡೆ B) ಚಲನ ಚಿತ್ತಾರ C) ವಸ್ತು ಹಾಗೂ ವ್ಯಕ್ತಿಗಳ ಸ್ಥಳಾಂತರ D) ಭೋಜನ

2. ಸಂಚಾರಿ ಮಾರ್ಗಗಳಲ್ಲಿ ಯಾವುದನ್ನು ನಾವೆಲ್ಲಾ ಬಳಸುತೇವೆ?

A) ಗಾಳಿ ಮಾರ್ಗ B) ಭೂಮಾರ್ಗ C) ನೀರಿನ ಮಾರ್ಗ D) none

3. ರೈಲು ಯಾವ ಮಾರ್ಗದಲ್ಲಿ ಸಂಚರಿಸುತ್ತದೆ?
A) ಗಾಳಿ B) ನೀರು C) ರೈಲು ಹಳಿಗಳು D) ರಸ್ತೆಯಲ್ಲಿ

4. ಹತ್ತಿರದ ಸ್ಥಳಗಳಿಗೆ ಹೋಗಲು ಯಾವ ವಾಹನ ಅನುಕೂಲಕರ?
A) ವಿಮಾನ B) ಸೈಕಲ್ C) ನೌಕೆ D) ರೈಲು

5. ದೂರದ ಸ್ಥಳಗಳಿಗೆ ಹೋಗಲು ಯಾವ ವಾಹನ ಉಪಯುಕ್ತ?
A) ಸೈಕಲ್ B) ಹಳ್ಳದ ಬಂಡಿ C) ವಿಮಾನ D) ಗಾಡಿ

ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ (ಸುಲಭ)

6. ಹಳೆಯ ಕಾಲದಲ್ಲಿ ಸಾರಿಗೆಗಾಗಿ ಜನರು _________, _________, ಮತ್ತು _________ ಪ್ರಾಣಿಗಳನ್ನು ಬಳಸುತ್ತಿದ್ದರು.
7. _________ ಅನ್ನು ಮರಳು ಪ್ರದೇಶಗಳಲ್ಲಿ ಸಾರಿಗೆಗೆ ಉಪಯೋಗಿಸುತ್ತಾರೆ, ಅದನ್ನು "ಮರಳಿನ ಹಡಗು" ಎಂದು ಕರೆಯುತ್ತಾರೆ.
8. 1853ರಲ್ಲಿ ಮೊದಲ ರೈಲು _________ ಮತ್ತು _________ ನಡುವೆ ಸಾಗಿತು.
9. ದೂರವಾಣಿ ಉಪಕರಣವನ್ನು _________ ಕಂಡುಹಿಡಿದರು.
10. ಟಿಪ್ಪಣಿ ಪತ್ರಗಳನ್ನು ಕಳುಹಿಸಲು ನಾವು _________ ಮತ್ತು _________ ಉಪಯೋಗಿಸುತ್ತೇವೆ.
11. _________ ಎಂಬುದು ದೂರದ ಸ್ಥಳಗಳಿಗೆ ಚಿಕ್ಕ ಸಮಯದಲ್ಲಿ ಮಾಹಿತಿ ಕಳುಹಿಸಲು ಉಪಯೋಗಿಸುವ ಸಾಧನ.
12. _________ ಮತ್ತು _________ ಸಂವಹನಕ್ಕಾಗಿ ಬಳಸುವ ಆಧುನಿಕ ಸಾಧನಗಳಾಗಿವೆ.
13. ಹಡಗು_________ ನಲ್ಲಿ ಪ್ರಯಾಣ ಮಾಡಲು ಬಳಸುತ್ತದೆ.
14. _________ ಒಂದು ಮಾಧ್ಯಮವಾಗಿದ್ದು, ಅದರಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸುದ್ದಿಗಳು ಪ್ರಸಾರವಾಗುತ್ತವೆ.
15. ಫೋನ್ ಅನ್ನು ಮೊದಲ ಬಾರಿಗೆ _________ ಕಂಡುಹಿಡಿದರು.

ಈ ಕೆಳಗಿನ ಪ್ರಶ್ನೆಗಳಿಗೆ ಸರಿ ಅಥವಾ ತಪ್ಪು ತಿಳಿಸಿ (ಸುಲಭ)

16. ಹಳೆಯ ಕಾಲದಲ್ಲಿ ಪ್ರಾಣಿಗಳನ್ನು ಸಾರಿಗೆಗೆ ಬಳಸಿದ್ದರೂ, ಈಗ ಪ್ರಾಣಿಗಳನ್ನು ಹೆಚ್ಚು ಬಳಸುತ್ತಾರೆ.
17. ಒಂಟೆಯನ್ನು ಮರಳು ಪ್ರದೇಶಗಳಲ್ಲಿ “ಮರಳುಗಾಡಿನಹಡಗು" ಎಂದು ಕರೆಯುತ್ತಾರೆ.
18. ದೂರವಾಣಿ ಉಪಕರಣವನ್ನು ಗ್ರಾಹಾಂಬೆಲ್ ಕಂಡುಹಿಡಿದರು.
19. ಮೊದಲ ರೈಲು 1853ರಲ್ಲಿ ಮಂಗಳೂರು ಮತ್ತು ಬೆಂಗಳೂರಿನ ನಡುವೆ ಓಡಿತು.
20. ಪತ್ರಿಕೆಗಳು ದೈನಂದಿನ ಹಾಗೂ ವಾರ ವಾರ ಪ್ರಕಟವಾಗುತ್ತವೆ.

21. ಹಡಗು ಸಮುದ್ರದಲ್ಲಿ ಪ್ರಯಾಣ ಮಾಡಲು ಉಪಯೋಗಿಸುತ್ತಾರೆ.

22. ಉಪಗ್ರಹಗಳು ಭೂಮಿಯ ಒಳಗೆ ಪ್ರಯಾಣಿಸುತ್ತವೆ.

23. ಟಿಪ್ಪಣಿ ಪತ್ರವನ್ನು ಅಂಚೆ ಕಚೇರಿಯಿಂದ ಕಳುಹಿಸಬಹುದು.

24. ದೂರದರ್ಶನದ ಮೂಲಕ ನಾವು ಸುದ್ದಿ ಮತ್ತು ಕಾರ್ಯಕ್ರಮಗಳನ್ನು ವೀಕ್ಷಿಸಬಹುದು.

25. ಅಂತರರಾಷ್ಟ್ರೀಯ ಪ್ರಯಾಣಕ್ಕೆ ಸಾಮಾನ್ಯವಾಗಿ ರೈಲುಗಳನ್ನು ಬಳಸುತ್ತಾರೆ.

26. ಹೊಂದಿಸಿಬರೆಯಿರಿ (ಸುಲಭ)

A	B
ಅ) ರೈಲು	ಅ) ಮರಳು ಪ್ರದೇಶಗಳಲ್ಲಿ "ಮರುಭೂಮಿಯಹಡಗು"
ಆ) ಒಂಟೆ	ಆ) 1853ರಲ್ಲಿ ಮೊದಲ ರೈಲು ಬೊಂಬಾಯಿಯಿಂದ ಠಾಣೆಗೆ
ಇ) ಗ್ರಾಹಾಮ್ ಬೆಲ್	ಇ) ವಿಮಾನವನ್ನು ಕಂಡುಹಿಡಿದರು
ಈ) ರೈಟ್ ಬ್ರದರ್ಸ್	ಈ) ದೂರವಾಣಿ ಉಪಕರಣವನ್ನು ಕಂಡುಹಿಡಿದರು
ಉ) ನಾಯಿ	ಉ) ಸಮುದ್ರದಲ್ಲಿ ಪ್ರಯಾಣ
ಊ) ಟಿಪ್ಪಣಿ ಪತ್ರ	ಊ) ಹಳೆಯ ಕಾಲದಲ್ಲಿ ಮೊದಲ ಸಾರಿಗೆ ಪ್ರಾಣಿ
ಋ) ಹಡಗು	ಋ) ಪೋಸ್ಟ್ ಕಚೇರಿಯಿಂದ ಕಳುಹಿಸುವ ಪತ್ರ
ಎ) ಉಪಗ್ರಹಗಳು	ಎ) ಚಿತ್ರ ಮತ್ತು ಕಾರ್ಯಕ್ರಮಗಳ ಪ್ರಸಾರ
ಏ) ದೂರದರ್ಶನ	ಏ) ದೈನಂದಿನ ಸುದ್ದಿಗಳನ್ನು ಪ್ರಕಟಿಸುವುದು
ಐ) ದಿನಪತ್ರಿಕೆ	ಐ) ಭೂಮಿಯ ಹೊರಗಿನ ಅಧ್ಯಯನ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಒಂದು ಅಂಕದ ಪ್ರಶ್ನೆಗಳು) (ಸುಲಭ)

27.ಸಾರಿಗೆ ಸಂಪರ್ಕ ಎಂದರೆ ಏನು?

28. ಸಾರಿಗೆ ಮುಖ್ಯ ಮಾಧ್ಯಮಗಳು ಯಾವುವು?

29. ಸಾರಿಗೆ ಸಂಪರ್ಕದ ಮುಖ್ಯ ಉದ್ದೇಶವೇನು?

30. ರೈಲು ಸಾರಿಗೆಗೆ ಉದಾಹರಣೆ ನೀಡು.

31. ವಾಯು ಸಾರಿಗೆ ಯಾವಾಗ ಉಪಯುಕ್ತ?

32. ಜಲಸಾರಿಗೆಗೆ ಉದಾಹರಣೆ ನೀಡು..

33. ಸಾರಿಗೆ ಸಂಪರ್ಕದ ಲಾಭವೇನು?

34. ಸಾರಿಗೆ ಸಂಪರ್ಕದ ಹಾನಿಯು ಏನು?

35. ಸಾರಿಗೆ ಸಂಪರ್ಕದಲ್ಲಿ ತಾಂತ್ರಿಕ ಸಾಧನಗಳ ಪಾತ್ರವೇನು?

36. ಸಾರಿಗೆ ಸಂಪರ್ಕದ ಅಭಿವೃದ್ಧಿಗೆ ಸರ್ಕಾರದ ಪಾತ್ರವೇನು?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಎರಡು ಅಂಕದ ಪ್ರಶ್ನೆಗಳು)

37. ಸಾರಿಗೆ ಪ್ರಕಾರಗಳನ್ನು ವಿವರಿಸಿ ? (ಸಾಧಾರಣ)

38. ಸಂಪರ್ಕ ಸಾಧನಗಳ ಪ್ರಕಾರಗಳನ್ನು ವಿವರಿಸಿ: (ಸುಲಭ)

39. ಭೂಸಾರಿಗೆಗೆ ಉದಾಹರಣೆಗಳು ಯಾವುವು? (ಸಾಧಾರಣ)

40. ಜಲ ಸಾರಿಗೆಗೆ ಉಪಯೋಗಿಸುವ ವಾಹನಗಳು ಯಾವುವು? (ಸಾಧಾರಣ)

41. ವಾಯು ಸಾರಿಗೆಗೆ ಉಪಯೋಗಿಸುವ ವಾಹನಗಳು ಯಾವುವು? (ಸಾಧಾರಣ)

42. ಪತ್ರದ ಮಹತ್ವವನ್ನು ವಿವರಿಸಿ. (ಸುಲಭ)

43. ದೂರವಾಣಿಯ ಉಪಯೋಗವನ್ನು ವಿವರಿಸಿ. (ಸಾಧಾರಣ)

44. ಇಂಟರ್ನೆಟ್‌ನ /ಅಂತರ್ಜಾಲ ಉಪಯೋಗವನ್ನು ವಿವರಿಸಿ. (ಸಾಧಾರಣ)

45. ಸಾರಿಗೆ ಮತ್ತು ಸಂಪರ್ಕದ ಸಂಬಂಧವನ್ನು ವಿವರಿಸಿ. (ಸುಲಭ)

46. ಸಾರಿಗೆ ಮತ್ತು ಸಂಪರ್ಕದ ಮಹತ್ವವನ್ನು ವಿವರಿಸಿ. (ಸುಲಭ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಮೂರು ಅಂಕದ ಪ್ರಶ್ನೆಗಳು)

47. ಸಾರಿಗೆ ಮಾರ್ಗಗಳ ವಿಭಿನ್ನ ತಂತ್ರಗಳ ಬಗ್ಗೆ ವಿವರಿಸಿ. (ಕಠಿಣ)

48. ವಿಮಾನಯಾನ ಮತ್ತು ರೈಲ್ವೆ ಸಾರಿಗೆ ನಡುವಿನ ವಿಶೇಷತೆಯನ್ನು ವಿವರಿಸಿ.(ಸುಲಭ)

49. ಸಂಪರ್ಕ ಸಾಧನಗಳಲ್ಲಿ ಉಲ್ಬಣವಾಗುವ ಮೂಲತಂತ್ರಗಳು ಯಾವುವು? (ಕಠಿಣ)

50. ಪ್ರವಾಸಿ ವಿನೋದಗಳಿಗೆ ಸಂಪರ್ಕದ ಅಗತ್ಯತೆ ಏಕೆ? (ಕಠಿಣ)

51. ಸಾರಿಗೆ ಉಚಿತತೆ ಮತ್ತು ಲಭ್ಯತೆ ಬಗ್ಗೆ ಏನು ಹೇಳಬಹುದು? (ಕಠಿಣ)

52. ಸಂಪರ್ಕದ ವಿಧಗಳು ಮತ್ತು ಅವುಗಳ ಉಪಯೋಗವನ್ನು ವಿವರಿಸಿ. (ಸಾಧಾರಣ)

53. ಹಿಂದಿನ ಕಾಲದಲ್ಲಿ ಸಂಚಾರ ಮತ್ತು ಸಂವಹನ ಹೇಗಿತ್ತು? (ಸಾಧಾರಣ)

54. ಆಧುನಿಕ ಕಾಲದಲ್ಲಿ ಸಾರಿಗೆ–ಸಂಪರ್ಕದ ಸವಾಲುಗಳು ಯಾವುವು? (ಕಠಿಣ)

55. ಗ್ರಾಮೀಣ ಭಾಗದಲ್ಲಿ ಸಾರಿಗೆ ಮತ್ತು ಸಂಪರ್ಕದ ಉಪಾಯಗಳು ಹೇಗೆ ಇವೆ? (ಸಾಧಾರಣ)

56. ಸಾರಿಗೆ ಸಂಪರ್ಕದ ಭವಿಷ್ಯದ ದೃಷ್ಟಿ ಕೋನದಲ್ಲಿ ಏನು ಬದಲಾಗಬಹುದು? (ಕಠಿಣ)

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ನಾಲ್ಕುಅಂಕದ ಪ್ರಶ್ನೆಗಳು)

57. ಹಳೆಯ ಕಾಲದಲ್ಲಿ ಜನರು ಹೇಗೆ ಸಂಚರಿಸುತ್ತಿದ್ದರು? (ಕಠಿಣ)

58. ಸಾರಿಗೆ ಸಂಪರ್ಕ ಏಕೆ ಅವಶ್ಯಕ? (ಸಾಧಾರಣ)

59. ಉತ್ತಮ ಸಾರಿಗೆ ವ್ಯವಸ್ಥೆಯು ದೇಶಕ್ಕೆ ಏನು ಪ್ರಯೋಜನ ಮಾಡುತ್ತದೆ? (ಕಠಿಣ)

60. ಸಾಗಣೆ ಮಾಡುವ ರೀತಿಗಳು ಯಾವುವು? (ಸಾಧಾರಣ)

61. ಸಾರಿಗೆ ವ್ಯವಹಾರದಲ್ಲಿ ತಂತ್ರಜ್ಞಾನ ಎಷ್ಟು ಉಪಯುಕ್ತ? (ಕಠಿಣ)

62. ಸಂಪರ್ಕ ಸಾಧನವಾದ ಎತ್ತಿನಗಾಡಿಯ ಚಿತ್ರ ಬಿಡಿಸಿ ಬಣ್ಣ ಹಾಕಿರಿ. (ಸಾಧಾರಣ)

ಪಾಠ 16: ಬದಲಾಗುತ್ತಿರುವ ಕುಟುಂಬಗಳು

ಕಲಿಕಾ ಫಲಗಳು :-

1. ಕುಟುಂಬ ವ್ಯವಸ್ಥೆಯಲ್ಲಿ ವರ್ಷಗಳ ಕಾಲಕ್ರಮೇಣ ಸಂಭವಿಸಿದ ಬದಲಾವಣೆಗಳನ್ನು ಗುರುತಿಸಬಹುದು.
2. ಸರಳ ವಂಶವೃಕ್ಷ ರೂಪಿಸಿ , ಬದಲಾವಣೆಗಳನ್ನು ದಾಖಲಿಸಬಹುದು.
3. ಹಳೆಯ ಮತ್ತು ಹೊಸ ಕುಟುಂಬದ ಸದಸ್ಯರನ್ನು ಹೋಲಿಸಿ ಬದಲಾವಣೆಗಳನ್ನು ಗುರುತಿಸಬಹುದು.
4. ಒಬ್ಬ ವ್ಯಕ್ತಿ ಬೇರೆ ಕಡೆಗೆ ಯಾಕೆ ಹೋಗುತ್ತಾನೆ ಎಂಬ ಕಾರಣವನ್ನು ವಿವರಿಸಬಹುದು.
5. ಹೊಸ ಸದಸ್ಯರು ಕುಟುಂಬಕ್ಕೆ ಹೇಗೆ ಸೇರುತ್ತಾರೆ ಎಂಬುದನ್ನು ತಿಳಿಸಬಹುದು..
6. ವಂಶವೃಕ್ಷ ಚಿತ್ರಿಸಬಹುದು ಮತ್ತು ಬದಲಾವಣೆಗಳನ್ನು ಗುರುತಿಸಲು ಚಿಹ್ನೆಗಳನ್ನು ಬಳಸಬಹುದು (ಹೋಗಿದವರಿಗೆ ವೃತ್ತ, ಹೊಸವರಿಗೆ ಚೌಕ).
7. ಕುಟುಂಬದ ಮೊದಲನೆಯ ಸ್ಥಿತಿ ಮತ್ತು ಇತ್ತೀಚಿನ ಸ್ಥಿತಿಯನ್ನು ಹೋಲಿಸಿ ಹೆಚ್ಚಳ ಅಥವಾ ಇಳಿಕೆಯನ್ನು ಗುರುತಿಸಬಹುದು.
8. ಹೆತ್ತವರು ಅಥವಾ ಹಿರಿಯರ ಸಹಾಯದಿಂದ ನಾಲ್ಕು ವರ್ಷಗಳ ಹಿಂದೆ ಮತ್ತು ಈಗಿನ ವಂಶವೃಕ್ಷವನ್ನು ರಚಿಸಬಹುದು.
9. ಬದುಕಿನ ಪಾಠಗಳನ್ನು ಕುಟುಂಬದಿಂದ ಹೇಗೆ ಕಲಿಯುತ್ತಾರೆ ಎಂಬುದನ್ನು ಅರ್ಥಮಾಡಿ ಕೊಳ್ಳುತ್ತಾರೆ.
10. ಕುಟುಂಬದ ಬದಲಾವಣೆಗಳು ಸಮಾಜದ ಬದಲಾವಣೆಗಳಿಗೆ ಹೇಗೆ ಕಾರಣವಾಗುತ್ತವೆ ಎಂಬುದನ್ನು ಅರ್ಥಮಾಡಿ ಕೊಳ್ಳುತ್ತಾರೆ.

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ(ಸುಲಭ)

1. ನಿಮ್ಮ ಕುಟುಂಬದ ಯಜಮಾನ ಯಾರು ?
ಎ) ಅಣ್ಣ ಬಿ) ಅಪ್ಪ ಸಿ) ನಾನು ಡಿ) ಅಮ್ಮ
2. ನಿಮ್ಮ ಕುಟುಂಬದ ವಿಧವನ್ನು ಗುರುತಿಸು?
ಎ) ಅತಿ ಚಿಕ್ಕ ಕುಟುಂಬ ಬಿ) ಚಿಕ್ಕ ಕುಟುಂಬ ಸಿ) ದೊಡ್ಡ ಕುಟುಂಬ ಡಿ) ಅತಿದೊಡ್ಡ ಕುಟುಂಬ
3. ನಿಮ್ಮ ಕುಟುಂಬದಲ್ಲಿ ಯಾರು ಕಥೆ ಹೇಳುತ್ತಾರೆ.?
ಎ) ಚಿಕ್ಕಪ್ಪ ಬಿ) ಅಣ್ಣ ಸಿ) ಅಜ್ಜಿ ಡಿ) ಅಕ್ಕ
4. ಕುಟುಂಬದ ಸದಸ್ಯರೆಲ್ಲರು ಒಟ್ಟಿಗೆ ಸಂಭ್ರಮಿಸುವುದು ಯಾವಾಗ?
ಎ) ಹಬ್ಬ-ಹರಿದಿನ ಬಿ) ಏನಾದರೂ ಕಳೆದುಕೊಂಡಾಗ
ಸಿ)ಅಪಘಾತವಾದಗ ಡಿ) ಹುಷಾರಿಲ್ಲದಾಗ
5. ದೊಡ್ಡ ಕುಟುಂಬಗಳು ಚಿಕ್ಕ ಕುಟುಂಬಗಳಾಗಿ ಬದಲಾವಣೆ ಹೊಂದಲು ಕಾರಣ ತಿಳಿಸಿ?
ಎ) ಹೊಂದಾಣಿಕೆ ಕೊರತೆ ಬಿ) ಸಹಕಾರ ಸಿ) ಮಮತೆ ಡಿ) ಸಮಾನತೆ

ಖಾಲಿ ಬಿಟ್ಟ ಸ್ಥಳಗಳನ್ನುಭರ್ತಿ ಮಾಡಿರಿ (ಸುಲಭ)

6. ರಾಮಯ್ಯ ಮತ್ತು ರಾಜಮ್ಮ ಅವರಿಗೆ ________ ಮಕ್ಕಳು ಇದ್ದಾರೆ.
44 ಉತ್ತರ : ನಗರಗಳಲ್ಲಿ ಹೆಚ್ಚು ವಿಭಕ್ತ ಕುಟುಂಬಗಳು ಕಂಡುಬರುತ್ತವೆ. ಯಾಕೆಂದರೆ ಪ್ರತ್ಯೇಕ ವಾಸಸ್ಥಾನಗಳು ಹೆಚ್ಚಾಗಿವೆ. ಉದ್ಯೋಗ ಮತ್ತು ವಿದ್ಯಾಭ್ಯಾಸ ಮುಖ್ಯ ಕಾರಣ.

45 ಉತ್ತರ : ಕೆಲವೊಮ್ಮೆ ಸಂಬಂಧಗಳು ದೂರವಾಗಬಹುದು. ಆದರೆ, ಹೊಸ ತಂತ್ರಜ್ಞಾನ ಮತ್ತು ಸಂವಹನದಿಂದ ಸಂಪರ್ಕ ಉಳಿದುಕೊಳ್ಳುತ್ತದೆ. ಸಹಕಾರ ಕಡಿಮೆಯಾಗಬಹುದು ಆದರೆ ಸ್ವತಂತ್ರತೆ ಹೆಚ್ಚುತ್ತದೆ.

46 ಉತ್ತರ : ಕುಟುಂಬ ಸದಸ್ಯರ ನಡುವೆ ಹೆಚ್ಚು ತಕ್ಷಣ ಸಂವಾದ ಕಡಿಮೆಯಾಗಬಹುದು. ಆದರೆ ಮೊಬೈಲ್, ಇಂಟರ್ನೆಟ್ ಮೂಲಕ ಸಂಪರ್ಕ ಉಳಿಯುತ್ತದೆ. ಕೆಲವೊಮ್ಮೆ ಕುಟುಂಬ ಸದಸ್ಯರ ನಡುವೆ ಭಾವನಾತ್ಮಕ ದೂರ ಉಂಟಾಗಬಹುದು.

ಮೂರು ವಾಕ್ಯದ ಉತ್ತರಗಳು

47 ಉತ್ತರ : ವಿಭಕ್ತ ಕುಟುಂಬವು ತಂದೆ, ತಾಯಿ ಮತ್ತು ಮಕ್ಕಳ ಸಣ್ಣ ಗುಂಪು ಮಾತ್ರವಿದೆ. ಅವಿಭಕ್ತ ಕುಟುಂಬದಲ್ಲಿ ದೊಡ್ಡ ಕುಟುಂಬದ ಎಲ್ಲಾ ಸದಸ್ಯರು ಒಟ್ಟಿಗೆ ವಾಸಿಸುತ್ತಾರೆ. ವಿಭಕ್ತ ಕುಟುಂಬದಲ್ಲಿ ಎಲ್ಲರಿಗೂ ಸ್ವತಂತ್ರತೆ ಹೆಚ್ಚಾಗುತ್ತದೆ, ಆದರೆ ಸಹಕಾರ ಕಡಿಮೆಯಾಗಬಹುದು.
ಅವಿಭಕ್ತ ಕುಟುಂಬದಲ್ಲಿ ಒಬ್ಬರ ಸಹಾಯದಿಂದ ಕೆಲಸಗಳು ಸರಾಗವಾಗಿ ನಡೆಯುತ್ತವೆ. ಈ ಎರಡು ಕುಟುಂಬ ಮಾದರಿಗಳಲ್ಲಿ ಜೀವನ ಶೈಲಿ ಮತ್ತು ಸಂಬಂಧಗಳ ವ್ಯತ್ಯಾಸ ಇರುತ್ತದೆ.

48.ಉತ್ತರ : ಕುಟುಂಬ ಮಾದರಿಗಳ ಬದಲಾವಣೆಯಿಂದ ಸಂಸ್ಕೃತಿ ಮತ್ತು ಆಚರಣೆಗಳಲ್ಲೂ ಬದಲಾವಣೆ ಆಗಿದೆ. ನಗರೀಕರಣದಿಂದ ಹೆಚ್ಚು ವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಇದರಿಂದ ಕುಟುಂಬದ ಸೌಹಾರ್ದ ಮತ್ತು ಪರಸ್ಪರ ಸಹಕಾರ ಕಡಿಮೆಯಾಗಬಹುದು. ಆದರೆ, ವ್ಯಕ್ತಿತ್ವ ಬೆಳವಣಿಗೆಗೆ ಮತ್ತು ಸ್ವತಂತ್ರತಿಗೆ ಅವಕಾಶ ಸಿಗುತ್ತದೆ. ಸಮಾಜದಲ್ಲಿ ಹೊಸ ರೀತಿಯ ಜೀವನಶೈಲಿ ಬೆಳೆಯುತ್ತಿದೆ.

49.ಉತ್ತರ : ಎಲ್ಲಾ ಸದಸ್ಯರು ತಮ್ಮ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸುತ್ತಾರೆ. ಹಿರಿಯರು ಮಕ್ಕಳಿಗೆ ಮಾರ್ಗದರ್ಶನ ನೀಡುತ್ತಾರೆ. ಸಹಾಯ-ಸಹಕಾರದಿಂದ ಮನೆ ಕೆಲಸಗಳು ಸರಾಗವಾಗಿ ನಡೆಯುತ್ತವೆ. ಎಲ್ಲರೂ ಒಟ್ಟಾಗಿ ಸಂಭಾಷಣೆ ಮತ್ತು ನಿರ್ಧಾರಗಳಲ್ಲಿ ಭಾಗವಹಿಸುತ್ತಾರೆ.
ಇದರಿಂದ ಕುಟುಂಬ ಸಂಬಂಧಗಳು ಬಲವಾಗಿ ರೂಪುಗೊಳ್ಳುತ್ತವೆ.

50.ಉತ್ತರ : ತಂದೆ ಮತ್ತು ತಾಯಿ ಮುಖ್ಯವಾಗಿ ಮನೆಯ ಆರ್ಥಿಕ ಮತ್ತು ಕಾಳಜಿ ಕೆಲಸಗಳನ್ನು ನಿಭಾಯಿಸುತ್ತಾರೆ. ಮಕ್ಕಳು ತಮ್ಮ ಶಾಲಾ ಮತ್ತು ಗೃಹಕಾರ್ಯಗಳನ್ನು ನಿಭಾಯಿಸುತ್ತಾರೆ.
ಪ್ರತಿ ಸದಸ್ಯನು ತನ್ನದೇ ಕೆಲಸಕ್ಕೆ ಜವಾಬ್ದಾರಿಯಾಗಿರುತ್ತಾನೆ. ಸಂವಾದ ಕಡಿಮೆಯಾಗಬಹುದು ಆದರೆ ಸ್ವತಂತ್ರತೆ ಹೆಚ್ಚಾಗುತ್ತದೆ. ಕುಟುಂಬ ಸದಸ್ಯರ ನಡುವೆ ಜವಾಬ್ದಾರಿಗಳ ಹಂಚಿಕೆ ಸ್ಪಷ್ಟವಾಗಿರುತ್ತದೆ.

51.ಉತ್ತರ : ನಗರೀಕರಣದಿಂದ ಜನರು ನಗರಗಳಿಗೆ ವಲಸೆ ಹೋಗುತ್ತಾರೆ. ನಗರದಲ್ಲಿ ಸಣ್ಣ ಕುಟುಂಬಗಳು ಹೆಚ್ಚು ಕಂಡುಬರುತ್ತವೆ. ಉದ್ಯೋಗಕ್ಕಾಗಿ ಬೇರೆ ನಗರಗಳಲ್ಲಿ ಬೇರೆಯಾಗಿರುವ ಕುಟುಂಬಗಳು ವಿಭಕ್ತವಾಗಿ ವಾಸಿಸುತ್ತವೆ. ಇದರಿಂದ ಅವಿಭಕ್ತ ಕುಟುಂಬ ಮಾದರಿ ಕಡಿಮೆಯಾಗುತ್ತಿದೆ. ಜೀವನಶೈಲಿಯ ಬದಲಾವಣೆಯಿಂದ ಕುಟುಂಬದ ಸಂಸ್ಕೃತಿಯಲ್ಲಿ ಬದಲಾವಣೆ ಆಗುತ್ತಿದೆ.

52.ಉತ್ತರ : ವಿಭಕ್ತ ಕುಟುಂಬಗಳಲ್ಲಿ ಮಕ್ಕಳು ಸ್ವತಂತ್ರತೆಯನ್ನು ಹೆಚ್ಚಾಗಿ ಅನುಭವಿಸುತ್ತಾರೆ.
ಆದರೆ ಅವಿಭಕ್ತ ಕುಟುಂಬದ ತಲೆಯವರು ಮತ್ತು ಅಜ್ಜ, ಅಜ್ಜಿಯವರ ನೆರವು ಕಡಿಮೆಯಾಗಬಹುದು. ಮಕ್ಕಳು ಕುಟುಂಬದ ಮೌಲ್ಯಗಳನ್ನು ಮನಗಂಡು ಬೆಳೆಯುತ್ತಾರೆ.
ಸಹೋದರ-ಸಹೋದರಿಯರ ಕೊರತೆ ಕೆಲವೊಮ್ಮೆ ಒಂಟಿತನಕ್ಕೆ ಕಾರಣವಾಗಬಹುದು. ಸಾಮಾಜಿಕ ಸಾಂಸ್ಕೃತಿಕ ಬೆಳೆವು ಕುಟುಂಬ ಮಾದರಿಯ ಮೇಲೆ ಅವಲಂಬಿತವಾಗಿದೆ.

ನಾಲ್ಕು ವಾಕ್ಯದ ಉತ್ತರಗಳು

53.ಉತ್ತರ : ವಿಭಕ್ತ ಕುಟುಂಬವು ಸಣ್ಣ ಗಾತ್ರದ ಕುಟುಂಬವಾಗಿದ್ದು, ಸ್ವತಂತ್ರತೆ ಮತ್ತು ವೈಯಕ್ತಿಕ ಆದಾಯದ ನಿರ್ವಹಣೆಗೆ ಹೆಚ್ಚು ಸೂಕ್ತವಾಗಿದೆ. ಅವಿಭಕ್ತ ಕುಟುಂಬವು ದೊಡ್ಡ ಕುಟುಂಬವಾಗಿದ್ದು, ಸಹಕಾರ ಮತ್ತು ಸಾಂಸ್ಕೃತಿಕ ಮೌಲ್ಯಗಳ ಉಳಿವಿಗೆ ಸಹಕಾರಿಯಾಗುತ್ತದೆ.
ವಿಭಕ್ತ ಕುಟುಂಬದಲ್ಲಿ ಪ್ರತ್ಯೇಕತೆಯಿಂದ ಜವಾಬ್ದಾರಿಗಳ ಹೊರೆ ಹೆಚ್ಚಾಗಬಹುದು. ಅವಿಭಕ್ತ ಕುಟುಂಬದಲ್ಲಿ ಸಹಾಯ-ಸಹಕಾರ ಹೆಚ್ಚು ಇದ್ದರೂ, ಸ್ವಾತಂತ್ರ್ಯ ಕಡಿಮೆಯಾಗಬಹುದು.
ವಿಭಕ್ತ ಕುಟುಂಬ ಹೆಚ್ಚು ನಗರಗಳಲ್ಲಿ ಕಂಡುಬರುತ್ತದೆ, ಆದರೆ ಅವಿಭಕ್ತ ಕುಟುಂಬ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಉಳಿದಿವೆ. ಪ್ರತಿಯೊಂದು ಮಾದರಿಗೂ ಅದರದೇ ಆದ ಲಾಭ-ನಷ್ಟಗಳಿವೆ.

54.ಉತ್ತರ : ನಗರೀಕರಣದಿಂದ ಜನರು ಉದ್ಯೋಗಕ್ಕಾಗಿ ದೊಡ್ಡ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇದು ಅವರ ಹಳೆಯ ಅವಿಭಕ್ತ ಕುಟುಂಬದಿಂದ ದೂರವಾಗುವ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಹೊಸ ಸ್ಥಳಗಳಲ್ಲಿ ಪ್ರತ್ಯೇಕವಾಗಿ ವಾಸಿಸುವ ಅಗತ್ಯದಿಂದ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಿದೆ. ಉದ್ಯೋಗ ಸೌಲಭ್ಯಗಳು ಹೆಚ್ಚು ಇರುವ ನಗರ ಪ್ರದೇಶಗಳಲ್ಲಿ ಸಣ್ಣ ಕುಟುಂಬಗಳು ಹೆಚ್ಚು ಕಂಡುಬರುತ್ತವೆ. ಇದರಿಂದ ಹಳೆಯ ಕುಟುಂಬ ಬಂಧಗಳು ಮತ್ತು ಪರಸ್ಪರ ಸಹಕಾರದಲ್ಲಿ ಬದಲಾವಣೆಗಳು ಸಂಭವಿಸುತ್ತಿವೆ. ಈ ಬದಲಾವಣೆಗಳು ಸಮಾಜದ ಸಂಸ್ಕೃತಿಗೂ ತೀವ್ರ ಪ್ರಭಾವ ಬೀರುತ್ತವೆ.

55.ಉತ್ತರ : ವಿಭಕ್ತ ಕುಟುಂಬಗಳಲ್ಲಿ ಮಕ್ಕಳಿಗೆ ಹೆಚ್ಚು ಸ್ವತಂತ್ರತೆ ದೊರಕುತ್ತದೆ. ಆದರೆ, ಕುಟುಂಬದ ಹಿರಿಯರಿಂದ ಮಾರ್ಗದರ್ಶನ ಮತ್ತು ಪಾಠಗಳ ಅಭಾವವುಂಟಾಗಬಹುದು.
ಮಕ್ಕಳು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು ಆದರೆ ಒಂಟಿತನ ಎದುರಾಗಬಹುದು.
ಅವಿಭಕ್ತ ಕುಟುಂಬಗಳಲ್ಲಿ ಸಹಜವಾಗಿ ಮೌಲ್ಯಬೋಧನೆ ಮತ್ತು ಸಂಸ್ಕಾರ ಕಲಿಯಬಹುದು.
ಇದು ಮಕ್ಕಳ ವ್ಯಕ್ತಿತ್ವ ಬೆಳವಣಿಗೆಗೆ ಸಹಕಾರಿ. ಬದಲಾಗುತ್ತಿರುವ ಕುಟುಂಬ ಮಾದರಿಗಳು ಸಮಾಜದ ಸಂಬಂಧದ ಬಿಂದುಗಳನ್ನು ಬದಲಿಸುತ್ತವೆ.

56.ಉತ್ತರ : ಅವಿಭಕ್ತ ಕುಟುಂಬದಲ್ಲಿ ಹಿರಿಯರಿಂದ ಉತ್ತಮ ಮಾರ್ಗದರ್ಶನ ಲಭ್ಯವಿರುತ್ತದೆ.
ಎಲ್ಲಾ ಸದಸ್ಯರು ಕೆಲಸಗಳಲ್ಲಿ ಸಹಕರಿಸುವುದರಿಂದ ಮನೆಯಲ್ಲಿ ಸಮರಸ್ಯವಿರುತ್ತದೆ. ಮಕ್ಕಳಿಗೆ ಸಂಸ್ಕೃತಿಯ ಅರಿವು ಮತ್ತು ಹಿರಿಯರ ಮೌಲ್ಯಬೋಧನೆ ಸಿಗುತ್ತದೆ. ಜವಾಬ್ದಾರಿಗಳನ್ನು ಹಂಚಿಕೊಂಡು ಜೀವನ ಸುಲಭಗೊಳ್ಳುತ್ತದೆ. ಸಂಬಂಧಗಳು ಹೆಚ್ಚು ಬಲವಾಗಿ ಬೆಳೆದುಬರುತ್ತವೆ.
ಇದು ಕುಟುಂಬದ ಒಗ್ಗೂಡಿಕೆಗೆ ಮತ್ತು ಶಾಂತಿಯುತ ಬದುಕಿಗೆ ಪೂರಕವಾಗಿರುತ್ತದೆ.

57.ಉತ್ತರ :ವಿಭಕ್ತ ಕುಟುಂಬದಲ್ಲಿ ತಾಯಿಯು ಗೃಹಕಾರ್ಯಗಳನ್ನು ನಿರ್ವಹಿಸುತ್ತಾಳೆ ಮತ್ತು ತಂದೆಯು ಆರ್ಥಿಕ ಜವಾಬ್ದಾರಿಯನ್ನು ಹೊರುತ್ತಾನೆ. ಮಕ್ಕಳೂ ತಮ್ಮ ವಿದ್ಯಾಭ್ಯಾಸ ಮತ್ತು ಸ್ವಂತ ಕೆಲಸಗಳ ಬಗ್ಗೆ ಜವಾಬ್ದಾರಿಯುತವಾಗಿರುತ್ತಾರೆ. ಇದು ಪ್ರತಿಯೊಬ್ಬರಲ್ಲೂ ಸ್ವತಂತ್ರತೆ ಮತ್ತು ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಆದರೆ ಎಲ್ಲರೂ ವ್ಯಸ್ತರಾಗಿರುವ ಕಾರಣ ಸಂಬಂಧಗಳ ನಡುವೆ ನಿಕಟತೆ ಕಡಿಮೆಯಾಗಬಹುದು. ಒಟ್ಟಾರೆ, ಇದು ಮಾದರಿಯಾಗಿ ವೈಯಕ್ತಿಕ ಬೆಳವಣಿಗೆಗೆ ಅನೂಕೂಲವಾಗಿದೆ. ಆದರೆ ಸಹಕಾರ ಮತ್ತು ಸಂಸ್ಕೃತಿಯ ಪಾಠದಲ್ಲಿ ಕೊರತೆ ಕಾಣಬಹುದು.

ಪಾಠ-17 ಮನೆಯೇ ಮೊದಲ ಪಾಠಶಾಲೆ

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ಹಿಂದೂ ಧರ್ಮದ ಪವಿತ್ರ ಗ್ರಂಥಗಳು

   ಎ) ಕುರಾನ್ ಬಿ) ಬೈಬಲ್ ಸಿ) ತ್ರಿಪೀಠಕಗಳು **ಡಿ) ಮಹಾಭಾರತ-ರಾಮಾಯಾಣ**

2. ಕ್ರೈಸ್ತ ಧರ್ಮದ ಸ್ಥಾಪಕರು

   ಎ) ಏಸುಕ್ರಿಸ್ತ ಬಿ) ಶ್ರೀರಾಮ ಸಿ) ವಿಷ್ಣು ಡಿ) ಮಹಮ್ಮದ್ ಪೈಗಂಬರ್

3. ಹಿಂದೂಗಳ ಹಬ್ಬವಿದು

   ಎ) ರಂಜಾನ್ ಬಿ) ಕ್ರಿಸ್ ಮಸ್ **ಸಿ) ದಸರಾ** ಡಿ) ಗುಡ್ ಪ್ರೈಡೇ

4. ಇಸ್ಲಾಂ ಧರ್ಮದ ಪವಿತ್ರ ಗ್ರಂಥವಿದು

   ಎ) ರಾಮಾಯಣ ಬಿ) ಬೈಬಲ್ ಸಿ) ಮಹಾಭಾರತ **ಡಿ) ಖುರಾನ್**

5. ಬೌದ್ಧ ಧರ್ಮದ ಸ್ಥಾಪಕರು

   ಎ) ಗೌತಮ ಬುದ್ಧ ಬಿ) ಮಹಾವೀರ ಸಿ) ಏಸುಕ್ರಿಸ್ತ ಡಿ) ಶ್ರೀಕೃಷ್ಣ

ಖಾಲಿ ಜಾಗ ತುಂಬಿರಿ – ಉತ್ತರಗಳು

6 ಧರ್ಮ, ಸಂಸ್ಕೃತಿ

7 ತಂದೆ, ಪ್ರಾರ್ಥನೆ

8 ದೇವಾಲಯ/ಚರ್ಚ್/ಮಸೀದಿ, ಪ್ರಾರ್ಥನೆ

9 ಇಡ್ಲಿ/ಸಿಹಿ ತಿಂಡಿ

10 ಪ್ರೀತಿ, ಗೌರವ

11 ಗೃಹಕಾಯಕ/ಮನೆ ಕೆಲಸ

12 ಹಬ್ಬಗಳು

13 ದಯೆ, ಕರುಣೆ

14 ಹೊಂದಿಸಿ ಬರೆಯಿರಿ (ಉತ್ತರಗಳು)

ಎ) - ಬಿ
ಬಿ) - ಎ
ಸಿ) - ಡಿ
ಡಿ)- ಸಿ
ಇ)- ಎಫ್
ಎಫ್)-ಇ

ಜಿ)- ಹೆಚ್

ಹೆಚ್)- ಜಿ

ಸರಿ ಅಥವಾ ತಪ್ಪು – ಉತ್ತರಗಳು

15 ಸರಿ

16 ಸರಿ

17 ತಪ್ಪು

18 ಸರಿ

19 ಸರಿ

20 ಸರಿ

21 ತಪ್ಪು

22 ಸರಿ

ಒಂದು ಅಂಕದ – ಉತ್ತರಗಳು

23 ಮಕ್ಕಳ ಮೊದಲ ಗುರು ತಂದೆ ತಾಯಂದಿರೇ.

24 ಪವಿತ್ರಾ ಕುಟುಂಬವು ಭಾನುವಾರ ಒಂದಾಗಿ ಊಟ ಮಾಡುತ್ತದೆ.

25 ರಜಿಯಾ ಕುಟುಂಬವು ಶುಕ್ರವಾರ ನಮಾಜ್ ಮಾಡುತ್ತದೆ.

26 ಜಾನ್ ತಂದೆ ಮರುಳುತನ ಮತ್ತು ಪ್ರೀತಿಯಿಂದ ಎಲ್ಲರನ್ನೂ ವರ್ತಿಸಬೇಕೆಂದು ಕಲಿಸುತ್ತದೆ.

27 ಎಲ್ಲಾ ಧರ್ಮಗಳು ಪ್ರೀತಿ ಮತ್ತು ಗೌರವವನ್ನು ಒತ್ತಿ ಹೇಳುತ್ತವೆ.

28 ಕುಟುಂಬ ಅಂದರೆ ಪ್ರೀತಿ ಮತ್ತು ಸಹಾಯದೊಂದಿಗೆ ಇರುವ ಸಣ್ಣ ಗುಂಪು.

29 ರಜಿಯಾದ ತಾಯಿ ಅವಳಿಗೆ ಕಥೆ ಹೇಳುತ್ತಾಳೆ.

30 ಜೈನರು ಸಾಂಪ್ರದಾಯಿಕವಾಗಿ ಸಸ್ಯಾಹಾರಿ ಆಹಾರ ತಿನ್ನುತ್ತಾರೆ.

ಎರಡು ಅಂಕದ – ಉತ್ತರಗಳು

31 ನನ್ನ ಕುಟುಂಬದಲ್ಲಿ ಪ್ರತಿದಿನ ಪ್ರಾರ್ಥನೆ ಮಾಡುತ್ತಾರೆ. ತಂದೆ ದೀಪ ಹಚ್ಚಿ ದೇವರಿಗೆ ಹೂವು ನೀಡುತ್ತಾನೆ.

32 ಕುಟುಂಬದ ಸದಸ್ಯರು ಮನೆ ಸ್ವಚ್ಛತೆ, ಅಡುಗೆ, ಬಟ್ಟೆ ತೊಳೆಯುವುದರಲ್ಲಿ ಸಹಾಯ ಮಾಡುತ್ತಾರೆ. ಉದಾಹರಣೆಗೆ ನಾನು ಗಿಡಗಳಿಗೆ ನೀರು ಹಾಕುತ್ತೇನೆ.

33 ಹಿರಿಯರು ನಮಗೆ ಸ್ನೇಹಿತರು ಮತ್ತು ಹಿರಿಯರೊಂದಿಗೆ ಪ್ರೀತಿಯಿಂದ ನಡೆದುಕೊಳ್ಳಬೇಕೆಂದು ಹೇಳುತ್ತಾರೆ.

34 ನನ್ನ ಕುಟುಂಬ ದೀಪಾವಳಿ/ ಕ್ರಿಸ್ಮಸ್/ಈದ್ ಹಬ್ಬಗಳನ್ನು ಆಚರಿಸುತ್ತದೆ. ನಾವು ಮನೆ ಸ್ವಚ್ಛತೆ ಮಾಡುತ್ತೇವೆ, ಅಲಂಕರಿಸುತ್ತೇವೆ ಮತ್ತು ವಿಶೇಷ ಆಹಾರ ಸೇವಿಸುತ್ತೇವೆ

35 ನಮ್ಮ ಕುಟುಂಬದ ದೊಡ್ಡವರು ಪಕ್ಕದ ಮಕ್ಕಳಿಗೆ ಓದು ಕಲಿಸುವ ಮೂಲಕ ಸಮಾಜಕ್ಕೆ ಸಹಾಯ ಮಾಡುತ್ತಾರೆ.

36 ಗಾಂಧೀಜಿ ಸತ್ಯ, ದಯೆ,ಕರುಣೆ ಮತ್ತು ಗೌರವ ಕುರಿತು ಎಲ್ಲರಿಗೂ ತಿಳಿಸಿದರು

37 ಈ ಮೌಲ್ಯಗಳು ಗಾಂಧೀಜಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಸಮಾನತೆಗಾಗಿ ಹೋರಾಡಲು ಸಹಾಯ ಮಾಡಿತು.

38 ನಾನು ಶಿಕ್ಷಕನಾಗಲು ಇಚ್ಛಿಸುತ್ತೇನೆ ಏಕೆಂದರೆ ಮಕ್ಕಳಿಗೆ ಓದು ಕಲಿಸಲು ಇಷ್ಟ.

39 ನನ್ನ ಕನಸು ಸಮಾಜದ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಒದಗಿಸುವುದರಿಂದ ಸಹಾಯ ಮಾಡುತ್ತದೆ.

40 ಮೊದಲ ಹುಡುಗನು ಚಂದ್ರಣ್ಣನ ಮೇಲೆ ಕೋಪದಿಂದ ಹೀಗೆ ನಡೆದುಕೊಂಡನು.

41 ಎರಡನೇ ಹುಡುಗನ ನಡತೆ ನನಗೆ ಇಷ್ಟವಾದುದು ಏಕೆಂದರೆ ಅವನು ಸಹಾಯ ಮಾಡಿತು ಮತ್ತು ದಯಾಳು ಇತ್ತು.

ಮೂರು ಅಂಕದ – ಉತ್ತರಗಳು

42 ದೀಪಾವಳಿ ಹಬ್ಬದಲ್ಲಿ ದೀಪ ಹಚ್ಚುತ್ತೇವೆ, ಕ್ರಿಸ್ಮಸ್ ನಲ್ಲಿ ಮರ ಅಲಂಕರಿಸುತ್ತೇವೆ, ಈದ್ ನಲ್ಲಿ ಸಿಹಿತಿಂಡಿಗಳನ್ನು ಹಂಚಿಕೊಳ್ಳುತ್ತೇವೆ.

43 ವೈದ್ಯರು ತಮ್ಮ ಕುಟುಂಬದಿಂದ ಪಡೆದ ಶಿಕ್ಷಣದಿಂದ ಬಡವರಿಗೆ ಉಚಿತ ಔಷಧಿ ಮತ್ತು ಆರೋಗ್ಯ ಶಿಕ್ಷಣ ನೀಡುತ್ತಾರೆ.

44 ತಾಯಿಯ ಗಿಡಗಳ ಪ್ರೀತಿಯನ್ನು ಅನುಸರಿಸಿ ಮಕ್ಕಳು ಗಿಡ ನೆಟ್ಟು ಪರಿಸರವನ್ನು ಹಸುರಾಗಿಟ್ಟುಕೊಂಡರು.

45 ಮೊದಲ ಹುಡುಗನು ಹೀಗೆ ದುಷ್ಟವಾಗಿ ನಡೆದುಕೊಂಡನು, ಎರಡನೇ ಹುಡುಗನು ಸಹಾಯ ಮಾಡಿದ್ದು ಬೇರೆಯಾಗಿತ್ತು.

46 ಮಹಾತ್ಮ ಗಾಂಧೀಜಿ ಸತ್ಯ, ದಯೆ ಮತ್ತು ಸಹಿಷ್ಣುತೆ ಕಲಿತರು.

47 ಮೇಜರ್ ಜನರಲ್ ಕಾರಿಯಪ್ಪ ಇಷ್ಟು, ಗೌರವ ಮತ್ತು ಧೈರ್ಯವನ್ನು ಕಲಿತರು.

ನಾಲ್ಕು ಅಂಕದ – ಉತ್ತರಗಳು

48 ನನ್ನ ಕುಟುಂಬದಲ್ಲಿ ಕಲಿತ ಪ್ರೀತಿ, ಗೌರವ ಮತ್ತು ಸರಿತೆಯು ನನ್ನ ನಡತೆ ಮತ್ತು ಗುರಿಗಳ ಮೇಲೆ ಪರಿಣಾಮ ಬೀರಿತು. ಉದಾಹರಣೆ – ನಾನು ಸದಾ ಸ್ನೇಹಿತರಿಗೆ ಸಹಾಯ ಮಾಡುತ್ತೇನೆ.

49 ಮೊದಲ ಹುಡುಗನು ಕೋಪದಿಂದ ಕೂಗಿದನು ಏಕೆಂದರೆ ಅವನು ದಯವಿಲ್ಲ. ಎರಡನೇ ಹುಡುಗನು ಸಹಾಯ ಮಾಡಿದನು ಏಕೆಂದರೆ ಅವನು ಬದ್ದನಾಗಿದ್ದನು. ಚಂದ್ರಣ್ಣನಿಗೆ

ಎರಡನೇ ಹುಡುಗನ ನಡತೆ ಇಷ್ಟವಾಯಿತು. ಈ ಕಥೆಯಿಂದ ನಾವು ಪ್ರೀತಿಯಿಂದ ಮತ್ತು ಸಹಾಯದಿಂದ ನಡೆದುಕೊಳ್ಳಬೇಕು ಎಂದು ಕಲಿಯುತ್ತೇವೆ.

50 ಪವಿತ್ರಾ ಕುಟುಂಬ ದೇವಾಲಯಕ್ಕೆ ಹೋಗುತ್ತಾರೆ, ರಜಿಯಾ ಕುಟುಂಬ ಮಸೀದಿಗೆ ಹೋಗುತ್ತದೆ, ಜಾನ್ ಕುಟುಂಬ ಚರ್ಚಿಗೆ ಹೋಗುತ್ತದೆ. ಧರ್ಮ ಬೇರೆಯಾಗಿದ್ದರೂ ಪ್ರೀತಿ ಮತ್ತು ಗೌರವ ಒಟ್ಟಾಗಿ ಕಲಿಸುತ್ತಾರೆ.

51 ನಾನು ವೈದ್ಯನಾಗಲು ಬಯಸುತ್ತೇನೆ ಏಕೆಂದರೆ ರೋಗಿಗಳ ಆರೋಗ್ಯವನ್ನು ಕಾಪಾಡಬಹುದು. ಇದು ಸಮಾಜಕ್ಕೆ ಸಹಾಯವಾಗುತ್ತದೆ. ಕುಟುಂಬ ಮೌಲ್ಯಗಳು ಪ್ರಾಮಾಣಿಕತೆ, ಪ್ರೀತಿ, ಹಂಚಿಕೆ ಮತ್ತು ಗೌರವ ಕಲಿಸುವ ಮೂಲಕ ಸಮಾಜದಲ್ಲಿ ಉತ್ತಮ ಬದಲಾವಣೆಯನ್ನು ತರುತ್ತವೆ. ಉದಾಹರಣೆಗೆ, ನಾವು ಹಂಚಿ ತಿಂದರೆ ಎಲ್ಲರೂ ಖುಷಿಯಾಗಿ ಹಸಿವು ಮುಕ್ತವಾಗಿ ಇರಬಹುದು.

ಪಾಠ-18 ಪ್ರತಿಯೊಬ್ಬರೂ ವಿಶಿಷ್ಟ

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ವ್ಯಕ್ತಿಯ ವೈಶಿಷ್ಟ್ಯತೆ ಎಂದರೆ ?
   ಎ) ವ್ಯಕ್ತಿಯ ಉದ್ದ **ಬಿ) ವ್ಯಕ್ತಿಯ ವ್ಯಕ್ತಿತ್ವ** ಸಿ) ವ್ಯಕ್ತಿಯ ವಯಸ್ಸು ಡಿ) ವ್ಯಕ್ತಿಯ ತೂಕ
2. ವ್ಯಕ್ತಿಯ ವೈಶಿಷ್ಟ್ಯತೆಗಳು ಯಾವುದರಿಂದ ಬರುತ್ತವೆ.
   ಎ) ನಡವಳಿಕೆ ಬಿ) ಶಿಕ್ಷಣ ಸಿ) ಶೀಲಾತ್ವ **ಡಿ) ಅನುಭವ**
3. ವೈಶಿಷ್ಟ್ಯತೆಗಳನ್ನು ನಾವು ಹೇಗೆ ಗುರುತಿಸ ಬಹುದು.?
   ಎ) ಕೇಳಿ **ಬಿ) ಗಮನಿಸಿ** ಸಿ) ನೋಡಿ ಡಿ) ವಿಚಾರಿಸಿ
4. ವ್ಯಕ್ತಿಯ ಕೌಶಲ್ಯವನ್ನು ಯಾವ ವಯಸ್ಸಿನಲ್ಲಿ ಗುರುತಿಸ ಬಹುದು
   ಎ) ವೃದಾಪ್ಯ ಬಿ) ಯೌವ್ವನ **ಸಿ) ಬಾಲ್ಯ** ಡಿ) ಶಿಶು
5. ಕನ್ನಡ ಚಿತ್ರರಂಗದಲ್ಲಿ ಕಿವಿ ಕೇಳದೇ ಇದ್ದರು ಅದ್ಭುತವಾಗಿ ನಟಿಸಿದ ನಟ
   ಎ) ಬಾಲಕೃಷ್ಣ ಬಿ) ಡಾ.ರಾಜಕುಮಾರ
   ಸಿ) ಡಾ.ವಿಷ್ಣುವರ್ಧನ ಡಿ) ಶಂಕರನಾಗ್

ಖಾಲಿ ಜಾಗ ತುಂಬಿರಿ ಉತ್ತರಗಳು

6 ಚಿತ್ರಕಲಾ
7 ಹಾಡು ಸ್ಪರ್ಧೆ
8 ನಾಟಕ
9 ನಾಟಕ
10 ದಾದಾಸಾಹೇಬ್ ಫಾಲ್ಕೆ

11 ಜಯ ಭಾರತ ಜನನಿಯ ತನುಜಾತೆ

12 ಕದಂಬ ಯುದ್ಧ

13 ಹಿಂದುಸ್ತಾನಿ

14 ಶ್ರವಣಹೀನ

15 ಬ್ರೈಲ್ ಲಿಪಿ

16 ಸೈನ್ /ಸಂಕೇತ ಭಾಷೆ

17 ಭಾರತ ರತ್ನ

ಸರಿ ಅಥವಾ ತಪ್ಪು ಉತ್ತರಗಳು

18 ತಪ್ಪು

19 ಸರಿ

20 ಸರಿ

21 ತಪ್ಪು

22 ಸರಿ

23 ತಪ್ಪು

24 ಸರಿ

25 ತಪ್ಪು

26 ಸರಿ

27 ಸರಿ

28. ಹೊಂದಿಸಿ ಬರೆಯಿರಿ

ಎ)	ಲತಾ	ಚಿತ್ರಕಲಾ ಸ್ಪರ್ಧೆ
ಬಿ)	ರಾಜು	ಮಣ್ಣಿನ ಮಾದರಿ ತಯಾರಿಸುವ ಸ್ಪರ್ಧೆ
ಸಿ)	ಮೊಹಮ್ಮದ್	ನಾಟಕ ಸ್ಪರ್ಧೆ
ಡಿ)	ರೀಟಾ	ಹಾಡು ಸ್ಪರ್ಧೆ
ಇ)	ಡಾ. ರಾಜ್‌ಕುಮಾರ್	ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ
ಎಫ್)	ಕುವೆಂಪು	ಜಯ ಭಾರತ ಜನನಿಯ ತನುಜಾತೆ
ಜಿ)	ಕಿತ್ತೂರು ರಾಣಿ ಚೆನ್ನಮ್ಮ	ಕುದುರೆ ಸವಾರಿ ಮತ್ತು ಕತ್ತಿ ವರಸೆ
ಹೆಚ್)	ಗಂಗೂಬಾಯಿ ಹಂಗಲ್	ಹಿಂದುಸ್ತಾನಿ ಸಂಗೀತದ ಪ್ರಸಿದ್ಧ ಗಾಯಕಿ
ಐ)	ಥಾಮಸ್ ಎಡಿಸನ್	ವಿದ್ಯುತ್ ಬಲ್ಬ್ ಆವಿಷ್ಕಾರಕರು
ಜೆ)	ಸರ್ ಎಂ. ವಿಶ್ವೇಶ್ವರಯ್ಯ	ಭಾರತ ರತ್ನ ಪ್ರಶಸ್ತಿ

ಒಂದು ಅಂಕದ ಉತ್ತರಗಳು

29 ಶಾಲೆಯ ವಾರ್ಷಿಕ ಕಾರ್ಯಕ್ರಮ

30 ಲತಾ

31 ಚಿತ್ರಕಲಾ

32 ಕುವೆಂಪು

33 ವಿದ್ಯುತ್ ಬಲ್ಬ್

34 ಬ್ರೈಲ್ ಲಿಪಿ

35 ಕಿತ್ತೂರು ರಾಣಿ ಚೆನ್ನಮ್ಮ

36 ಡಾ. ರಾಜ್‌ಕುಮಾರ್

ಎರಡು ಅಂಕದ ಉತ್ತರಗಳು

37 ರೀಟಾಳಿಗೆ ಸುಂದರವಾದ ಹಾಡುವ ಶಕ್ತಿ ಇದೆ. ಮೊಹಮ್ಮದ್ ನಾಟಕದಲ್ಲಿ ಚೆನ್ನಾಗಿ ನಟಿಸುತ್ತಾನೆ.

38 ನನ್ನ ಗೆಳೆಯನು ಹಾಡುವುದರಲ್ಲಿ ನಿಪುಣನು. ಮತ್ತೊಬ್ಬನು ಚಿತ್ರ ಬಿಡಿಸುವನು.

39 ನನ್ನ ತಾಯಿ ದಯಾಳುವಳು. ನನ್ನ ತಂದೆ ಶ್ರಮಿಕನಾಗಿದ್ದಾನೆ

40 ಡಾ. ರಾಜ್‌ಕುಮಾರ್ ಅವರು ನಟನ ಮತ್ತು ಹಾಡುವಲ್ಲಿ ನಿಪುಣರು.

41 ಕುವೆಂಪು - ಕವಿ; ಡಾ. ರಾಜ್‌ಕುಮಾರ್ - ನಟ ಮತ್ತು ಗಾಯಕ.

ಮೂರು ಅಂಕದ ಉತ್ತರಗಳು

42 ಎಡಿಸನ್ ಅವರ ಕಥೆಯಿಂದ ನಾವು ಪರಿಶ್ರಮ ವಹಿಸಿದರೆ ಯಶಸ್ಸು ಸಿಗುತ್ತದೆ ಎಂದು ತಿಳಿಯುತ್ತೇವೆ.

43 ಮಾತು ಮತ್ತು ಕೇಳುವ ಸಮಸ್ಯೆಯುಳ್ಳವರು ಸಂಕೇತ ಭಾಷೆ ಬಳಸುತ್ತಾರೆ.

44 ನಾವು ಸಹಾನು ಭೂತಿಯೊಂದಿಗೆ, ನೆರವಾಗುತ್ತಾ, ಸಮಾನವಾಗಿ ವ್ಯವಹರಿಸಬೇಕು.

45 ಕುವೆಂಪು ಅವರು ಕವನಗಳನ್ನು ಬರೆದಿದ್ದಾರೆ, ರಾಜ್ಯ ಗೀತೆ ರಚಿಸಿದ್ದಾರೆ ಮತ್ತು ಕನ್ನಡದ ಮಹಾನ್ ಕವಿ.

46 ಗಂಗೂಬಾಯಿ ಹಾನಗಲ್ ಅವರು ಅವರ ಕುಟುಂಬ ಮತ್ತು ಗುರುಗಳಿಂದ ಪ್ರೋತ್ಸಾಹ ಪಡೆದು ಪ್ರಸಿದ್ಧ ಗಾಯಕಿಯಾಗಿ ಬೆಳೆದರು.

ನಾಲ್ಕು ಅಂಕದ ಉತ್ತರಗಳು

47. ಲತಾ ಮತ್ತು ಅವರ ಸ್ನೇಹಿತರು:

- ಚಿತ್ರ ಬಿಡಿಸುವಲ್ಲಿ ಲತಾ ಪರಿಣತಿ ಹೊಂದಿದ್ದಾಳೆ.
- ಹಾಡುವಲ್ಲಿ ರೀಟಾ ಚೆನ್ನಾಗಿದೆ.
- ಮಣ್ಣಿನ ಮಾದರಿಯನ್ನುರಾಜು ಮಾಡುತ್ತಾನೆ.
- ನಾಟಕದಲ್ಲಿ ಮೊಹಮ್ಮದ್ ನಟಿಸಲು ಸಲಹೆ ಮಾಡುವನು..

48. ಪ್ರಸಿದ್ಧ ವ್ಯಕ್ತಿತ್ವ ಕುರಿತು ಪರಿಚ್ಛೇದ (ಕುವೆಂಪು ಉದಾಹರಣೆ): ಕುವೆಂಪು ಚಿಕ್ಕ ವಯಸ್ಸಿನಿಂದಲೇ ಓದಲು, ಬರೆಯಲು ಇಷ್ಟಪಟ್ಟರು. ಅವರು ಕನ್ನಡದ ಪ್ರಸಿದ್ಧ ಕವಿ ಆಗಿ ಬೆಳೆದರು. ಅವರು "ಜಯ ಭಾರತ ಜನನಿಯ ತನುಜಾತೆ" ಗೀತೆ ಬರೆದಿದ್ದಾರೆ. ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

49. ಸ್ನೇಹಿತರ ಪಟ್ಟಿಯನ್ನು ರಚಿಸಿ:

ಸ್ನೇಹಿತನ ಹೆಸರು	**ಪ್ರತಿಭೆ**	**ವಿಶೇಷತೆ ಏಕೆ?**
ಅನು	ಹಾಡು	ಅವಳು ಚೆನ್ನಾಗಿ ಹಾಡುತ್ತಾಳೆ.
ರಾಹುಲ್	ಚಿತ್ರಕಲಾ	ಅವನು ಸುಂದರ ಚಿತ್ರಗಳನ್ನು ಬಿಡಿಸುತ್ತಾನೆ.
ಮೀನಾ	ನೃತ್ಯ	ಅವಳು ಸೊಗಸಾಗಿ ನೃತ್ಯ ಮಾಡುತ್ತಾಳೆ.
ರವಿ	ಕಥಾ ಹೇಳಿಕೆ	ಅವನು ಆಕರ್ಷಕ ಕಥೆಗಳನ್ನು ಹೇಳುತ್ತಾನೆ.

50. ವಿಶೇಷ ಅಗತ್ಯಗಳಿರುವ ಮಕ್ಕಳ ಜೊತೆ ಹೇಗೆ ನಡೆದುಕೊಳ್ಳಬೇಕು: ನಾವು ಅವರಿಗೆ ದಯೆಯಿಂದ ಮತ್ತು ಸಹನೆಯೊಂದಿಗೆ ನಡೆದುಕೊಳ್ಳಬೇಕು. ಅವರೊಡನೆ ಸಂಕೇತ ಭಾಷೆ ಅಥವಾ ಸರಳ ಪದಗಳ ಮೂಲಕ ಮಾತನಾಡಬಹುದು. ಅವರನ್ನು ಸಮಾನವಾಗಿ ನೋಡಬೇಕು ಮತ್ತು ಪ್ರೋತ್ಸಾಹಿಸಬೇಕು.

ಪಾಠ-19 ವೃತ್ತಿ ವಿಶೇಷ

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ವೈದ್ಯರು ನಮ್ಮನ್ನು ಯಾವಾಗ ಭೇಟಿ ನೀಡುತ್ತಾರೆ?
A) ಶಾಲೆಗೆ ಹೋಗುವಾಗ B) ಹೊಟೆಲಿಗೆ ಹೋದಾಗ **C) ಅಸ್ವಸ್ಥರಾಗಿದ್ದಾಗ** D) ಮೇಳಕ್ಕೆ ಹೋದಾಗ

2. ನಮ್ಮ ಮನೆ ನಿರ್ಮಾಣ ಮಾಡುವವರು ಯಾರು?
A) **ಕಟ್ಟಡ ಕಾರ್ಮಿಕರು** B) ವೈದ್ಯರು C) ಬುಡಕಟ್ಟು ಜನರು D) ಬಡಗಿ

3. ದಂತ ವೈದ್ಯರು ಯಾವ ಸಮಸ್ಯೆಗಳನ್ನು ನೋಡುತ್ತಾರೆ?
A) ಕಣ್ಣು **B) ಹಲ್ಲು** C) ಕಾಲು D) ಮೊಲೆ

4. ಮಕ್ಕಳಿಗೆ ಪಾಠ ಹೇಳುವವರು ಯಾರು?
A) ವ್ಯಾಪಾರಿ B) ಪೊಲೀಸ್ **C) ಶಿಕ್ಷಕರು** D) ತೋಟಗಾರ

5. ಬಟ್ಟೆ ಒಗೆಯವವರು ಯಾರು?
A) **ಅಗಸ.** B) ಬಟ್ಟೆ ವ್ಯಾಪಾರಿ C) ಚಕ್ಕಿ ಮಾಲೀಕ D) ಕಾರ್ಮಿಕ

ಖಾಲಿ ಜಾಗ ತುಂಬಿರಿ

6 ರಾಮನಹಳ್ಳಿ ಗ್ರಾಮದ ಜನರು ವಿವಿಧ **ವೃತ್ತಿಗಳಲ್ಲಿ** ನಿರತರಾಗಿದ್ದಾರೆ.

7 ನಾವು ಧರಿಸುವ ಬಟ್ಟೆಗಳನ್ನು **ದರ್ಜಿಗಾರರು** ಹೊಲೆಯುತ್ತಾರೆ

8 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸುವುದು *ಕಾನೂನು* **ಬಾಹಿರ**.

9 ರಾಮನಗರ ಜಿಲ್ಲೆ ಚನ್ನಪಟ್ಟಣ **ಮರದ ಆಟಿಕೆಗಳ** ಮತ್ತು ಮರದಿಂದ ಮಾಡಿದ ವಸ್ತುಗಳಿಗಾಗಿ ಪ್ರಸಿದ್ಧ.

10 ಒಂದೇ ವೃತ್ತಿಯಲ್ಲಿ ನಿರತರಾಗಿರುವ ಜನರು ಇತರರ ಮೇಲೆ **ಸರಕುಗಳು ಮತ್ತು ಸೇವೆಗಳು** ಗಾಗಿ ಅವಲಂಬಿತರಾಗಿದ್ದಾರೆ.

11 ಕೆಲಸ ಮಾಡುತ್ತಿರುವ ಮಕ್ಕಳಿಗೆ **ಶಿಕ್ಷಣ** ದೊರೆಯುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ.

12 ಸೋಮುವಿನ ಮನೆಯ ಪ್ರತಿದಿನದ ವಸ್ತುಗಳನ್ನು **ಕಲೆಗಾರರು** ಮಾಡುತ್ತಾರೆ.

13 ಕೆಲಸ ಮಾಡುತ್ತಿರುವ ಮಕ್ಕಳಿಗೆ ಅನೇಕ ಸಮಸ್ಯೆಗಳಾಗುತ್ತವೆ, ಅದರಲ್ಲಿ ಇದು ಒಂದಾಗಿದೆ **ಶಿಕ್ಷಣದ ಕೊರತೆ**.

14 6-14 ವರ್ಷದ ಕೆಲಸ ಮಾಡುವ ಮಕ್ಕಳಿಗಾಗಿ ಸರ್ಕಾರ **ಶಾಲೆಗಳನ್ನು** ಸ್ಥಾಪಿಸಿದೆ.

15 ಕೃಷಿ ವೃತ್ತಿಯಲ್ಲಿ ನಿರತರಾಗಿರುವ ವ್ಯಕ್ತಿಯನ್ನು **ಕೃಷಿಕ / ರೈತ** ಎಂದು ಕರೆಯುತ್ತಾರೆ.

ಸರಿ ಅಥವಾ ತಪ್ಪು ತಿಳಿಸಿ ಉತ್ತರಗಳು

16 14 ವರ್ಷಕ್ಕಿಂತ ಕೆಳಗಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸುವುದು ಕಾನೂನಿಗೆ ಅನುಕೂಲಕರ. —**ತಪ್ಪು**

17 ಬಡಗಿ ಮರವನ್ನು ಕಡಿದು ಮತ್ತು ರೂಪಿಸಿ ಹಲವಾರು ವಸ್ತುಗಳನ್ನು ತಯಾರಿಸುತ್ತಾನೆ. —**ಸರಿ**

18 ಚನ್ನಪಟ್ಟಣವು ಮರದ ಕೈಗಾರಿಕೆಗೆ ಪ್ರಸಿದ್ಧವಲ್ಲ. — **ತಪ್ಪು**

19 ಕೆಲಸ ಮಾಡುತ್ತಿರುವ ಮಕ್ಕಳು ಯಾವುದೇ ಸಮಸ್ಯೆಗಳನ್ನು ಎದುರಿಸುವುದಿಲ್ಲ. — **ತಪ್ಪು**

20 ಒಂದು ವೃತ್ತಿಯ ಜನರು ಇತರ ವೃತ್ತಿಯವರ ಮೇಲೆ ಅವಲಂಬಿತರಾಗಿರುತ್ತಾರೆ. — **ಸರಿ**

21 ಸರ್ಕಾರ ಕೆಲಸ ಮಾಡುತ್ತಿರುವ ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳನ್ನು ಒದಗಿಸುತ್ತದೆ. — **ಸರಿ**

22 ನಮ್ಮ ಬಟ್ಟೆಗಳನ್ನು ತಯಾರಿಸಲು ರೈತ ಸಹಾಯ ಮಾಡುತ್ತಾರೆ. — **ಸರಿ**

23 ವೈದ್ಯರು ಮತ್ತು ಶಿಕ್ಷಕರು ಸ್ಥಳೀಯ ಕಾರ್ಮಿಕರು. — **ಸರಿ**

24 ಕೆಲಸ ಮಾಡುತ್ತಿರುವ ಮಕ್ಕಳನ್ನು ಶಿಕ್ಷಣದ ಬದಲು ಉದ್ಯೋಗಕ್ಕೆ ನಿಯೋಜಿಸಬೇಕು. — **ತಪ್ಪು**

25 ಹಸ್ತಶಿಲ್ಪ/ ಕಟ್ಟಿಗೆ ಗೊಂಬೆ ತಯಾರಿಕೆ ಕೈಗಾರಿಕೆಗಳು ಕರ್ನಾಟಕದ ಪ್ರಮುಖ ವೃತ್ತಿಗಳಲ್ಲಿಯಾಗಿದೆ. — **ಸರಿ**

26 ಹೊಂದಿಸಿ ಬರೆಯಿರಿ (ಉತ್ತರಗಳು)

A (ವೃತ್ತಿಗಳು)	**B (ಕೆಲಸದ ವಿವರಣೆ)**
ಅ. ರೈತ	ಮನೆಯ ಆಹಾರ ಬೆಳೆಸುತ್ತಾನೆ.
ಆ. ಬಡಗಿ	ಮರವನ್ನು ಕಡಿದು ರೂಪಿಸುತ್ತಾನೆ.
ಇ. ಶಿಕ್ಷಕ	ಮಕ್ಕಳಿಗೆ ಪಾಠ ಕಲಿಸುತ್ತಾನೆ.
ಈ. ವೈದ್ಯ	ರೋಗಿಗಳಿಗೆ ಚಿಕಿತ್ಸೆ ನೀಡುತ್ತಾನೆ.
ಉ. ಹೂವಿನ ವ್ಯಾಪಾರಿ	ಹೂಗಳನ್ನು ಮಾರುತ್ತಾನೆ.
ಊ. ನೃತ್ಯಗಾರ	ನೃತ್ಯ ಪ್ರದರ್ಶನ ಮಾಡುತ್ತಾನೆ.
ಋ. ಚಾಲಕ	ವಾಹನಗಳನ್ನು ಚಲಾಯಿಸುತ್ತಾನೆ.
ಎ. ಪೋಸ್ಟ್ ಮ್ಯಾನ್	ಪತ್ರಗಳನ್ನು ವಿತರಿಸುತ್ತಾನೆ.

A (ವೃತ್ತಿಗಳು) **B (ಕೆಲಸದ ವಿವರಣೆ)**

ಏ. ಹೊಲದ ಗಟ್ಟಿಗ ಹಳ್ಳಿಯಲ್ಲಿ ಕೆಲಸ ಮಾಡುತ್ತಾನೆ.

ಐ. ಸಿಂಪಿಗ ಬಟ್ಟೆಗಳನ್ನು ಹೊಲೆಯುತ್ತಾನೆ.

ಒಂದು ಅಂಕದುಉತ್ತರಗಳು

27 ನಿಮ್ಮ ಹಳ್ಳಿಯಲ್ಲಿ ಕಂಡುಬರುವ ಒಂದು ಕಲೆಗಾರರ ಹೆಸರೇನು?

- **ಕುಂಬಾರ, ಬಡಿಗ, ಸಿಂಪಿಗ, ದರ್ಜಿ, ಪೋಸ್ಟ್ ಮ್ಯಾನ್, ಕೃಷಿಕ, ಅಗಸ ಮುಂತಾದವರು**

28 ಕರ್ನಾಟಕದಲ್ಲಿ ಮರದ ಆಟಿಕೆಗಳು ಮತ್ತು ಗೊಂಬೆಗಳಿಗೆ ಯಾವ ಸ್ಥಳ ಪ್ರಸಿದ್ಧ?

a. **ಚನ್ನಪಟ್ಟಣ**

29 ಮಕ್ಕಳನ್ನು ಯಾವ ವಯಸ್ಸಿನಲ್ಲಿ ಕೆಲಸಕ್ಕೆ ನಿಯೋಜಿಸುವುದು ಅಕ್ರಮ?

a. **14 ವರ್ಷಕ್ಕಿಂತ ಕಡಿಮೆ**

30 ರಾಮನಹಳ್ಳಿ ಹಳ್ಳಿಯಲ್ಲಿ ಕಂಡುಬರುವ ಒಂದು ವೃತ್ತಿ ಏನು?

a. ರೈತ, ಕಾರ್ಮಿಕ, ದರ್ಜಿ

31 ಕೈಗಾರಿಕೆಯಲ್ಲಿ ಕರ್ನಾಟಕದ ವಿಶೇಷತೆ ಏನು?

a. **ಕಟ್ಟಿಗೆಯಿಂದ ಮಕ್ಕಳ ಆಟಿಕೆಗಳನ್ನು ತಯಾರಿಸಲಾಗುತ್ತದೆ**

32 ಬಡಿಗ ಏನು ಮಾಡುತ್ತಾನೆ?

a. **ಮರದ ಕೆಲಸ ಮಾಡುತ್ತಾನೆ.**

33 ನಮ್ಮ ಬಟ್ಟೆಗಳನ್ನು ಹೊಲಿಯುವವರು ಯಾರು?

a. **ದರ್ಜಿ ಅಥವಾ ಬಟ್ಟೆ ಹೊಲಿಯುವವರು**

34 ಹೊಲದಲ್ಲಿ ಬೆಳೆ ಯಾರು ಬೆಳೆಸುತ್ತಾರೆ?

a. ರೈತ

ಎರಡ ಅಂಕದ ಉತ್ತರಗಳು

35 ಆನೆ ಕಥೆಯಿಂದ ನಾವು ಏನು ಕಲಿಯುತ್ತೇವೆ?

ಎಲ್ಲಾ ಜನರೂ ಪರಸ್ಪರ ಅವಲಂಬಿತರಾಗಿದ್ದಾರೆ ಮತ್ತು ವಿವಿಧ ವೃತ್ತಿಗಳ ಜನರು ವಿಭಿನ್ನ ಕೆಲಸ ಮಾಡುತ್ತಾರೆ.

36 ಎರಡು ಕಲೆಗಾರರ ಹೆಸರನ್ನೂ ಮತ್ತು ಅವರ ಕೆಲಸವನ್ನು ಬರೆಯಿರಿ.

ಶಿಕ್ಷಕರು ಬೋಧನಾ ಕೆಲಸ ಮಾಡುತ್ತಾರೆ. ಹೂವಿನ ವ್ಯಾಪಾರಿ ಹೂಗಳ ಮಾರಾಟ ಮಾಡುತ್ತಾನೆ..

37 ಕೆಲಸ ಮಾಡುವ ಮಕ್ಕಳಿಗೆ ಎದುರಾಗುವ ಎರಡು ಸಮಸ್ಯೆಗಳೇನು?

ಶಿಕ್ಷಣದಿಂದ ವಂಚಿತರಾಗುತ್ತಾರೆ. ದೈಹಿಕ ಬೆಳವಣಿಗೆಯಲ್ಲಿ ಕುಂಠಿತಗೊಳ್ಳುತ್ತಾರೆ.

38 ಬಟ್ಟೆ ತಯಾರಿಕೆಯಲ್ಲಿ ಭಾಗವಹಿಸುವವರು ಯಾರು?

ರೈತ, ಇಂಜಿನಿಯರ್, ಕಾರ್ಮಿಕ ಮತ್ತು ದರ್ಜಿ.

39 ವಿಭಿನ್ನ ವೃತ್ತಿಗಳ ಮಹತ್ವದ ಬಗ್ಗೆ ಎರಡು ಸಾಲುಗಳನ್ನು ಬರೆಯಿರಿ.

ಪ್ರತಿಯೊಂದು ವೃತ್ತಿಯು ಶ್ರೇಷ್ಠವಾದ ವೃತ್ತಿಗಳಾಗಿವೆ. ಉದಾಹರಣೆಗೆ ಬಟ್ಟೆ ಹೊಲಿಯುವನು ಬಟ್ಟೆ ಹೊಲಿಯದೆ ಹೋಗಿದ್ದರೆ ನಮಗೆ ಎಷ್ಟು ತೊಂದರೆ ಆಗುತ್ತಿತ್ತು. ಮನೆ ಕಟ್ಟುವವರು ಅಂದರೆ ಗೌಂಡಿ ಅವರು ಸಹ ಮನೆ ಕಟ್ಟದೆ ಹೋಗಿದ್ದರೆ ನಮಗೆ ತುಂಬಾ ತೊಂದರೆ ಆಗುತ್ತಿದ್ದವು. ಮತ್ತು ರೈತ ಬೆಳೆಗಳನ್ನು ಬೆಳೆಯದೆ ಹೋದರೆ ಯಾವ ಪ್ರಾಣಿಗಳಿಗೂ ಸಹ ಆಹಾರ ದೊರಕುತ್ತಿರಲಿಲ್ಲ ಹೀಗೆ ಪ್ರತಿಯೊಂದು ವೃತ್ತಿಯು ಶ್ರೇಷ್ಠವಾಗಿದೆ ತಮ್ಮದೇ ಆದ ಮಹತ್ವವನ್ನು ಹೊಂದಿವೆ.

ಮೂರು ಅಂಕದ ಉತ್ತರಗಳು

40 ಆನೆ ಕಥೆಯಲ್ಲಿ ಆನೆ ಮೊದಲಿಗೆ ಯಾರನ್ನು ಭೇಟಿ ಮಾಡಿತು?

a. ಬಡಗಿ

b. ನಂತರ ದರ್ಜಿಗಾರನನ್ನು,

c. ನಂತರ ಮಡಿಕೆ ಮಾಡುವವನನ್ನು

d. ನಂತರ ಕೃಷಿಕನನ್ನು

41 ನಿಮ್ಮ ಪ್ರದೇಶದಲ್ಲಿರುವ ಮೂರು ವೃತ್ತಿಗಳ ಹೆಸರು ಮತ್ತು ಅವುಗಳ ಕೆಲಸ ಬರೆಯಿರಿ.

a. ಕೃಷಿಕ : ಬೆಳೆ ಬೆಳೆಯುವವರು.

b. ಶಿಕ್ಷಕ : ಮಕ್ಕಳಿಗೆ ಪಾಠಮಾಡುತ್ತಾರೆ.

c. ಬಡಗಿ : ಮರದಿಂದ ವಸ್ತು ತಯಾರಿಸುತ್ತಾರೆ.

d. ವಿಭಿನ್ನ ವೃತ್ತಿಗಳು ಪರಸ್ಪರ ಅವಲಂಬಿತ ರಾಗಿರಬೇಕು ಏಕೆಂದರೆ:-

e. ಯಾರೂ ಎಲ್ಲ ಕೆಲಸಗಳನ್ನು ಒಬ್ಬನೇ ಮಾಡಲಾರರು. ಜನರು ಪರಸ್ಪರ ನೆರವಾಗಬೇಕು.

42 ಏಕೆ ವಿಭಿನ್ನ ವೃತ್ತಿಗಳು ಪರಸ್ಪರ ಅವಲಂಬಿತರಾಗಿರಬೇಕು?

a. ಕೃಷಿ ತೋಟದವರು ಹತ್ತಿಯನ್ನು ಬೆಳೆಸುತ್ತಾರೆ,

b. ನೂಲುಗಾರರು ಚರಕದಿಂದ ನೂಲನ್ನು ತಯಾರಿಸುತ್ತಾರೆ,

c. ದರ್ಜಿಗಾರರು ಬಟ್ಟೆಯನ್ನು ಹೊಲಿಯುತ್ತಾರೆ.

43 ಶರ್ಟ್ ತಯಾರಿಕೆಯಲ್ಲಿ ಭಾಗವಹಿಸುವ ಮೂರು ಹಂತಗಳು ಅಥವಾ ಜನರು ಯಾವವರು?

a. ಹತ್ತಿಯನ್ನು ಬೆಳೆಯುತ್ತಾರೆ,

b. ಕಾರ್ಮಿಕರು ನೂಲನ್ನು ತಯಾರಿಸುತ್ತಾರೆ,

c. ದರ್ಜಿಗಾರರು ಬಟ್ಟೆಯನ್ನು ಹೊಲಿಯುತ್ತಾರೆ.

44 ಕೆಲಸ ಮಾಡುವ ಮಕ್ಕಳಿಗೆ ಸರ್ಕಾರ ಹೇಗೆ ನೆರವಾಗುತ್ತದೆ?

a. ಶಿಕ್ಷಣಕೇಂದ್ರಗಳನ್ನುಆರಂಭಿಸುತ್ತದೆ,

b. ಆಹಾರ ಮತ್ತು ಆರೈಕೆ ನೀಡುತ್ತದೆ,

c. ಮಕ್ಕಳ ಕಾರ್ಮಿಕರ ರಕ್ಷಣೆಗಾಗಿ ಕಾಯ್ದೆಗಳು ಇರುತ್ತವೆ.

ನಾಲ್ಕು ಅಂಕದ ಉತ್ತರಗಳು

45. ಆನೆ ಕಥೆ ಮೇಲೆ ಉತ್ತರಗಳು:

- 1. ಆನೆ ಕಥೆ ಮೇಲೆ ಉತ್ತರಗಳು:
- * ಆನೆ ತುಂಬಾ ಜನರನ್ನು ಭೇಟಿ ಮಾಡಿತು .
- * ಸಹಾಯ ಪಡೆಯಲು ಮತ್ತು ಅವರ ಕೆಲಸ ತಿಳಿದುಕೊಳ್ಳಲು.
- * ಪ್ರತಿಯೊಬ್ಬರು ಆನೆಗೆ ಬೇಕಾದ ವಸ್ತುಗಳನ್ನು ತರುವುದೆಂದು ಕೇಳಿದರು.
- * ನಾವು ಕಲಿಯುವುದು, ಎಲ್ಲರ ಕೆಲಸಗಳು ಒಂದೇ ಹಾಗೂ ಮುಖ್ಯ ಮತ್ತು ಪರಸ್ಪರ ಅವಲಂಬಿತವಾಗಿವೆ.

46. ಕೆಲಸ ಮಾಡುವ ಮಕ್ಕಳ ಎದುರಿಸುವ ನಾಲ್ಕು ಸಮಸ್ಯೆಗಳು:

- ಶಿಕ್ಷಣದ ಕೊರತೆ.
- ಆರೋಗ್ಯ ಕೆಡುವುದು,
- ಆಟದ ಅಥವಾ ವಿಶ್ರಾಂತಿಯ ಸಮಯದ ಕೊರತೆ.
- ದುರ್ಬಳಕೆ ಮಾಡಿಕೊಳ್ಳುವುದು.

47. ಕಲೆಗಾರರು ಮತ್ತು ಅವರ ವೃತ್ತಿಗಳ ಮಹತ್ವ:

- ಕಲೆಗಾರರು ಮತ್ತು ಅವರ ವೃತ್ತಿಗಳ ಮಹತ್ವ:
- ಕಲೆಗಾರರು ಕೈಕೆಲಸ ಮಾಡುವ ಪರಿಣಿತರು.
- ಉದಾಹರಣೆ : ಕುಂಬಾರ, ಬಡಿಗ, ದರ್ಜಿಗಾರ
- ಅವರು ನಮ್ಮ ದೈನಂದಿನ ವಸ್ತುಗಳನ್ನು ತಯಾರಿಸುತ್ತಾರೆ.
- ಪರಸ್ಪರ ಅವಲಂಬನೆ ಎಲ್ಲರ ಜೀವನಕ್ಕೆ ಅಗತ್ಯ

48. ಕರ್ನಾಟಕದ ಕೈಗಾರಿಕೆಗಳು:

- ಕರ್ನಾಟಕದ ಕೈಗಾರಿಕೆಗಳು:
- ಕರ್ನಾಟಕ ರಾಜ್ಯದ ಚನ್ನಪಟ್ಟಣವು ಕಟ್ಟಿಗೆಯ ಗೊಂಬೆಗಳನ್ನು ಮಾಡುವಲ್ಲಿ ತುಂಬಾ ಪ್ರಸಿದ್ಧಗೊಂಡಿದೆ. ಆಟಿಕೆಗಳಿಗಾಗಿ ಹೆಸರುವಾಸಿಯಾಗಿದೆ.
- ಕೈಗಾರಿಕೆಗಳು ಸಂಸ್ಕೃತಿ ಮತ್ತು ಆರ್ಥಿಕತೆಗೆ ಮುಖ್ಯ.
- ಪರಿಣತ ಕಲೆಗಾರರು ಇಂತಹ ಕೆಲಸ ಮಾಡುತ್ತಾರೆ.

ಪಾಠ-20 ಹಬ್ಬ-ಹರುಷ

ಈ ಕೆಳಗಿನ ಪ್ರಶ್ನಳಿಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ನಮ್ಮ ರಾಜ್ಯದ ರಾಜಧಾನಿ
   ಎ) ಮಂಗಳೂರು ಬಿ) ಬಳ್ಳಾರಿ **<u>ಸಿ) ಬೆಂಗಳೂರು</u>** ಡಿ) ಮೈಸೂರು
2. ನಮ್ಮ ರಾಜ್ಯದ ರಾಜ್ಯ ಪಕ್ಷಿ
   ಎ) ನವಿಲು ಬಿ) ಗುಬ್ಬಚ್ಚಿ ಸಿ) ಕೋಗಿಲೆ **<u>ಡಿ) ನೀಲಕಂಠ ಪಕ್ಷಿ</u>**
3. ನಮ್ಮ ನಾಡ ಹಬ್ಬ ಯಾವುದು ?
   ಎ) ದೀಪಾವಳಿ **<u>ಬಿ) ದಸರಾ</u>** ಸಿ) ರಂಜಾನ್ ಡಿ) ಗುಡ್ ಪ್ರೈಡೇ
4. ನಮ್ಮ ರಾಜ್ಯದ ರಾಜ್ಯ ಭಾಷೆ
   <u>ಎ) ಕನ್ನಡ</u> ಬಿ) ತೆಲುಗು ಸಿ) ತಮಿಳು ಡಿ) ಮರಾಠಿ
5. ನಮ್ಮ ರಾಷ್ಟ್ರೀಯ ಹೂ
   ಎ) ಗುಲಾಬಿ ಬಿ) ಸೇವಂತಿ ಸಿ) ದಾಸವಾಳ **<u>ಡಿ) ಕಮಲ</u>**

ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ (ಉತ್ತರಗಳು)

6 ಭಾರತವು ಸ್ವಾತಂತ್ರ್ಯವನ್ನು **೧೫ನೇ ಆಗಸ್ಟ್ ೧೯೪೭** ರಂದು ಪಡೆದಿತು.

7 ನಾವು ನಮ್ಮ ರಾಷ್ಟ್ರೀಯ ಹಬ್ಬವಾಗಿಸ್ ವಾತಂತ್ರ್ಯ ದಿನಾಚರಣೆಯನ್ನು **ಆಗಸ್ಟ್ ೧೫ ರಂದು** ಆಚರಿಸುತ್ತೇವೆ.

8 ಗಣರಾಜ್ಯೋತ್ಸವ **ಜನವರಿ ೨೬ರಂದು** ಆಚರಿಸಲಾಗುತ್ತದೆ.

9 ಗಾಂಧಿ ಜಯಂತಿ **ಅಕ್ಟೋಬರ್ ೨** ರಂದು ಆಚರಿಸಲಾಗುತ್ತದೆ.

10 ಕನ್ನಡ ರಾಜ್ಯೋತ್ಸವ **ನವೆಂಬರ್ ೧ರಂದು** ಕರ್ನಾಟಕದಲ್ಲಿ ಆಚರಿಸಲಾಗುತ್ತದೆ.

11 ನಮ್ಮ ರಾಷ್ಟ್ರೀಯ ಧ್ವಜದಲ್ಲಿ **ಮೂರು** ಬಣ್ಣಗಳಿವೆ.

12 ರಾಷ್ಟ್ರೀಯ ಚಿಹ್ನೆಯಲ್ಲಿ **ನಾಲ್ಕು** ಸಿಂಹಗಳು ಹಿಂಬದಿ ತಲೆಯೊಂದಿಗೆ ನಿಂತಿವೆ.

13 ಭಾರತದ ರಾಷ್ಟ್ರೀಯ ಗಾನ **ಜನ ಗಣ ಮನ.**

14 ಕರ್ನಾಟಕದ ರಾಜ್ಯ ಗಾನ **ಜಯ ಭಾರತ ಜನನಿಯ ತನುಜಾತೆ**

15 ಭಾರತದ ರಾಷ್ಟ್ರೀಯ **ಹಣ್ಣು ಮಾವು.**

ಸರಿ ಅಥವಾ ತಪ್ಪು ಉತ್ತರಗಳು

16 ಸ್ವಾತಂತ್ರ್ಯ ದಿನಾಚರಣೆ ಆಗಸ್ಟ್ ೧೫ರಂದು ಆಚರಣೆ ಮಾಡಲಾಗುತ್ತದೆ. **ಸರಿ**

17 ಮಕ್ಕಳ ಶಾಲೆಯಲ್ಲಿ ರಾಷ್ಟ್ರಗೀತೆ ಹಾಡುವುದಿಲ್ಲ. **ತಪ್ಪು**

18 ರಾಷ್ಟ್ರೀಯ ಚಿಹ್ನೆಯಲ್ಲಿ ನಾಲ್ಕು ಸಿಂಹಗಳಿವೆ ಆದರೆ ನಾವು ಮೂರು ಮಾತ್ರ ಕಾಣುತ್ತೇವೆ. **ಸರಿ**

19 ಮಯೂರವೇ ಭಾರತದ ರಾಷ್ಟ್ರೀಯ ಪಕ್ಷಿ. **ಸರಿ**

20ಕನ್ನಡ ರಾಜ್ಯೋತ್ಸವ ರಾಷ್ಟ್ರೀಯ ಹಬ್ಬವಾಗಿದೆ .**ತಪ್ಪು**

21ರಾಷ್ಟ್ರೀಯ ಧ್ವಜದಲ್ಲಿ ಐದು ಬಣ್ಣಗಳಿವೆ. **ತಪ್ಪು**

22ರಾಷ್ಟ್ರೀಯ ಸಂಕೇತಗಳು ದೇಶಪ್ರೇಮ ಮತ್ತು ಏಕತೆಯನ್ನು ಬೆಳೆಸುತ್ತವೆ. **ಸರಿ**

23ಮಕ್ಕಳ ದಿನವನ್ನು ನವೆಂಬರ್ ೧೪ರಂದು ಆಚರಿಸುತ್ತಾರೆ. **ಸರಿ**

24ಗಾಡಿ, ಚಕ್ರ ಮತ್ತು ಗೂಳಿಗಳು ರಾಷ್ಟ್ರೀಯ ಚಿಹ್ನೆಯ ಭಾಗ. **ತಪ್ಪು**

25ಆನೆ ಭಾರತದ ರಾಷ್ಟ್ರೀಯ ಪ್ರಾಣಿ. **ತಪ್ಪು**

26. ಹೊಂದಿಸಿ ಬರೆಯಿರಿ (ಉತ್ತರಗಳು)

ಅ) – ಆ

ಆ) – ಅ

ಇ) – ಈ

ಈ) – ಇ

ಉ) – ಊ

ಊ) – ಉ

ಋ) – ಎ

ಎ) – ಋ

ಏ) – ಐ

ಐ) -ಏ

ಒಂದು ಅಂಕದ ಉತ್ತರಗಳು (ಉತ್ತರಗಳು)

38. ಸ್ವಾತಂತ್ರ್ಯ ದಿನಾಚರಣೆ ಯಾವ ದಿನ?
    ೧೫ ಆಗಸ್ಟ್
39. ಗಣರಾಜ್ಯೋತ್ಸವ ಯಾವ ದಿನ?
    ೨೬ ಜನವರಿ
40. ರಾಷ್ಟ್ರೀಯ ಚಿಹ್ನೆಯ ಕೆಳಗೆ ಏನು ಬರೆಯಲಾಗಿದೆ?
    ಸತ್ಯಮೇವ ಜಯತೇ
41. ಕರ್ನಾಟಕ ಧ್ವಜದ ಬಣ್ಣಗಳು ಏನು?
    ಕೆಂಪು ಮತ್ತು ಹಳದಿ

42. ನಮ್ಮ ರಾಷ್ಟ್ರೀಯ ಹೂವು ಯಾವುದು?
ಕಮಲ

43. ಮಕ್ಕಳ 'ಚಾಚಾ' ಯಾರು?
ಜವಾಹರಲಾಲ್ ನೆಹರೂ

44. ನಮ್ಮ ರಾಷ್ಟ್ರೀಯ ಗೀತೆ ಯಾವುದು?
ಜನ ಗಣ ಮನ

45. ರಾಷ್ಟ್ರೀಯ ಚಿಹ್ನೆಯಲ್ಲಿ ಎಷ್ಟು ಸಿಂಹಗಳು ಇವೆ?
ನಾಲ್ಕು ಸಿಂಹಗಳು

46. ನಮ್ಮ ರಾಜ್ಯ ಮರ ಯಾವುದು?
ಗಂಧದ ಮರ

47. ನಮ್ಮ ರಾಷ್ಟ್ರೀಯ ಪಕ್ಷಿ ಯಾವುದು?
ನವಿಲು (ಮಯೂರ)

ಎರಡು ಅಂಕದ ಉತ್ತರಗಳು

48. ರಾಷ್ಟ್ರೀಯ ಹಬ್ಬಗಳಾವವು? ಎರಡು ಉದಾಹರಣೆ ನೀಡು.
ದೇಶದ ಸಾಧನೆಯನ್ನು ನೆನಯುವಂತಹ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು . ಉದಾ: ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ

49. ಎರಡು ರಾಷ್ಟ್ರೀಯ ಸಂಕೇತಗಳ ಹೆಸರು ಮತ್ತು ಅವುಗಳ ಮಹತ್ವ ಬರೆಯಿರಿ.
ರಾಷ್ಟ್ರ ಧ್ವಜ – ದೇಶದ ಹೆಮ್ಮೆ ತೋರಿಸುತ್ತದೆ.
ರಾಷ್ಟ್ರ ಗೀತೆ – ಗೌರವ ಸೂಚಿಸಲು ಹಾಡುತ್ತೇವೆ.

50. ರಾಷ್ಟ್ರಗೀತೆ ಹಾಡುವಾಗ ನಾವು ಏನು ಮಾಡಬೇಕು?
ನಿಂತು ಗೌರವದಿಂದ ಹಾಡಬೇಕು.

51. ನಮ್ಮ ರಾಜ್ಯ ಪ್ರಾಣಿ ಮತ್ತು ರಾಷ್ಟ್ರೀಯ ಪ್ರಾಣಿಯ ಹೆಸರು ಬರೆಯಿರಿ.
ರಾಜ್ಯದ ಪ್ರಾಣಿ – ಆನೆ, ರಾಷ್ಟ್ರೀಯ ಪ್ರಾಣಿ – ಹುಲಿ

52. ಮಕ್ಕಳ ದಿನಾಚರಣೆಯಲ್ಲಿ ಮಕ್ಕಳು ಏನು ಮಾಡುತ್ತಾರೆ?
ಹಾಡು ಹಾಡುವುದು, ಸ್ಪರ್ಧೆಗಳಲ್ಲಿ ಭಾಗವಹಿಸುವುದು.

ಮೂರು ಅಂಕದ ಉತ್ತರಗಳು (ಉತ್ತರಗಳು)

53. ಭಾರತದ ರಾಷ್ಟ್ರೀಯ ಚಿಹ್ನೆಯ ಬಗ್ಗೆ ಸಣ್ಣ ಟಿಪ್ಪಣಿ ಬರೆಯಿರಿ. ನಾಲ್ಕು ಸಿಂಹಗಳು ಹಿಂಬದಿ ತಲೆಯೊಂದಿಗೆ ನಿಂತಿವೆ. 'ಸತ್ಯಮೇವ ಜಯತೇ' ಅರ್ಥ 'ಸತ್ಯವೇ ಜಯಿಸುತ್ತದೆ'. ಇದು ಸರ್ಕಾರದ ಕಟ್ಟಡಗಳು, ನಾಣ್ಯಗಳಲ್ಲಿ ಕಾಣಿಸುತ್ತದೆ.

54. ನಾವು ಗಾಂಧಿ ಜಯಂತಿ ಮತ್ತು ಗಣರಾಜ್ಯೋತ್ಸವವನ್ನು ಏಕೆ ಆಚರಿಸುತ್ತೇವೆ? ಗಾಂಧಿ ಜಯಂತಿ ಮಹಾತ್ಮ ಗಾಂಧಿ ಹುಟ್ಟಿದ ದಿನ. ಅವರು ಶಾಂತಿಯ ಹಾದಿ

ತೋರಿದರು.
ಗಣರಾಜ್ಯೋತ್ಸವ ನಮ್ಮ ಸಂವಿಧಾನವನ್ನು ಅಂಗೀಕರಿಸಿದ ದಿನ.

55. ಮೂರು ರಾಷ್ಟ್ರೀಯ ಹಬ್ಬಗಳ ಹೆಸರು ಮತ್ತು ದಿನಾಂಕ ಹೇಳಿ.
ಸ್ವಾತಂತ್ರ್ಯ ದಿನ - ೧೫ ಆಗಸ್ಟ್, ಗಣರಾಜ್ಯೋತ್ಸವ - ೨೬ ಜನವರಿ, ಗಾಂಧಿ ಜಯಂತಿ - ೨ ಅಕ್ಟೋಬರ್

56. ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ನಾವು ಯಾವ ಮೌಲ್ಯಗಳನ್ನು ಕಲಿಯುತ್ತೇವೆ?
ದೇಶಭಕ್ತಿಯ ಮಹತ್ವ, ಏಕತೆ, ಗೌರವ.

57. ಶಾಲೆಯಲ್ಲಿ ಮಕ್ಕಳ ದಿನಾಚರಣೆಯಲ್ಲಿ ಮಕ್ಕಳು ಹೇಗೆ ಭಾಗವಹಿಸುತ್ತಾರೆ?
ಹಾಡುತ್ತಾರೆ, ನೃತ್ಯಮಾಡುತ್ತಾರೆ, ಭಾಷಣ ಮಾಡುತ್ತಾರೆ, ಆಟಗಳಲ್ಲಿ ಪಾಲ್ಗೊಳ್ಳುತ್ತಾರೆ.

ನಾಲ್ಕು ಅಂಕದ ಉತ್ತರಗಳು

58. ನಿಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಬಗ್ಗೆ ಒಂದು ಚಿಕ್ಕ ಟಿಪ್ಪಣಿ ಬರೆಯಿರಿ.

- ದಿನಾಂಕ : ೧೫ ಆಗಸ್ಟ್
- ಧ್ವಜಾರೋಹಣ : ಮುಖ್ಯ ಅತಿಥಿಗಳು ಧ್ವಜಾರೋಹಣ ಮಾಡುತ್ತಾರೆ
- ರಾಷ್ಟ್ರಗೀತೆ : ನಾವು ಎಲ್ಲರೂ ನಿಂತು ಹಾಡುತ್ತೇವೆ
- ಭಾಷಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು : ಮಕ್ಕಳು ಹಾಡು, ನೃತ್ಯ, ಭಾಷಣ ಮಾಡುತ್ತಾರೆ

59. ಭಾರತದ ರಾಷ್ಟ್ರೀಯ ಚಿಹ್ನೆಯನ್ನು ವರ್ಣಿಸಿ.

- ಸಿಂಹಗಳ ಸಂಖ್ಯೆ : ನಾಲ್ಕು ಸಿಂಹಗಳು
- ಕೆಳಗಿನ ಸಂಕೇತಗಳು : ಎಮ್ಮೆ, ಕುದುರೆ, ಚಕ್ರ
- ಕೆಳಗೆ ಬರೆಯಲಾಗಿದೆ : ಸತ್ಯಮೇವ ಜಯತೇ
- ನಾಣ್ಯಗಳಲ್ಲಿ ಕಾಣಿಸುತ್ತದೆ.

60. ನಾಲ್ಕು ರಾಷ್ಟ್ರೀಯ ಸಂಕೇತಗಳ ಹೆಸರು ಮತ್ತು ಅವುಗಳ ಮಹತ್ವ ಬರೆಯಿರಿ.

- ರಾಷ್ಟ್ರೀಯ ಧ್ವಜ : ದೇಶದ ಘನತೆ ಮತ್ತು ಏಕತೆ
- ರಾಷ್ಟ್ರಗೀತೆ : ದೇಶಕ್ಕೆ ಗೌರವ ಸೂಚಿಸುವ ಹಾಡು
- ರಾಷ್ಟ್ರೀಯ ಪ್ರಾಣಿ : ಹುಲಿ – ಶಕ್ತಿ ಮತ್ತು ಧೈರ್ಯ
- ರಾಷ್ಟ್ರೀಯ ಪಕ್ಷಿ: ಮಯೂರ – ಸೌಂದರ್ಯ ಮತ್ತು ಗೌರವ

61. ಶಾಲೆಯಲ್ಲಿ ಮಕ್ಕಳ ದಿನಾಚರಣೆ ಹೇಗೆ ಮಾಡಲಾಗುತ್ತದೆ ಚಿಕ್ಕ ಟಿಪ್ಪಣಿ ಬರೆಯಿರಿ.

- ದಿನಾಂಕ:ನವೆಂಬರ್ ೧೪
- ಚಟುವಟಿಕೆಗಳು : ಶಾಲೆ ಅಲಂಕರಣೆ, ಭಾಷಣ, ಸ್ಪರ್ಧೆಗಳು
- ವಿದ್ಯಾರ್ಥಿಗಳ ಪಾತ್ರ : ಸಕ್ರಿಯವಾಗಿ ಭಾಗವಹಿಸುವುದು
- ನೆಹರೂ ಜ್ಞಾಪನೆ ಮಹತ್ವ : ಮಕ್ಕಳನ್ನು ಪ್ರೀತಿಸಿದ ನಾಯಕರಿಗೆ ಸ್ಮರಣೆ

ಪಾಠ- 21 ಖೋ ....

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ಖೋ-ಖೋ ಆಟದ ಮೈದಾನ ಯಾವ ಆಕಾರದಲ್ಲಿ ಇದೆ
   ಎ) ಚೌಕ ಬಿ) ವೃತ್ತ ಸಿ) ತ್ರಿಭುಜ **ಡಿ) ಆಯತ**
2. ಹುಣಸೆ ಬೀಜವನ್ನು ಬಳಸಿ ಆಡುವ ಆಟ
   ಎ) ಕುಂಟೆಬಿಲ್ಲೆ **ಬಿ) ಅಳಿಗುಳಿ ಮನೆ** ಸಿ) ಹಾವು-ಏಣಿ ಡಿ) ಕ್ರಿಕೆಟ್
3. ದಾಳಗಳನ್ನು ಬಳಸಿ ಆಡುವ ಆಟ
   ಎ) ಚೌಕಬಾರ ಬಿ) ಕುಂಟೆಬಿಲ್ಲೆ **ಸಿ) ಪಗಡೆ ಆಟ** ಡಿ) ಚದುರಂಗ
4. ನಮ್ಮ ದೇಶದ ರಾಷ್ಟ್ರೀಯ ಆಟ
   ಎ) ವಾಲಿಬಾಲ್ ಬಿ) ಥ್ರೋ ಬಾಲ್ ಸಿ) ಕ್ರಿಕೆಟ್ **ಡಿ) ಹಾಕಿ**
5. ವಿಶ್ವನಾಥ ಆನಂದ ಯಾವ ಆಟಕ್ಕೆ ಪ್ರಸಿದ್ಧರಾಗಿದ್ದಾರೆ.
   ಎ) ಚೆಸ್ ಬಿ) ಕೇರಂ ಸಿ) ಶೂಟಿಂಗ್ ಡಿ) ರನ್ನಿಂಗ್

ಖಾಲಿ ಸ್ಥಳಗಳನ್ನು ತುಂಬಿರಿ

6 ಹುಣಸೆಕಾಯಿ ಬೀಜಗಳನ್ನು ಬಳಸಿ ಆಡುವ ಆಟ **ಅಳಿಗುಳಿ** ಮಣೆ ಆಗಿದೆ.

7 ಒಂದು ಕಾಲು ಮಡಚಿ ಆಡುವ ಆಟ **ಖೋ-ಖೋ** ಆಗಿದೆ.

8 ಬಾಲ್ ಮತ್ತು ಬ್ಯಾಟ್ ಬಳಸಿ ಆಡುವ ಆಟ **ಕ್ರಿಕೆಟ್** ಆಗಿದೆ.

9. ನೀರಿನಲ್ಲಿ ಆಡುವ ಆಟ **ಈಜು (ಸ್ವಿಮ್ಮಿಂಗ್)** ಆಗಿದೆ.

10 ಗುಂಪುಗಳಲ್ಲಿ ಆಡುವ ಆಟ **ಕಬಡ್ಡಿ** ಆಗಿದೆ.

11. ಚೆಂಡನ್ನು ಕೈಯಿಂದ ಬಳಸುವ ಆಟ **ಕ್ರಿಕೆಟ್** ಆಗಿದೆ.

12. ನಿಮ್ಮ ಜಿಲ್ಲೆಯ ವಿಶೇಷ ಆಟ **ಖೋ-ಖೋ** (ಅಥವಾ ಸ್ಥಳೀಯ ಪ್ರಸಿದ್ಧ ಆಟ).

13. ಜಾತ್ರೆಯಲ್ಲಿ ನೀವು ನೋಡಿದ ಆಟ **ರಿಂಗ್ ಟಾಸ್** (ಅಥವಾ ಸ್ಥಳೀಯ ಜಾತ್ರೆಯ ಆಟ).

14. ಖೋ-ಖೋ ಮೈದಾನದ ಆಕಾರ **ಆಯತಾಕಾರ** ದಾಗಿರುತ್ತದೆ.

15. ಖೋ-ಖೋ ಮೈದಾನದಲ್ಲಿ ಇರುವ ಕಂಬಗಳ ಸಂಖ್ಯೆ **2**.
16. ಖೋ-ಖೋ ತಂಡದಲ್ಲಿ ಆಟಗಾರರ ಸಂಖ್ಯೆ **11**
17. ಪ್ರತಿಯೊಂದು ಖೋ-ಖೋ ಇನ್ನಿಂಗ್‌ನ ಅವಧಿ **9 ನಿಮಿಷಗಳು**.
18. ಕಂಬಗಳ ಬಳಿಯಲ್ಲಿ ನಿಂತಿರುವ ಆಟಗಾರರು **ರಕ್ಷಕರು (ಡಿಫೆಂಡರ್).**
19. ರಾಷ್ಟ್ರೀಯ ಆಟಗಾರ ಪ್ರಕಾಶ್ ಪಡುಕೋಣೆ **ಬ್ಯಾಡ್ಮಿಂಟನ್** ಆಡುತ್ತಾರೆ.
20. ಪ್ರಸಿದ್ಧ ಖೋ-ಖೋ ಆಟಗಾರ್ತಿ ಉಷಾ ಅನಂತರಾಮನ್ **ಕರ್ನಾಟಕದ** ವರಾಗಿದ್ದಾರೆ.

ಸರಿ ಅಥವಾ ತಪ್ಪು ಉತ್ತರಗಳು

21. ಖೋ-ಖೋ ಎರಡು ತಂಡಗಳು 11 ಆಟಗಾರರೊಂದಿಗೆ ಆಡಲಾಗುತ್ತದೆ. (ಸರಿ)
22. ಖೋ-ಖೋ ಒಂದು ಇನಿಂಗ್ಸ್ 15 ನಿಮಿಷಗಳ ಕಾಲ ನಡೆಯುತ್ತದೆ. (ತಪ್ಪು)
23. ಖೋ-ಖೋ ಮೈದಾನದ ಆಕಾರ ಆಯತಾಕಾರ. (ಸರಿ)
24. ಖೋ-ಖೋ ತಂಡದಲ್ಲಿ 9 ಆಟಗಾರರು ಮತ್ತು 3 ಹೆಚ್ಚಿನ ಆಟಗಾರರು ಇರುತ್ತಾರೆ. (ಸರಿ)
25. ಮೈದಾನದೊಳಗಿನ ಆಟಗಾರರು ಸರಳ ರೇಖೆಯಲ್ಲಿ ಕುಳಿತುಕೊಳ್ಳುತ್ತಾರೆ. (ಸರಿ)
26. ಓಡುತ್ತಿರುವಾಗ ಮಧ್ಯರೇಖೆಯ ಮೇಲೆ ಹೆಜ್ಜೆ ಇಡಬಹುದು. (ತಪ್ಪು)
27. ಖೋ-ಖೋ ತಂಡ ಪರಸ್ಪರ ಸಹಕಾರ ಮತ್ತು ಸಾಮಾಜಿಕ ಸೌಹಾರ್ದತೆಯನ್ನು ಉತ್ತೇಜಿಸುತ್ತದೆ. (ಸರಿ)
28. ಸರ್ಕಸ್ ಮತ್ತು ಮೇಳಗಳು ಮನರಂಜನೆಯ ಮೂಲವಲ್ಲ. (ತಪ್ಪು)
29. ಪ್ರಾಣಿಗಳ ಕಲ್ಯಾಣ ಸಂಸ್ಥೆಗಳು ಸರ್ಕಸ್‌ಗಳಲ್ಲಿ ಪ್ರಾಣಿಗಳ ಬಳಕೆಯನ್ನು ಬೆಂಬಲಿಸುತ್ತವೆ. (ತಪ್ಪು)
30. ಸರ್ಕಸ್ ಕಂಪನಿಗಳ ಸಂಖ್ಯೆ ಪ್ರತಿ ವರ್ಷ ಹೆಚ್ಚುತ್ತಿದೆಯೇ? (ತಪ್ಪು)

31.ಹೊಂದಿಸಿ ಬರೆಯಿರಿ

A (ಆಟಗಾರ / ಆಟ)	**B (ಕ್ರೀಡೆ / ವಿವರಣೆ)**
ಅ. ರಾಹುಲ್ ದ್ರಾವಿಡ್	a. ಕ್ರಿಕೆಟ್
ಅ ಸಚಿನ್ ತೆಂಡೂಲ್ಕರ್	b. ಕ್ರಿಕೆಟ್
ಇ. ಪ್ರಕಾಶ್ ಪಡುಕೋಣೆ	c. ಬ್ಯಾಡ್ಮಿಂಟನ್

A (ಆಟಗಾರ / ಆಟ)	**B (ಕ್ರೀಡೆ / ವಿವರಣೆ)**
ಈ. ಪಿ.ಟಿ. ಉಷಾ	d. ಅಥ್ಲೆಟಿಕ್ಸ್
ಉ ಮಾಲತಿ ಹೊಳ್ಳ	e. ಅಥ್ಲೆಟಿಕ್ಸ್
ಊ. ಅಭಿನವ್ ಬಿಂದ್ರ	f. ಶೂಟಿಂಗ್
ಋ. ಧನರಾಜ್ ಪಿಳ್ಳೈ	g. ಹಾಕಿ
ಎ. ವಿಶ್ವನಾಥಾನ್ ಆನಂದ್	h. ಚೆಸ್
ಏ. ಸಾನಿಯಾ ಮಿರ್ಜಾ	i. ಟೆನಿಸ್
ಐ. ಮಮತಾ ಪೂಜಾರಿ	ಜಿ. ಕಬ್ಬಡಿ

32. A (ಆಟ)	**B (ಉಪಕರಣ / ವಿವರಣೆ)**
ಅ. ಹಾಕಿ	a. ಸ್ಟಿಕ್ ಮತ್ತು ಚೆಂಡು
ಆ. ಕ್ರಿಕೆಟ್	b. ಬ್ಯಾಟ್ ಮತ್ತು ಚೆಂಡು
ಇ. ಬ್ಯಾಡ್ಮಿಂಟನ್	c. ರಾಕೆಟ್ ಮತ್ತು ಶಟಲ್‌ಕಾಕ್
ಈ. ಧನುರ್ವಿದ್ಯೆ	d. ಬಿಲ್ಲು ಮತ್ತು ಬಾಣ
ಉ. ಕೇರಂ	e. ಸ್ಟ್ರೈಕರ್ ಮತ್ತು ಕಾಯ್ನಿನ್
ಊ. ಚೆಸ್	f. ಚೆಸ್‌ಬೋರ್ಡ್ ಮತ್ತು ಪಾನ್ ಗಳು

ಒಂದು ಅಂಕದ ಉತ್ತರಗಳು

33. ಹುಣಸೆ ಬೀಜಗಳ ಬಳಕೆಯ ಆಟ ಯಾವುದು?
ಉತ್ತರ: ಅಳಿಗುಳಿ ಮಣೆ

34. ಒಂದು ಕಾಲು ಮಡಿಚಿ ಆಡುವ ಆಟ ಯಾವುದು?
ಉತ್ತರ: ಕುಂಟುಬಿಲ್ಲೆ

35. ಬ್ಯಾಟ್ ಮತ್ತು ಚೆಂಡಿನ ಆಟ ಯಾವುದು?
ಉತ್ತರ: ಕ್ರಿಕೆಟ್

36. ದಾಳಗಳನ್ನು ಬಳಸಿ ಆಡುವ ಆಟ ಯಾವುದು?
ಉತ್ತರ: ಪಗಡೆ

37. ನೀರಿನಲ್ಲಿ ಆಡುವ ಆಟ ಯಾವುದು?
ಉತ್ತರ: ಈಜು

38. ಖೋ-ಖೋ ತಂಡದಲ್ಲಿ ಎಷ್ಟು ಆಟಗಾರರು ಇದ್ದಾರೆ?
ಉತ್ತರ: 11

39. ಕರ್ನಾಟಕದ ಪ್ರಸಿದ್ಧ ಖೋ-ಖೋ ಆಟಗಾರ ಯಾರು?
ಉತ್ತರ: ಉಷಾ ಅನಂತರಾಮನ್

40. ಖೋ-ಖೋ ಮೈದಾನದ ಆಕಾರ ಯಾವುದು?
ಉತ್ತರ: ಆಯತಾಕಾರ

41. ಖೋ-ಖೋ ಒಂದು ಸುತ್ತಿನ ಎಷ್ಟು ನಿಮಿಷಗಳ ಕಾಲ ಇರುತ್ತದೆ?
ಉತ್ತರ: 9 ನಿಮಿಷ

42. ಖೋ-ಖೋನಲ್ಲಿ ಸ್ಪರ್ಧಿ ತನ್ನ ಗೆಳೆಯನನ್ನು ಸ್ಪರ್ಶಿಸುವಾಗ ಏನು ಹೇಳಬೇಕು?
ಉತ್ತರ: "ಖೋ"

ಎರಡು ಅಂಕದ ಉತ್ತರಗಳು

43. ಖೋ-ಖೋ ಆಟದ ಎರಡು ನಿಯಮಗಳು ಏನು?
ಉತ್ತರ:

- "ಖೋ" ಎಂದು ಹೇಳಿ ಗೆಳೆಯನ ಬೆನ್ನನ್ನು ತಟ್ಟಬೇಕು.
- ಓಡುವಾಗ ಮಧ್ಯರೇಖೆಯ ಮೇಲೆ ಹೆಜ್ಜೆ ಇಡಬಾರದು.

44. ಎರಡು ಒಳಾಂಗಣ ಆಟಗಳು ಮತ್ತು ಎರಡು ಹೊರಾಂಗಣ ಆಟಗಳನ್ನು ಹೆಸರಿಸಿ.
ಉತ್ತರ:
ಒಳಾಂಗಣ ಆಟಗಳು : ಚೆಸ್, ಕ್ಯಾರಂ
ಹೊರಾಂಗಣ ಆಟಗಳು : ಕ್ರಿಕೆಟ್, ಕಬಡ್ಡಿ

45. ಗುಂಪು ಆಟಗಳ ಎರಡು ಪ್ರಯೋಜನಗಳು ಯಾವುವು?
ಉತ್ತರ: ತಂಡದ ಮನೋಭಾವವನ್ನು ಹೆಚ್ಚಿಸುತ್ತದೆ.

ಸಾಮಾಜಿಕ ಸೌಹಾರ್ದತೆಯನ್ನು ಉತ್ತೇಜಿಸುತ್ತದೆ.

46. ಎರಡು ಪ್ರಸಿದ್ಧ ಭಾರತೀಯ ಕ್ರೀಡಾಪಟು ಮತ್ತು ಅವರ ಕ್ರೀಡೆಗಳನ್ನು ಹೆಸರಿಸಿ.
ಉತ್ತರ:

- ರಾಹುಲ್ ದ್ರಾವಿಡ್ - ಕ್ರಿಕೆಟ್
- ಪಿ.ಟಿ. ಉಷಾ - ಅಥ್ಲೆಟಿಕ್ಸ್

47. ಖೋ-ಖೋನಲ್ಲಿ ಫೌಲ್ ಎಂದರೇನು? ಒಂದು ಉದಾಹರಣೆ ನೀಡಿ.
ಉತ್ತರ:
ಫೌಲ್ ಎಂದರೆ ನಿಯಮ ಉಲ್ಲಂಘನೆ.
ಉದಾಹರಣೆ: ಓಡುತ್ತಿರುವಾಗ ಮಧ್ಯರೇಖೆಯ ಮೇಲೆ ಹೆಜ್ಜೆ ಇಡುವುದು.

ಮೂರು ಅಂಕಗಳ ಉತ್ತರಗಳು

48. ಸರ್ಕಸ್ ಕಾರ್ಯಕ್ರಮಗಳ ಕುಸಿತದ ಮೂರು ಕಾರಣಗಳನ್ನು ಬರೆದು ಹೇಳಿ.
ಉತ್ತರ:

- ಪ್ರಾಣಿಗಳ ಬಳಕೆಗೆ ವಿರೋಧ.
- ಹೊಸ ಮನರಂಜನೆಯ ಆಯ್ಕೆಗಳು (ಟೆಲಿವಿಷನ್, ಇಂಟರ್ನೆಟ್).
- ಸುರಕ್ಷತಾ ಸಮಸ್ಯೆಗಳು.

49. ಗುಂಪು ಆಟಗಳು ಸಾಮಾಜಿಕ ಸೌಹಾರ್ದತೆಯನ್ನು ಹೇಗೆ ಉತ್ತೇಜಿಸುತ್ತವೆ?
ಉತ್ತರ: ಗುಂಪು ಆಟಗಳಲ್ಲಿ ಒಟ್ಟಾಗಿ ಆಡಬೇಕಾಗಿರುವುದರಿಂದ, ಎಲ್ಲರಿಗೂ ಸೌಹಾರ್ದತೆ, ಸಹಕಾರ, ಮತ್ತು ಸ್ನೇಹ ಬೆಳೆಸುತ್ತವೆ.

50. ಖೋ-ಖೋ ಆಡಲು ಕೆಲವು ಸುರಕ್ಷತಾ ನಿಯಮಗಳನ್ನು ತಿಳಿಸಿ.
ಉತ್ತರ:

- ಮಧ್ಯರೇಖೆಯ ಮೇಲೆ ಹೆಜ್ಜೆ ಇಡುವುದಿಲ್ಲ.
- ವೇಗವಾಗಿ ಓಡಬೇಕಾದಾಗ ಕುತ್ತಿಗೆ ಹಚ್ಚಿ ಒಬ್ಬರಿಗೆ ಸ್ಪರ್ಶಿಸಬೇಕು.
- ಆಟಗಾರರು ಪರಸ್ಪರ ಜಾಗರೂಕರಾಗಿರಬೇಕು.

ನಾಲ್ಕು ಅಂಕದ ಉತ್ತರಗಳು

51. ಖೋ-ಖೋ ಮೈದಾನದ ವಿನ್ಯಾಸವನ್ನು ವಿವರಿಸಿ:

- ಆಕಾರ, ಆಯತಾಕಾರ
- ಕಂಬಗಳ ಸಂಖ್ಯೆ 2
- ಎರಡು ಕಂಬಗಳ ನಡುವಿನ ಚೌಕಗಳ ಸಂಖ್ಯೆ9
- ಕಂಬಗಳ ನಡುವೆ ರೇಖೆಗಳ ಸಂಖ್ಯೆ 8

52. ಖೋ-ಖೋ ನಿಯಮ ನಾಲ್ಕು ಬರೆದು ಹೇಳಿ:

- "ಖೋ" ಎಂದು ಬೆನ್ನು ತಟ್ಟಬೇಕು.
- ಮಧ್ಯರೇಖೆಯ ಮೇಲೆ ಹೆಜ್ಜೆ ಇಡಬಾರದು.
- ದಿಕ್ಕು ಬದಲಿಸಬಾರದು.
- ಮಧ್ಯರೇಖೆಯಿಂದ "ಖೋ" ಎಂದು ಹುರಿದುಂಬಿಸಬಾರದು.

53. ನೀವು ನೋಡಿದ ಸರ್ಕಸ್ ಕಾರ್ಯಕ್ರಮವನ್ನು ವಿವರಿಸಿ:

- ವಿವಿಧ ಕಲಾಕೃತಿ ಮತ್ತು ಪ್ರದರ್ಶನಗಳು.
- ಪ್ರಾಣಿಗಳ ಪ್ರದರ್ಶನಗಳು.
- ನಾನು ಎಷ್ಟೊಂದು ಆಕರ್ಷಿತನಾಗಿದ್ದೆ ಮತ್ತು ಮತ್ತೆ ನೋಡಲು ಇಚ್ಛಿಸುತ್ತೇನೆ.

54. ನಾಲ್ಕು ಪ್ರಸಿದ್ಧ ಭಾರತೀಯ ಕ್ರೀಡಾಪಟುಗಳು ಮತ್ತು ಅವರ ಆಟಗಳನ್ನು ವಿವರಿಸಿ:

- ರಾಹುಲ್ ದ್ರಾವಿಡ್ - ಕ್ರಿಕೆಟ್
- ಪಿ.ಟಿ. ಉಷಾ - ಅಥ್ಲೆಟಿಕ್ಸ್
- ವಿಶ್ವನಾಥನ್ ಆನಂದ್ - ಚೆಸ್
- ಸಾನಿಯಾ ಮಿರ್ಜಾ - ಟೆನಿಸ್

ಪಾಠ-22 ಸೌಲಭ್ಯಗಳು-ಸುಧಾರಣೆ

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ಮನುಷ್ಯ ಬದುಕಲು ಮೂಲಭೂತ ಸೌಲಭ್ಯಗಳಲ್ಲಿ ಇದು ಒಂದಾಗಿದೆ.
    ಎ) ನೀರು ಬಿ) ಇಟ್ಟಿಗೆ ಸಿ) ಕಲ್ಲು ಡಿ) ಮರ
2. ಆರೋಗ್ಯ ಸೌಲಭ್ಯ ಯಾವುದರಿಂದ ದೊರೆಯುತ್ತದೆ.
    ಎ) ಮಾರುಕಟ್ಟೆ ಬಿ) ಹೋಟೆಲ್ **ಸಿ) ಆಸ್ಪತ್ರೆ** ಡಿ) ಉದ್ಯಾನವನ
3. ಶುದ್ಧ ಕುಡಿಯುವ ನೀರಿನಿಂದ ಸಿಗುವ ಲಾಭವೇನು?
    ಎ) ಕೃಷಿ ಬಿ) ಕೈಗಾರಿಕೆ ಸಿ) ಮನರಂಜನೆ **ಡಿ) ರೋಗ ನಿವಾರಣೆ**
4. ಮಕ್ಕಳಿಗೆ ಶಿಕ್ಷಣ ನೀಡಲು ಯಾವ ಸೌಲಭ್ಯದ ಅಗತ್ಯವಿದೆ ?
    ಎ) ಮಾರುಕಟ್ಟೆ **ಬಿ) ಶಾಲೆ** ಸಿ) ಆಸ್ಪತ್ರೆ ಡಿ) ಅಂಗಡಿ
5. ಹಳ್ಳಿಗಳಲ್ಲಿ ರಸ್ತೆ ಕೊರತೆಯಿದ್ದಲ್ಲಿ ಏನು ತೋರಿಸುತ್ತದೆ.?
    ಎ) ಸ್ವಚ್ಛತೆ ಬಿ) ಸಮೃದ್ಧಿ ಸಿ) ಅಭಿವೃದ್ಧಿ **ಡಿ) ಹಿಂದುಳಿದ ಸ್ಥಿತಿ**

ಖಾಲಿ ಬಿಟ್ಟ ಸ್ಥಳ ತುಂಬಿರಿ (ಉತ್ತರಗಳು)

6. ಪ್ರಕೃತಿ
7 ಮನೆ
8 ಕಾರುಗಳಿಗೆ
9 ಚಾರ್ಲ್ಸ್ ಬ್ಯಾಬೇಜ್
10 ಮಡಕೆಗಳು
11 80,000
12 ಕೈಗಳು
13 ಬದಲಾವಣೆ
14 ಮರ
15 ಬಲವಾಗಿ

ಸರಿ ಅಥವಾ ತಪ್ಪು (ಉತ್ತರಗಳು)

16 ಸರಿ
17 ತಪ್ಪು
18 ತಪ್ಪು
19 ತಪ್ಪು
20 ಸರಿ
21 ತಪ್ಪು
22 ಸರಿ
23 ಸರಿ
24 ತಪ್ಪು
25 ಸರಿ

26 ಹೊಂದಿಸಿ ಬರೆಯಿರಿ (ಉತ್ತರಗಳು)

ಎ	ಬ
ಅ. ಪ್ರಥಮ ಕಂಪ್ಯೂಟರ್	ಚಾರ್ಲ್ಸ್ ಬಾಬೇಜ್
ಅ. ಕಾಗದ ತಯಾರಿಸಲು ಬಳಕೆಯಾಗುವುದು	ಮಣ್ಣಿನ ಪಾತ್ರೆಗಳು
ಇ. ಟ್ರ್ಯಾಕ್ಟರ್ ಮತ್ತು ಬಸ್ಸುಗಳಲ್ಲಿ ಬಳಕೆ	ಪೆಟ್ರೋಲ್ ಮತ್ತು ಡೀಸೆಲ್
ಈ. ತಾಮ್ರದಿಂದ ತಯಾರಾಗಿದೆ	ಲಿಬರ್ಟಿ ಮೂರ್ತಿ /ಸ್ವಾತಂತ್ರ್ಯ ದೇವತೆ ಪ್ರತಿಮೆ
ಉ. ಸೃಜನಶೀಲತೆಯಿಂದ ತಯಾರಿಸಲಾಗುವುದು	ವಿಭಿನ್ನ ಉತ್ಪನ್ನಗಳು
ಊ. ಹಳೆಯ ಕಾಲದಲ್ಲಿ ಅಡುಗೆಗೆ ಬಳಕೆ	ಮರದ ಪುಲ್ಪ

ಒಂದು ಅಂಕದ ಉತ್ತರಗಳು

27. ಮರ

28. ಚಾರ್ಲ್ಸ್ ಬ್ಯಾಬೇಜ್

29. ತಾಮ್ರ

30. ಯಂತ್ರಗಳನ್ನು ಮಾಡಲು ಬಳಸುತ್ತಾರೆ.

31 ಮಡಕೆ ಮಾಡುವುದರಲ್ಲಿ ಯಂತ್ರಗಳ ಬಳಕೆ

ಎರಡು ಅಂಕದ ಉತ್ತರಗಳು

32 ಹಳೆ ಕಾಲದಲ್ಲಿ: ಮಡಕೆ, ಎತ್ತುಗಳ ಬಂಡಿ ಇಂದಿನ ಕಾಲದಲ್ಲಿ: ಪ್ರೆಶರ್ ಕುಕ್ಕರ್, ಬಸ್ ಗಳು

33 ಪ್ರಕೃತಿ ಸಂಪನ್ಮೂಲಗಳು ನಮಗೆ ನೀರು, ಮರ ಇತ್ಯಾದಿ ಬೇಕಾಗುವ ವಸ್ತುಗಳನ್ನು ಒದಗಿಸುತ್ತವೆ.

34 ಮಾನವರು ತಮ್ಮ ಸೃಜನಶೀಲತೆಯಿಂದ ಆಟಿಕೆಗಳು ಮತ್ತು ಕಲೆಯ ವಸ್ತುಗಳನ್ನು ಮಾಡುತ್ತಾರೆ.

35 ಮಣ್ಣು ಮತ್ತು ಕಾಗದವನ್ನು ಮನೆಯಲ್ಲಿ ಕಲಾ ಮಾದರಿಗಳನ್ನು ಮಾಡಲು ಬಳಸಬಹುದು.

36 ಲೋಹಗಳು ಬಲವಾಗಿದ್ದು ಸುಲಭವಾಗಿ ಆಕಾರ ನೀಡಬಹುದು.

ಮೂರು ಅಂಕದ ಉತ್ತರಗಳು

37 ಹಳೆಯ ಕಾಲ	**ಇಂದಿನ ಕಾಲ**
ಮಡಕೆ	ಪ್ರೆಶರ್ ಕುಕ್ಕರ್
ಎತ್ತಿನ ಗಾಡಿ	ಲಾರಿ/ಟ್ರಾಕ್ಟರ್
ಎಲೆಗಳ ಮೇಲೆ ಬರಹ	ಕಾಗದ ಮತ್ತು ಕಂಪ್ಯೂಟರ್

38 ಪ್ರಕೃತಿ ಸಂಪನ್ಮೂಲಗಳಿಂದ ಮನೆ ಕಟ್ಟುವುದು, ಬಟ್ಟೆ ತಯಾರಿಸುವುದು, ಪ್ರಯಾಣ ಸುಲಭವಾಗುವುದು ಸಾಧ್ಯವಾಗಿದೆ.

39 ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಯಂತ್ರಗಳು, ಔಷಧಿಗಳು, ಉತ್ತಮ ಸಾರಿಗೆ ದೊರೆಯುತ್ತವೆ.

40 ಹೂವುಗಳನ್ನು ಮಾಡುವುದು, ಕಣಿಕೆಗಳಿಂದ ಕಲಾಕೃತಿ, ಮಡಕೆಗಳನ್ನು ಮಾಡಲು ಸೃಜನ ಶೀಲತೆಯನ್ನು ಬಳಸಬಹುದು.

ನಾಲ್ಕು ಅಂಕದ ಉತ್ತರಗಳು

41

- ಯಂತ್ರಗಳು ಪೆಟ್ರೋಲ್ ಬಳಸಿ ಕೆಲಸ ಮಾಡುತ್ತವೆ.
- ಕಾಗದ ಮರದ ತೊಗಟೆಯಿಂದ/ ಕಟ್ಟಿಗೆ ಇಂದ ಮಾಡುತ್ತಾರೆ.
- ಲೋಹಗಳನ್ನು ಮನೆ ಕಟ್ಟಲು, ಅಡುಗೆ ಮಾಡಲು ಬಳಸುತ್ತಾರೆ.
- ಮಣ್ಣು, ಬಟ್ಟೆ, ಕಣಿಕೆಗಳಿಂದ ಸೃಜನಶೀಲವಾಗಿ ಕಲಾಕೃತಿಗಳನ್ನು ಮಾಡುತ್ತಾರೆ.

42	**ಹಳೆಯ ಕಾಲ**	**ಇಂದಿನ ಕಾಲ**
ಬಟ್ಟೆಗಳು	ಕೈಯಿಂದ ನೆಯುವದು	ಯಂತ್ರದಿಂದ ಮಾಡಿದವು
ಸಾರಿಗೆ	ಎತ್ತುಗಾಡಿ	ಬಸ್ ಮತ್ತು ಲಾರಿ
ಅಡುಗೆ	ಮಡಕೆ ಸ್ಟೋವ್	ಗ್ಯಾಸ್ ಸ್ಟೋವ್, ಇಂಡಕ್ಷನ್
ಬರವಣಿಗೆ	ತಾಳೆ ಎಲೆಗಳು	ಕಾಗದ ಮತ್ತು ಕಂಪ್ಯೂಟರ್

43 ಲೋಹಗಳು ಬಲವಾದವು ಮತ್ತು ಮೆರಗನ್ನು ಹೊಂದಿವೆ. ಅವುಗಳಿಗೆ ಆಕಾರ ಕೊಡಬಹುದು. ಉಪಕರಣಗಳು, ಯಂತ್ರಗಳು, ಕಟ್ಟಡಗಳಿಗೆ ಬಳಸುತ್ತಾರೆ. ಇವುಗಳನ್ನು ತೊಳೆಯಲು ಸುಲಭ.

44. ವಿವಿಧ ಮಡಕೆಗಳು :

- ನೀರಿನ ಮಡಕೆ : ನೀರನ್ನು ಇಡಲು
- ಹೂವುಗಳ ಮಡಕೆ : ಹೂವನ್ನು ಇಡಲು
- ಅಡುಗೆ ಮಡಕೆ : ಅಡುಗೆ ಮಾಡಲು
- ಅಲಂಕಾರಿಕ ಮಡಕೆ : ಸಿಂಗಾರಿಗಾಗಿ

ಪಾಠ-23 ಉಡುಪು-ವಿನ್ಯಾಸ

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ಉಡುಪು ವಿನ್ಯಾಸವು ಯಾವುದನ್ನು ಸೂಚಿಸುತ್ತದೆ?
A) ಆಹಾರ ಪ್ರಕಾರ B) ನಿವಾಸದ ಸ್ಥಳ **C) ಉಡುಪಿನ ಆಕಾರ ಮತ್ತು ಶೈಲಿ** D) ಆಟಗಳ ವಿವರ

2. ಹವಮಾನವು ಉಡುಪು ವಿನ್ಯಾಸದ ಮೇಲೆ ಹೇಗೆ ಪರಿಣಾಮ ಬೀರುತ್ತದೆ?
A) ಪರಿಣಾಮ ಬೀರುವುದಿಲ್ಲ **B) ಹವಾಮಾನಕ್ಕನುಗುಣವಾಗಿ ಉಡುಪು ಬದಲಾಗುತ್ತದೆ**

C) ಆಹಾರ ಬದಲಾಗುತ್ತದೆ D) ಆಟಗಳು ಬದಲಾಗುತ್ತವೆ

3. ಮಳೆಗಾಲದಲ್ಲಿ ಸಾಮಾನ್ಯವಾಗಿ ಯಾವ ರೀತಿಯ ಉಡುಪು ಧರಿಸಲಾಗುತ್ತದೆ?
A) ಹಗುರವಾದ ಬಟ್ಟೆ B) ಬಟ್ಟೆ ಇಲ್ಲದೆ **C) ರೈನ್ ಕೋಟ್** D) ಕಂಬಳಿ

4. ಹಿಮ ಪ್ರದೇಶದ ಜನರು ಯಾವ ರೀತಿಯ ಉಡುಪು ಧರಿಸುತ್ತಾರೆ?
A) ಹಗುರವಾದ ಉಡುಪು B) ತೆಳುವಾದ ಬಟ್ಟೆ **C) ಬೆಚ್ಚನೆಯ ಉಡುಪು** D) ನೀರಿನಲ್ಲಿ ತೇವವಾಗುವ ಬಟ್ಟೆ

5. ಶಿಕ್ಷಕರ ಉಡುಪು ಯಾವ ರೀತಿಯದು?
A) ಉಡುಪು ಧರಿಸುವುದಿಲ್ಲ B) ಆರಾಮದಾಯಕ ಹಾಗೂ ಕೆಲಸಕ್ಕೆ ಅನುಕೂಲವಾಗುವ

C) ಪಾರ್ಟಿ ಉಡುಪು **D) ಶೈಕ್ಷಣಿಕ ಉಡುಪು**

ಖಾಲಿ ಜಾಗಗಳನ್ನು ಭರ್ತಿ ಮಾಡಿ (ಉತ್ತರಗಳು)

6 ಬಿಳಿಯ

7 ರೈನ್ ಕೋಟ್

8 ಉಣ್ಣೆ ಬಟ್ಟೆಗಳು

9 ಬಾಗಲಕೋಟೆ

10 ರೇಷ್ಮೆ ಹುಳು

11 ಬಟ್ಟೆ

12 ಬಣ್ಣ

13 ಧೋತಿ

14 ಸೀರೆ

15 ಜಾನಪದ

ಸರಿ ಅಥವಾ ತಪ್ಪು ಉತ್ತರಗಳು

16 ಬಿಳಿಯ ಬಟ್ಟೆಗಳು ಬೇಸಿಗೆಗೆ ಉಪಯುಕ್ತವಾಗಿವೆ. —**ಸರಿ**

17. ರೇಷ್ಮೆ ಬಟ್ಟೆಗಳನ್ನು ಚಳಿಗಾಲದಲ್ಲಿ ಧರಿಸಲಾಗುವುದಿಲ್ಲ. —**ತಪ್ಪು**

18 ಕರ್ನಾಟಕವು ಭಾರತದಲ್ಲಿಯೇ ಹೆಚ್ಚು ರೇಷ್ಮೆ ಉತ್ಪಾದಿಸುತ್ತದೆ. —**ಸರಿ**

19 ರೇಷ್ಮೆ ಕೇವಲ ರಾಸಾಯನಿಕ ಬಣ್ಣಗಳಿಂದ ಮಾತ್ರ ಬಣ್ಣಿಸಲಾಗುತ್ತದೆ. —**ತಪ್ಪು**

20 ರೆನ್ ಕೋಟ್‌ಗಳು ನೀರನ್ನು ಒಳಗೆ ಹೋಗದಂತೆ ತಡೆಯುತ್ತವೆ. —**ಸರಿ**

21 ಇಲಕಲ್ ಸೀರೆಗಳು ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಸಿದ್ಧವಾಗಿವೆ. —**ಸರಿ**

22 ಪ್ರಾರಂಭದಲ್ಲಿ ಬಟ್ಟೆಗಳು ಚರ್ಮ, ಉಣ್ಣೆ ಮತ್ತು ಎಲೆಗಳಿಂದ ತಯಾರಿಸಲಾಗುತ್ತಿತ್ತು. —**ಸರಿ**

23 ಸೀರೆ ಮತ್ತು ಕುಪ್ಪಸಗಳನ್ನು ಮಹಿಳೆಯರು ಧರಿಸುತ್ತಾರೆ. —**ಸರಿ**

24 ಬಟ್ಟೆಗಳಿಗೆ ಬಣ್ಣಗಳನ್ನು ಹೊಲಗಳಲ್ಲಿ ಬೆಳೆದ ಹಣ್ಣುಗಳಿಂದ ತಯಾರಿಸಲಾಗುತ್ತದೆ. —**ಸರಿ**

25 ಧೋತಿ ಮತ್ತು ಟವಲ್ ಪುರುಷರ ಪಾರಂಪರಿಕ ಉಡುಪುಗಳಾಗಿವೆ. —**ಸರಿ**

26 ಹೊಂದಿಸಿ ಬರೆಯಿರಿ. (ಉತ್ತರಗಳು)

ಎ	**ಬ**
ಅ. ರೇಷ್ಮೆ	ಅ. ಕರ್ನಾಟಕವು ಭಾರತದಲ್ಲಿಯೇ ಹೆಚ್ಚುಉತ್ಪಾದಿಸುವುದು
ಆ. ಬೇಸಿಗೆ ಬಟ್ಟೆಗಳು	ಆ. ಬಿಳಿಯ ಬಟ್ಟೆಗಳು
ಇ. ಸೀರೆ ಮತ್ತು ಬ್ಲೌಸ್	ಇ. ಪಾರಂಪರಿಕ ಮಹಿಳೆಯರ ಉಡುಪುಗಳು
ಈ. ಮಳೆಯ ಬಟ್ಟೆಗಳು	ಈ. ರೇನ್ ಕೋಟ್
ಉ. ಬಾಗಲಕೋಟೆ	ಉ. ಇಳಕಲ್ ಸೀರೆ
ಊ. ಪುರುಷರ ಪರಂಪರಾಗತ ಬಟ್ಟೆ	ಊ. ಧೋತಿ, ಅಂಗಿ, ರುಮಾಲು

ಒಂದು ಅಂಕದ ಉತ್ತರಗಳು

27. ನಾವು ಬೇಸಿಗೆಗೆ ತೆಳುವಾದ ಹತ್ತಿ ಬಟ್ಟೆಗಳನ್ನು ಧರಿಸುತ್ತೇವೆ.

28. ರೇಷ್ಮೆ ಹುಳು ಉತ್ಪಾದಿಸುವ ನೂಲನ್ನು ರೇಷ್ಮೆ ಎಂದು ಕರೆಯಲಾಗುತ್ತದೆ.

29 ಮಳೆಯ ಕಾಲದಲ್ಲಿ ರೈನ್ ಕೋಟ್ ಮತ್ತು ಜಲನಿರೋಧಕ ಬಟ್ಟೆಗಳು ಸೂಕ್ತವಾಗಿವೆ.

30. ಕರ್ನಾಟಕದ ಬಾಗಲಕೋಟೆ ಜಿಲ್ಲೆ ಇಳಕಲ್ ಸೀರೆಗಳಿಗೆ ಪ್ರಸಿದ್ಧವಾಗಿದೆ.

31. ಕರ್ನಾಟಕದಲ್ಲಿ ಪುರುಷರ ಪಾರಂಪರಿಕ ಉಡುಪು ಧೋತಿ, ಅಂಗಿ ಮತ್ತು ರುಮಾಲು/ ಟವಲ್ ಆಗಿದೆ.

32 ಹೂಗಳು, ಎಲೆಗಳು ಮತ್ತು ಹಣ್ಣುಗಳು ಬಟ್ಟೆಗಳಿಗೆ ಬಣ್ಣ ತಯಾರಿಸಲು ಬಳಸುವ ನೈಸರ್ಗಿಕ ವಸ್ತುಗಳಾಗಿವೆ.

33 ಸಸ್ಯಗಳಿಂದ ಪಡೆಯುವ ನೂಲಾದ ಹತ್ತಿ ಬೇಸಿಗೆಗೆ ಉತ್ತಮವಾಗಿದೆ.

34 ಬಟ್ಟೆಗಳು ನಮ್ಮನ್ನು ಬಿಸಿಲು, ಚಳಿ ಮತ್ತು ಮಳೆಯಿಂದ ರಕ್ಷಿಸುತ್ತವೆ.

ಎರಡು ಅಂಕದ ಉತ್ತರಗಳು

35 ಬೇಸಿಗೆ ಮತ್ತು ಚಳಿಗಾಲದ ಬಟ್ಟೆಗಳ ವ್ಯತ್ಯಾಸ:

- ಬೇಸಿಗೆ ಬಟ್ಟೆಗಳು ತೆಳುವಾಗಿ ಮತ್ತು ತಂಪಾಗಿರುತ್ತವೆ.
- ಚಳಿಗಾಲದ ಬಟ್ಟೆಗಳು ದಪ್ಪ ಮತ್ತು ಉಷ್ಣತೆಯನ್ನು ನೀಡುತ್ತವೆ.

36. ಉದಾಹರಣೆಗಳು:

- ಹೊಲಿದ ಬಟ್ಟೆಗಳು: ಶರ್ಟ್, ಪ್ಯಾಂಟ್
- ಹೊಲಿಯದ ಬಟ್ಟೆಗಳು: ಸೀರೆ, ಧೋತಿ

37 ಕರ್ನಾಟಕದ ಎರಡು ಪಾರಂಪರಿಕ ಉಡುಪುಗಳು:

- ಬಾಗಲಕೋಟೆ ಜಿಲ್ಲೆಯ ಇಳಕಲ್ ಸೀರೆ
- ಮೈಸೂರು ಜಿಲ್ಲೆಯ ಮೈಸೂರು ರೇಷ್ಮೆ ಸೀರೆ

38 ಕರ್ನಾಟಕದ ಎರಡು ರೇಷ್ಮೆ ಉತ್ಪಾದನಾ ಜಿಲ್ಲೆಗಳು:

- ಮೈಸೂರು
- ರಾಮನಗರ

39 ಋತು ಮತ್ತು ಉಡುಪುಗಳ ಜೋಡಣೆ:

- ಬೇಸಿಗೆ: ಹತ್ತಿ ಬಟ್ಟೆಗಳು
- ಚಳಿಗಾಲ: ಉಣ್ಣೆ ಸ್ವೆಟರ್
- ಮಳೆಯ ಋತು: ರೈನ್ ಕೋಟ್, ಜಲನಿರೋಧಕ ಬೂಟುಗಳು

ಮೂರು ಅಂಕದ ಉತ್ತರಗಳು

40 ಉಡುಪನ್ನು ತಯಾರಿಸುವ ಹಂತಗಳು:

- ಸಸ್ಯಗಳಿಂದ ಹತ್ತಿಯನ್ನು ಪಡೆಯುವುದು.
- ಹತ್ತಿಯಿಂದ ನೂಲನ್ನು ತಯಾರಿಸುವುದು.

- ನೂಲನ್ನು ನೇಯುವ ಮೂಲಕ ಬಟ್ಟೆ ತಯಾರಿಸುವುದು.
- ಬಟ್ಟೆಗೆ ಬಣ್ಣ ಹಚ್ಚುವುದು.
- ಬಟ್ಟೆಯನ್ನು ಹೊಲಿದು ಉಡುಪನ್ನು ತಯಾರಿಸುವುದು.

41 ಪಹೇಳಿ ಉತ್ತರಗಳು:

- "ನಾನು ಉಣ್ಣೆಯಿಂದ ತಯಾರಾಗಿದ್ದೇನೆ. ಚಳಿಗಾಲದಲ್ಲಿ ಎಲ್ಲರೂ ನನ್ನನ್ನು ಧರಿಸುತ್ತಾರೆ." →ಸ್ವೆಟರ್
- "ಬೇಸಿಗೆಗೆ ನನ್ನಿಂದ ತಯಾರಾದ ಬಟ್ಟೆಗಳನ್ನು ಎಲ್ಲರೂ ಇಷ್ಟಪಡುತ್ತಾರೆ. ರೈತರು ನನ್ನನ್ನು ಬೆಳೆಸುತ್ತಾರೆ." →ಹತ್ತಿ

42 ಉಡುಪಿನ ಮೂರು ಉಪಯೋಗಗಳು:

- ಬಿಸಿಲು, ಮಳೆ ಮತ್ತು ಚಳಿಯಿಂದ ರಕ್ಷಣೆ.
- ಸಂಸ್ಕೃತಿ ಮತ್ತು ಪರಂಪರೆಯ ಪ್ರತಿಬಿಂಬ.
- ಅಲಂಕಾರ ಮತ್ತು ಶೈಲಿಗಾಗಿ.

43 ಉದಾಹರಣೆಗಳು:

- ಹೊಲಿದ: ಶರ್ಟ್, ಫ್ರಾಕ್, ಪ್ಯಾಂಟ್
- ಹೊಲಿಯದ: ಸೀರೆ, ಧೋತಿ, ಶಾಲ್

ನಾಲ್ಕು ಅಂಕದ ಉತ್ತರಗಳು

44 ಕರ್ನಾಟಕದ ಜಿಲ್ಲೆಗಳ ಉಡುಪು ವಿನ್ಯಾಸಗಳು:

- ಬಾಗಲಕೋಟೆ: ಇಳಕಲ್ ಸೀರೆಗಳು
- ಮೈಸೂರು: ಮೈಸೂರು ರೇಷ್ಮೆ ಸೀರೆಗಳು
- ದಾವಣಗೆರೆ: ಹತ್ತಿ ಉಡುಪುಗಳು
- ಕೊಡಗು: ಉಣ್ಣೆ ಟೋಪಿ ಮತ್ತು ಉಡುಪುಗಳು

45 ನೈಸರ್ಗಿಕ ಬಣ್ಣಗಳಿಂದ ಬಟ್ಟೆ ಬಣ್ಣಿಸುವ ವಿಧಾನ:

- ಬೀಟ್ರೂಟ್, ಅರಿಶಿಣ, ದಾಸವಾಳ ಹೂವಿನಂತಹ ನೈಸರ್ಗಿಕ ವಸ್ತುಗಳನ್ನು ಸಂಗ್ರಹಿಸುವುದು.
- ಅವುಗಳನ್ನು ನೀರಿನಲ್ಲಿ ಕುದಿಸಿ ಬಣ್ಣ ತಯಾರಿಸುವುದು.
- ಬಿಳಿ ಬಟ್ಟೆಯನ್ನು ಬಣ್ಣದಲ್ಲಿ ಮುಳುಗಿಸುವುದು.
- ಬಟ್ಟೆಯನ್ನು ಒಣಗಿಸಿ ಬಣ್ಣ ಮತ್ತು ವಿನ್ಯಾಸವನ್ನು ನೋಡುವುದು.

46 ಹವಾಮಾನಕ್ಕೆ ಅನುಗುಣವಾಗಿ ಉಡುಪು:

- ಬೇಸಿಗೆ: ತೆಳುವಾದ ಹತ್ತಿ ಬಟ್ಟೆಗಳು
- ಮಳೆಯ ಋತು: ರೈನ್ ಕೋಟ್, ಜಲನಿರೋಧಕ ಬೂಟುಗಳು
- ಚಳಿಗಾಲ: ಸ್ವೆಟರ್, ಉಣ್ಣೆ ಟೋಪಿ

47 ಉಡುಪು ತಯಾರಿಕೆಯಲ್ಲಿ ಸೃಜನಾತ್ಮಕತೆ:

- ಸಸ್ಯ ಮತ್ತು ಪ್ರಾಣಿಗಳಿಂದ ನೂಲನ್ನು ಬಳಸುವುದು.
- ನೈಸರ್ಗಿಕ ಮತ್ತು ರಾಸಾಯನಿಕ ಬಣ್ಣಗಳನ್ನು ಬಳಸಿ ಬಟ್ಟೆ ಬಣ್ಣಿಸುವುದು.
- ಬಟ್ಟೆಗಳನ್ನು ಹೊಲಿದು ವಿನ್ಯಾಸಗೊಳಿಸುವುದು.
- ಋತು ಮತ್ತು ಫ್ಯಾಷನ್‌ಗೆ ಅನುಗುಣವಾಗಿ ಉಡುಪುಗಳನ್ನು ತಯಾರಿಸುವುದು.

ಪಾಠ-24. ಮೋಡಣ್ಣನ ಪಯಣ

ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ಕಾಮನ ಬಿಲ್ಲಿನಲ್ಲಿರುವ ಒಟ್ಟು ಬಣ್ಣಗಳ ಸಂಖ್ಯೆ

ಎ) 5 **ಬಿ) 7** ಸಿ) 8 ಡಿ) 6

2. ಕರ್ನಾಟಕದ ಅತಿ ಎತ್ತರವಾದ ಶಿಖರ

ಎ) ಬ್ರಹ್ಮಗಿರಿ ಬಿ) ಪುಷ್ಪಗಿರಿ **ಸಿ) ಮುಳ್ಳಯ್ಯನಗಿರಿ** ಡಿ) ನೀಲಗಿರಿ ಬೆಟ್ಟ

3. ಮರಗಳು ಎಲೆ ಉದರಿಸುವ ಕಾಲ

ಎ) ಮಳೆಗಾಲ **ಬಿ) ಚಳಿಗಾಲ** ಸಿ) ಬೇಸಿಗೆ ಕಾಲ ಡಿ) ಯಾವಾಗಲೂ

4. ಹವಾಮಾನದ ಬದಲಾಣೆಯಿಂದ ________ ಉಂಟಾಗುತ್ತವೆ.

ಎ) ಋತುಗಳು ಬಿ) ಹಗಲು-ರಾತ್ರಿ ಸಿ) ಮೋಡ ಡಿ) ಬಿಸಿಲು

5. ಭೂಮಿಯ ಮೇಲಿನ ಜೀವಿಗಳು ಉಸಿರಾಡಲು _________ ಬೇಕು.

ಎ) ನೀರು **ಬಿ) ಗಾಳಿ** ಸಿ) ಬಿಸಿಲು ಡಿ) ಮಳೆ

ಖಾಲಿ ಜಾಗಗಳನ್ನು ಭರ್ತಿ ಮಾಡಿ

6 600 ಮೀಟರ್

7 ಕಣಿವೆ (ವ್ಯಾಲಿ)

8 ಜಲಪಾತ

9 ಮೆಕ್ಕಲು ಮಣ್ಣು

10 ಮಳ್ಳಯ್ಯನಗಿರಿ

11 ರೇಷ್ಮೆ ಕೀಟ

12 ಚಳಿಗಾಲ

13 ಏಳು

14 ಹಿಮಾಲಯ ಪರ್ವತಶ್ರೇಣಿ

15 ಸೂರ್ಯನ ಬೆಳಕು

ಸರಿ ಅಥವಾ ತಪ್ಪು ತಿಳಿಸಿ (ಉತ್ತರಗಳು)

16. ತಪ್ಪು

17 ತಪ್ಪು

18 ಸರಿ

19 ಸರಿ

20 ತಪ್ಪು

21 ಸರಿ

22 ತಪ್ಪು

23 ತಪ್ಪು

24 ಸರಿ

25 ಸರಿ

26 ಹೊಂದಿಸಿ ಬರೆಯಿರಿ (ಉತ್ತರಗಳು)

ಬಲಭಾಗ	**ಎಡಭಾಗ**
ಎ. ಮೈದಾನ	a. ಎರಡು ಬೆಟ್ಟಗಳ ನಡುವೆ ಸಣ್ಣ ತೊಡಲು
ಬಿ. ಹಳ್ಳಿಗೋಡು	b. ಎತ್ತರದಿಂದ ಬರುವ ನೀರು (ಜಲಪ್ರಪಾತ)
ಸಿ. ಹಿಮಾಲಯ ಶ್ರೇಣಿ	c. ವಿಶ್ವದ ಉನ್ನತ ಹಿಮ ಶಿಖರ (ಟಿಬೆಟ್)

ಬಲಭಾಗ	ಎಡಭಾಗ
ಡಿ. ಕಾಮನಬಿಲ್ಲು	d. ಏಳು ಬಣ್ಣಗಳು (VIBGYOR)
ಇ. ಮುಳ್ಳಯ್ಯನಗಿರಿ ಶಿಖರ	e. ಕರ್ನಾಟಕದ ಅತ್ಯುನ್ನತ ಶಿಖರ
ಎಫ್. ಥಾರ್ ಮರುಭೂಮಿ	f. ಭಾರತದ ಪಶ್ಚಿಮದ ಮರಳುಗಾಡು
ಜಿ ಹವಾಮಾನ	g. ವೃದ್ಧಿಶೀಲ ಕಾಲದ ಹವಾಮಾನದ ಸ್ಥಿತಿ
ಹೆಚ್. ವಾತಾವರಣ	h. ಪ್ರತಿದಿನ ವಾತಾವರಣದ ಬದಲಾವಣೆ

ಒಂದು ಅಂಕದ ಉತ್ತರಗಳು

27 ಪಾಠದ ಹೆಸರು "ಮೋಡಣ್ಣನ ಪ್ರಯಾಣ".

28 ಈ ಪಾಠದಲ್ಲಿ ಮೋಡವೇ ಕಥನ ಕರ್ತ.

29 ತೆಂಗಿನ ಮರಗಳು ಕಡಲ ತೀರದಲ್ಲಿ ಬೆಳೆಯುತ್ತವೆ.

30 ಅಲೆಗಳಿಂದ ಕಡಲ ತೀರದಲ್ಲಿ ಸವೆತ ಉಂಟಾಗುತ್ತದೆ.

31 ಮರುಭೂಮಿಯಲ್ಲಿ ತುಂಬಾ ಬಿಸಿಲು ಮತ್ತು ಮಣ್ಣು ಇರುತ್ತದೆ.

32 ಸಮತಟ್ಟಾದ ಭೂಭಾಗವನ್ನು ಮೈದಾನ ಎನ್ನುತ್ತಾರೆ.

33 ನದಿಗಳು ನಮ್ಮ ತಟ್ಟು ಪ್ರದೇಶಗಳಿಗೆ ಫಲವತ್ತಾದ ಮಣ್ಣು ತರುತ್ತವೆ.

34 ಪೀಠಭೂಮಿ (ಪ್ಲಾಟೋ) ಎತ್ತರದ ಸಮತಟ್ಟು ಪ್ರದೇಶ.

35 ಬೆಟ್ಟ ಸಮುದ್ರ ಮಟ್ಟದಿಂದ ಸುಮಾರು 600 ಮೀಟರ್ ಎತ್ತರದಲ್ಲಿರುತ್ತದೆ.

36 ಕಣಿವೆ ಎರಡು ಬೆಟ್ಟಗಳು ಕೂಡಿಕೊಳ್ಳುವ ನಡುವಿನ ಭೂಭಾಗ.

37 ಪರ್ವತವು ತುಂಬಾ ಎತ್ತರದ ಭೂಭಾಗ.

38 ಜಲಪಾತ ಎಂದರೆ ಎತ್ತರದಿಂದ ನೀರು ಬೀಳುವುದು.

39 ಕಾಮನಬಿಲ್ಲಿನ ಬಣ್ಣಗಳನ್ನು ನೆನಪಿಸಲು "VIBGYOR".

40 ಕಾಮನ ಬಿಲ್ಲಿನಲ್ಲಿ ಏಳು ಬಣ್ಣಗಳಿವೆ.

41 ಕಣಿವೆ V ಅಥವಾ U ಆಕಾರದಲ್ಲಿರುತ್ತವೆ.

ಎರಡು ಅಂಕದ ಉತ್ತರಗಳು

42. ಮರುಭೂಮಿ ತುಂಬಾ ಬಿಸಿ. ಅಲ್ಲಿ ಎಲ್ಲೆಲ್ಲೂ ಮರಳು ಇರುತ್ತದೆ.

43. ಕಡಲ ತೀರದಲ್ಲಿ ಅಲೆಗಳು, ನೊರೆ ಮತ್ತು ಮರಳು, ಮಣ್ಣು ಕಾಣಿಸುತ್ತವೆ.

44. ಮಣ್ಣು ಸಸ್ಯ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಮನೆ ಕಟ್ಟಲು ಸಹ ಬಳಸುತ್ತಾರೆ.
45. ಬೇಸಿಗೆ ಬಿಸಿ ಇರುತ್ತದೆ. ಚಳಿಗಾಲ ತಂಪಾಗಿರುತ್ತದೆ.
46. ವಾಯು ನಮ್ಮ ಉಸಿರಾಟಕ್ಕೆ ಸಹಾಯ ಮಾಡುತ್ತದೆ ಮತ್ತು ನಾವು ಜೀವಂತರಾಗಿರಲು ಸಹಾಯಮಾಡುತ್ತದೆ.
47. ಮನೆಗಳು ಮತ್ತು ಕಾರ್ಖಾನೆಗಳಿಂದ ಹೊರಡುವ ಕೆಸರು ನೀರಿನಿಂದ ನೀರು ಮಾಲಿನ್ಯಗೊಳ್ಳುತ್ತದೆ.
48. ಹೆಚ್ಚಿನ ಮರಗಳನ್ನು ಬೆಳಸಬೇಕು ಬೆಂಕಿಯಲ್ಲಿ ಕಸವನ್ನು ಹಾಕಬಾರದು.
49. ಎಲ್ಲೆಲ್ಲೂ ಮೋಡಗಳು ಮತ್ತು ನೀರು ಕಾಣುತ್ತವೆ. ಗುಡುಗಿನ ಶಬ್ದ ಕೂಡ ಕೇಳಿಸುತ್ತದೆ.
50. ಜನರು ಬೇಸಿಗೆಯಲ್ಲಿ ಹಗುರವಾದ , ತೆಳುವಾದ ಉಡುಪು ಧರಿಸುತ್ತಾರೆ.
51. ಚಳಿಗಾಲದಲ್ಲಿ ಜನರು ಬಿಸಿಯಾದ ಆಹಾರಗಳನ್ನು ತಿಂಡಿಯಾಗಿ ಸೇವಿಸುತ್ತಾರೆ.

ಮೂರು ಅಂಕದ ಉತ್ತರಗಳು

52. ಮೋಡ ಮರುಭೂಮಿ, ಸಮತಟ್ಟು ಪ್ರದೇಶ, ಪೀಠಭೂಮಿಗಳ ಮೇಲೆ ಹಾದು ಹೋಯಿತು. ಅದು ಮರುಭೂಮಿಯಲ್ಲಿ ಮರಳು, ಸಮತಟ್ಟಿನಲ್ಲಿ ಕೃಷಿ, ಪೀಠಭೂಮಿಯಲ್ಲಿ ಬಂಡೆಗಳನ್ನು ಕಾಣಬಹುದು.
53. ಬೆಟ್ಟವು ಪರ್ವತಕ್ಕಿಂತ ಚಿಕ್ಕದು. ಪರ್ವತವು ತುಂಬಾ ಎತ್ತರದ ಹಾಗೂ ತೀಕ್ಷ್ಣವಾಗಿದೆ.
54. ಜನರು ಛತ್ರಿ ಮತ್ತು ರೈನ್ ಕೋಟ್ ಬಳಸುತ್ತಾರೆ. ಅವರು ಮನೆಯೊಳಗೆಯೇ ಇರುತ್ತಾರೆ.
55. ಹೆಚ್ಚು ಪ್ಲಾಸ್ಟಿಕ್ ಬಳಸಬೇಡಿ, ಕಸವನ್ನು ಕಸದ ಬುಟ್ಟಿಯಲ್ಲಿ ಹಾಕಿ, ಮರಗಳನ್ನು ಬೆಳಸಬೇಕು.
56. ವಾತಾವರಣ ದಿನದಿಂದ ದಿನಕ್ಕೆ ಬದಲಾಗುತ್ತದೆ. ಉದಾಹರಣೆ: today is rainy day, tomorrow is sunny day.
57. ಹವಾಮಾನವೆಂದರೆ ಒಂದು ಪ್ರದೇಶದ ಬಹು ವರ್ಷಗಳ ಕಾಲದ ವಾತಾವರಣ. ಹವಾಮಾನ ಬದಲಾವಣೆ ವರ್ಷಗಟ್ಟಲೆ ಆಗುತ್ತದೆ, ಆದರೆ ವಾತಾವರಣ ಪ್ರತಿದಿನ ಬದಲಾಗುತ್ತದೆ.
58. ಮೋಡವು ಸಮುದ್ರ, ಪರ್ವತ ಮತ್ತು ಮರುಭೂಮಿಗೆ ಹೋಯಿತು. ಅದು ಅಲೆಗಳು, ಹಿಮ ಮತ್ತು ಮಣ್ಣುಗಳನ್ನು ಕಂಡಿತು.
59. ಬಿಲ್ಲು ಎನ್ನುವುದು ಆಕಾಶದಲ್ಲಿ ಬಣ್ಣದ ಬಗೆ. ಇದು ಮಳೆಯ ನಂತರ ಸೂರ್ಯನ ಬೆಳಕು ನೀರಿನ ಹನಿಗಳಲ್ಲಿ ಹೋಗುವಾಗ ಕಾಣಿಸುತ್ತದೆ.
60. ನೀರು ಕುಡಿಯಲು, ಅಡುಗೆಗೆ ಮತ್ತು ತೊಳೆಯಲು ಉಪಯೋಗವಾಗುತ್ತದೆ.

61. ಮಾಲಿನ್ಯದಿಂದ ವಾಯು ಕೆಡುತ್ತದೆ, ನೀರು ಸಿದ್ವಾಗುತ್ತದೆ, ಮಣ್ಣು ಸಸ್ಯಗಳಿಗೆ ಅನುಕೂಲಕರವಲ್ಲ.

ನಾಲ್ಕು ಅಂಕದ ಉತ್ತರಗಳು

62. ಮೋಡವು ಸಮುದ್ರ, ಪರ್ವತ, ಸಮತಟ್ಟು, ಮರುಭೂಮಿಗಳ ಮೇಲೆ ಹೋಯಿತು. ಅಲ್ಲಿ ಅಲೆಗಳು, ಹಿಮ, ಬಿತ್ತನೆ ಭೂಮಿ, ಮಣ್ಣು ಮತ್ತು ನದಿಗಳನ್ನು ಕಂಡಿತು. ಅದು ಪ್ರಯಾಣವನ್ನು ಆನಂದಿಸಿತು ಮತ್ತು ಮಳೆಯಾಗಿ ನೀರನ್ನು ಹಂಚಿತು.

63. ಬೇಸಿಗೆ ಬಟ್ಟೆ ಒಣಗಿಸಲು ಸಹಾಯ ಮಾಡುತ್ತದೆ. ಮಳೆಯ ಕಾಲದಲ್ಲಿ ಸಸ್ಯಗಳಿಗೆ ನೀರು ಸಿಗುತ್ತದೆ. ಚಳಿಗಾಲದಲ್ಲಿ ನಾವು ಬಿಸಿ ಆಹಾರ ಸೇವಿಸುತ್ತೇವೆ ಮತ್ತು ಉಷ್ಣತೆಯನ್ನು ಸಂರಕ್ಷಿಸುತ್ತೇವೆ.

64. ಧೂಮಪಾನ, ನೀರು ಮಲ್ಲಿನವಾಗುತ್ತದೆ, ಪ್ಲಾಸ್ಟಿಕ್ ಮಾಲಿನ್ಯ ಉಂಟುಮಾಡುತ್ತದೆ. ನಾವು ಮರಗಳನ್ನು ನೆಡಬೇಕು, ಕಸವನ್ನು ಕಸದ ಡಬ್ಬಿಯಲ್ಲಿ ಹಾಕಬೇಕು, ನೀರನ್ನು ಉಳಿಸಬೇಕು.

65. ವಾತಾವರಣ ಪ್ರತಿದಿನ ಬದಲಾಗುತ್ತದೆ. ಹವಾಮಾನ ಬಹು ವರ್ಷಗಳ ಮಾದರಿಯಾಗಿದೆ. ಉದಾಹರಣೆ: today is rainy day (ವಾತಾವರಣ), Rajasthan is always hot (ಹವಾಮಾನ).

66. ವಾಯು ಉಸಿರಾಟಕ್ಕೆ ಸಹಾಯಮಾಡುತ್ತದೆ. ನೀರು ಕುಡಿಯಲು, ತೊಳೆಯಲು ಉಪಯೋಗವಾಗುತ್ತದೆ. ಮಣ್ಣು ಸಸ್ಯ ಬೆಳವಣಿಗೆಗೆ ಅಗತ್ಯ. ಇವೆಲ್ಲವೂ ಜೀವಕ್ಕೆ ಅವಶ್ಯಕ.

67. ಬೇಸಿಗೆಯಲ್ಲಿ ನಾವು ಹಗುರ ಉಡುಪನ್ನು ಧರಿಸುತ್ತೇವೆ ಮತ್ತು ತಂಪಾದ ಆಹಾರ ಸೇವಿಸುತ್ತೇವೆ. ಚಳಿಗಾಲದಲ್ಲಿ ಬಿಸಿ ಉಡುಪು ಮತ್ತು ಬಿಸಿ ಆಹಾರ. ಮಳೆಯ ಕಾಲದಲ್ಲಿ ಛತ್ರಿ ಬಳಸುತ್ತೇವೆ.

ಪಾಠ-25 ನಮ್ಮ ರಾಜ್ಯ ನಮ್ಮ ಹೆಮ್ಮೆ

ಈ ಕೆಳಗಿನ ಪ್ರಶ್ನೆಗಳಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ (ಉತ್ತರಗಳು)

1. ಕರ್ನಾಟಕದ ರಾಜಧಾನಿ ಯಾವುದು?
   A) ಮೈಸೂರು B) ಬೆಳಗಾವಿ **C) ಬೆಂಗಳೂರು** D) ಹುಬ್ಬಳ್ಳಿ
2. ಕರ್ನಾಟಕದ ರಾಜ್ಯಪತಾಕೆಯ ಬಣ್ಣಗಳು ಯಾವುವು?
   A) ಕೆಂಪು ಮತ್ತು ಬಿಳಿ B) ನೀಲಿ ಮತ್ತು ಬಿಳಿ
   C) ಹಳದಿ ಮತ್ತು ಕೆಂಪು D) ಹಸಿರು ಮತ್ತು ಹಳದಿ
3. ಕರ್ನಾಟಕದ ರಾಜ್ಯಪಕ್ಷಿ ಯಾವುದು?
   A) ನೀಲಕಂಠ ಪಕ್ಷಿ B) ನವಿಲು C) ಹುಲಿ D) ಮಯೂರ
4. ಕೆಂಪೇಗೌಡರು ಯಾವ ನಗರವನ್ನು ಸ್ಥಾಪಿಸಿದರು?
   A) ಮೈಸೂರು **B) ಬೆಂಗಳೂರು** C) ಚಿಕ್ಕಬಳ್ಳಾಪುರ D) ಶಿವಮೊಗ್ಗ
5. ಕನ್ನಡ ರಾಜ್ಯೋತ್ಸವವನ್ನು ಯಾವ ತಿಂಗಳಲ್ಲಿ ಆಚರಿಸುತ್ತಾರೆ?
   A) ಜನವರಿ B) ಜೂನ್ **C) ನವೆಂಬರ್** D) ಡಿಸೆಂಬರ್

ಖಾಲಿ ಜಾಗಗಳನ್ನು ತುಂಬಿರಿ (ಉತ್ತರಗಳು)

6 **ರಾಜಸ್ಥಾನ** ರಾಜ್ಯವು ಭಾರತದ ನಕ್ಷೆಯಲ್ಲಿ ಪಶ್ಚಿಮ ಭಾಗದಲ್ಲಿ ಇದೆ.

7 ನಮ್ಮ ರಾಜ್ಯದ ಹೆಸರು **ಕರ್ನಾಟಕ.**

8 ಕರ್ನಾಟಕದಲ್ಲಿ **೩೧** ಜಿಲ್ಲೆಗಳಿವೆ.

9 ಪಶ್ಚಿಮ ಕರಾವಳಿ ಪ್ರದೇಶವನ್ನು **ಕೊಂಕಣ** ಕರಾವಳಿ ಎಂದು ಕರೆಯುತ್ತಾರೆ.

10 ಮಲೆನಾಡು ಪ್ರದೇಶದಲ್ಲಿ ಹೆಚ್ಚು **ಮಳೆ** ಯಾಗುತ್ತದೆ.

11 ಉತ್ತರ ಮೈದಾನ ಪ್ರದೇಶದಲ್ಲಿ **ಕಡಿಮೆ** ಮಳೆಯಾಗುತ್ತದೆ.

12 ದಕ್ಷಿಣ ಮೈದಾನ ಪ್ರದೇಶದಲ್ಲಿ ಅನೇಕ **ಸಣ್ಣ** ಬೆಟ್ಟಗಳಿವೆ.

13 ಕರಾವಳಿ ಪ್ರದೇಶದಲ್ಲಿ ಮುಖ್ಯ ಉದ್ಯಮ **ಮೀನುಗಾರಿಕೆ**.

14 ಮಲೆನಾಡಿನ ಪ್ರಮುಖ ಬೆಳೆ **ಕಾಫಿ**.

15 ಜೋಗ ಜಲಪಾತವು **ಮಲೆನಾಡು** ಪ್ರದೇಶದಲ್ಲಿದೆ.

16 ಕರ್ನಾಟಕದ ಶಾಶ್ವತ ನದಿ ಕೃಷ್ಣಾ ನದಿ.

17 ಹಂಪಿ **ವಿಜಯನಗರ** ಸಾಮ್ರಾಜ್ಯದ ರಾಜಧಾನಿಯಾಗಿತ್ತು.

18 **ಧಾರವಾಡ** ಜಿಲ್ಲೆಯನ್ನು “ವೀಳ್ಯದಲೆಯ ನಾಡು” ಎಂದು ಕರೆಯಲಾಗುತ್ತದೆ.

19 ಬೆಂಗಳೂರು ನಗರದ ಮುಖ್ಯ ಆಕರ್ಷಣೆ **ವಿಧಾನ ಸೌಧ**.

20 ನಂದಿ ಬೆಟ್ಟವು **ಪ್ರವಾಸಿ** ಸ್ಥಳವಾಗಿದೆ.

ಸರಿ ಅಥವಾ ತಪ್ಪು ತಿಳಿಸಿ (ಉತ್ತರಗಳು)

21 ತಪ್ಪು

22 ಸರಿ

23 ತಪ್ಪು

24 ಸರಿ

25 ತಪ್ಪು

26 ಸರಿ

27 ತಪ್ಪು

28 ತಪ್ಪು

29 ಸರಿ

30 ಸರಿ

31 ಸರಿ

32 ಸರಿ

33 ಸರಿ

34 ಸರಿ

35 ತಪ್ಪು

36 ಹೊಂದಿಸಿ ಬರೆಯಿರಿ (ಉತ್ತರಗಳು)

ಎ. ಪಶ್ಚಿಮ ಕರಾವಳಿ ಪ್ರದೇಶ	a. ಉಡುಪಿ
ಬಿ. ಮಲೆನಾಡು ಪ್ರದೇಶ	b. ಕಾಫಿ ಬೆಳೆ
ಸಿ. ಉತ್ತರ ಸಮತಟ್ಟು	c. ಚಿನ್ನ, ಕಬ್ಬಿಣ
ಡಿ. ದಕ್ಷಿಣ ಸಮತಟ್ಟು	d. ಮೈಕಾ, ಗ್ರಾನೈಟ್
ಇ. ಹಂಪೆ	e.ವಿಜಯನಗರ ಸಾಮ್ರಾಜ್ಯ
ಎಫ್. ನಂದಿ ಬೆಟ್ಟ	f. ಪ್ರಕೃತಿ ಸ್ಥಳ

ಜಿ. ಕಾರವಾರ	g. ಮೀನುಗಾರಿಕೆ
ಹೆಚ್. ಜೋಗ ಜಲಪಾತ	h.ಶಿವಮೊಗ್ಗ ಜಿಲ್ಲೆ
ಐ. ಹಾಸನ	i. ಮಲೆನಾಡು ಜಿಲ್ಲೆಯ ಹೆಸರು
ಜೆ. ಮಂಗಳೂರು	j. ಕಡಲ ತೀರದ ನಗರ

ಒಂದು ಅಂಕದ (ಉತ್ತರಗಳು)

37 ನಮ್ಮ ರಾಜ್ಯ – ನಮ್ಮ ಹೆಮ್ಮೆ

38 ಕರ್ನಾಟಕದಲ್ಲಿ ೩೧ ಜಿಲ್ಲೆಗಳಿವೆ.

39 ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ

40 ಅರಬ್ಬಿ ಸಮುದ್ರ

41 ಬೆಂಗಳೂರು

42 ಮಲೆನಾಡು ಪ್ರದೇಶ

43 ಮಲೆನಾಡು ಪ್ರದೇಶ

44 ತೆಂಗಿನಕಾಯಿ

45 ಕಾವೇರಿ ನದಿ

46 ಹಂಪಿ

47 ನಂದಿ ಬೆಟ್ಟ

48 ದರೋಜಿ

49 ಕೊಂಕಣ ಕರಾವಳಿ

50 ಬಳ್ಳಾರಿ

51 ಮೈಸೂರು

ಎರಡು ಅಂಕದ ಉತ್ತರಗಳು

52 ಕಾಫಿ ಮತ್ತು ಅಡಿಕೆ

53 ನದಿಗಳು ಕುಡಿಯುವ ನೀರಿನೊಂದಿಗೆ ಕೃಷಿಗೆ ಸಹಾಯ ಮಾಡುತ್ತವೆ.

54 ವಿಧಾನ ಸೌಧ ಮತ್ತು ಕಬ್ಬನ್ ಪಾರ್ಕ್

55 ಅದು ಕಲ್ಲಿನಿಂದ ನಿರ್ಮಿತವಾಗಿದೆ ಮತ್ತು ನಿಜವಾದ ರಥದಂತೆ ಕಾಣುತ್ತದೆ.

56 ಜೋಗ ಜಲಪಾತ ಮತ್ತು ಗೋಕಾಕ್ ಜಲಪಾತ

57 ಜನರು ನಿಸರ್ಗವನ್ನು ನೋಡುವುದಕ್ಕೂ, ತಂಪಾದ ಹವಾಮಾನವನ್ನು ಆನಂದಿಸುವುದಕ್ಕೂ ಹೋಗುತ್ತಾರೆ.

58 ನಾವು ಸ್ಥಳಗಳನ್ನು ಸ್ವಚ್ಛವಾಗಿರಿಸಬೇಕು ಮತ್ತು ಗೋಡೆಗಳ ಮೇಲೆ ಬರೆಯಬಾರದು.

ಮೂರು ಅಂಕದ ಉತ್ತರಗಳು

59 ಕರ್ನಾಟಕದಲ್ಲಿ ನಾಲ್ಕು ಪ್ರದೇಶಗಳಿವೆ: ಕರಾವಳಿ, ಮಲೆನಾಡು, ಉತ್ತರದ ಮೈದಾನ, ಮತ್ತು ದಕ್ಷಿಣದ ಮೈದಾನ, ಕರಾವಳಿಯಲ್ಲಿ ಕಡಲತೀರಗಳಿವೆ, ಮಲೆನಾಡಿನಲ್ಲಿ ಬೆಟ್ಟಗಳು ಮತ್ತು ಕಾಡುಗಳಿವೆ. ಉತ್ತರದ ಹವಮಾನ ಒಣವಾಗಿದ್ದು ಕೃಷಿಗೆ ಸೂಕ್ತವಾಗಿದೆ; ದಕ್ಷಿಣದ ಮೈದಾನ ಸಣ್ಣ ಬೆಟ್ಟಗಳು ಮತ್ತು ನಗರಗಳನ್ನು ಹೊಂದಿದೆ.

60 ಕರಾವಳಿ ಪ್ರದೇಶವು ಸಮುದ್ರದ ಬಳಿ ಇದೆ. ಜನರು ಮೀನುಗಾರಿಕೆ, ತೆಂಗಿನಕಾಯಿ ಬೆಳೆ ಮತ್ತು ಕಡಲತೀರ ಆನಂದಿಸುತ್ತಾರೆ.

58. ಮಲೆನಾಡಿನಲ್ಲಿ ಹೆಚ್ಚು ಮಳೆಯಾಗುತ್ತದೆ. ಇಲ್ಲಿ ಹಸಿರು ಕಾಡುಗಳಿದ್ದು ಕಾಫಿ ಮತ್ತು ಮೆಣಸು ಬೆಳೆಯಲಾಗುತ್ತದೆ.
59. ಉತ್ತರದ ಮೈದಾನ ಪ್ರದೇಶದಲ್ಲಿ ಜನರು ಜೋಳ ಮತ್ತು ಹತ್ತಿ ಬೆಳೆಸುತ್ತಾರೆ. ಅಲ್ಲದೇ ಗಣಿಗಾರಿಕೆಯನ್ನು ಕೂಡ ಮಾಡುತ್ತಾರೆ.
60. ದಕ್ಷಿಣದ ಮೈದಾನ ಪ್ರದೇಶದಲ್ಲಿ ಉತ್ತಮ ಮಣ್ಣು ಮತ್ತು ನದಿಗಳಿವೆ. ಜನರು ರಾಗಿ ಮತ್ತು ಕಬ್ಬು ಬೆಳೆಯುತ್ತಾರೆ ಮತ್ತು ನಗರಗಳಲ್ಲಿ ವಾಸಿಸುತ್ತಾರೆ.
61. ನದಿಗಳು ಕುಡಿಯುವ ನೀರಿಗೂ, ಕೃಷಿಗೂ, ವಿದ್ಯುತ್ ಉತ್ಪಾದನೆಗೂ ಸಹಕಾರಿಯಾಗುತ್ತವೆ.
62. ಹಂಪಿಯಲ್ಲಿರುವ ಹಳೆಯ ದೇವಾಲಯಗಳು ಮತ್ತು ಸುಂದರ ಶಿಲ್ಪಗಳು ವಿಜಯನಗರದ ಶ್ರೀಮಂತ ಇತಿಹಾಸವನ್ನು ತೋರಿಸುತ್ತವೆ.
63. ಜೋಗ ಜಲಪಾತ, ಹಂಪಿ ಮತ್ತು ನಂದಿ ಬೆಟ್ಟ ಪ್ರಸಿದ್ಧ ಸ್ಥಳಗಳಾಗಿವೆ. ಜನರು ಮೋಜು ಮತ್ತು ಅಧ್ಯಯನಕ್ಕಾಗಿ ಭೇಟಿ ನೀಡುತ್ತಾರೆ.
64. ಉತ್ತರದ ಮೈದಾನ ಪ್ರದೇಶದಲ್ಲಿ ಚದುರಿದ ಕಾಡುಗಳಿವೆ. ಅಲ್ಲಿ ಬೇವು ಮತ್ತು ಹುಣಸೆ ಮರಗಳು ಹೆಚ್ಚಾಗಿವೆ.
65. ಜನರು ಸ್ಥಳಗಳನ್ನು ಸ್ವಚ್ಛವಾಗಿ ಇಟ್ಟು, ಮರಗಳನ್ನು ನೆಟ್ಟು ಗೋಡೆಗಳ ಹಾನಿ ಮಾಡದೆ, ತ್ಯಾಜ್ಯವನ್ನು ಎಸೆಯದೆ ಪರಿಸರ ರಕ್ಷಿಸುತ್ತಾರೆ.

ನಾಲ್ಕು ಅಂಕದ ಉತ್ತರಗಳು

66. ಕರ್ನಾಟಕದಲ್ಲಿ ನಾಲ್ಕು ಪ್ರದೇಶಗಳಿವೆ – ಕರಾವಳಿ, ಮಲೆನಾಡು, ಉತ್ತರದ ಮೈದಾನ ಮತ್ತು ದಕ್ಷಿಣದ ಮೈದಾನ. ಕರಾವಳಿಯಲ್ಲಿ ಕಡಲತೀರ ಮತ್ತು ಮೀನುಗಾರಿಕೆ ಇದೆ. ಮಲೆನಾಡಿನಲ್ಲಿ ಬೆಟ್ಟಗಳು ಮತ್ತು ಕಾಫಿ ತೋಟಗಳಿವೆ. ಉತ್ತರದ ಮೈದಾನದಲ್ಲಿ ಹತ್ತಿ ಬೆಳೆಯಲಾಗುತ್ತದೆ, ದಕ್ಷಿಣದ ಮೈದಾನದಲ್ಲಿ ಬೆಂಗಳೂರಿನಂತಹ ನಗರಗಳನ್ನು ಹೊಂದಿದೆ.

67. ಐತಿಹಾಸಿಕ ಸ್ಥಳಗಳು ಕರ್ನಾಟಕದ ಹಳೆಯ ಅರಸರು ಮತ್ತು ಸಂಸ್ಕೃತಿಯನ್ನು ತೋರಿಸುತ್ತವೆ. ಹಂಪಿಯಂತಹ ಸ್ಥಳಗಳು ಶೌರ್ಯದ ಕಥೆಗಳನ್ನೂ ಸುಂದರ ಕಟ್ಟಡಗಳನ್ನೂ ವಿವರಿಸುತ್ತವೆ.

68. ನದಿಗಳು ಕೃಷಿಗೆ ನೀರನ್ನು ಒದಗಿಸುತ್ತವೆ. ಅವು ಕುಡಿಯುವ ನೀರಿಗೂ, ವಿದ್ಯುತ್ ಉತ್ಪಾದನೆಗೂ ಸಹಕಾರಿಯಾಗುತ್ತವೆ.

69. ಕರಾವಳಿಯಲ್ಲಿ ಜನರು ಮೀನುಗಾರಿಕೆ ಮಾಡುತ್ತಾರೆ. ಮಲೆನಾಡಿನಲ್ಲಿ ಅವರು ಕಾಫಿ ಬೆಳೆಸುತ್ತಾರೆ. ಉತ್ತರದ ಮೈದಾನದಲ್ಲಿ ಜೋಳ ಬೆಳೆಸುತ್ತಾರೆ, ದಕ್ಷಿಣದ ಪ್ರದೇಶಗಳಲ್ಲಿ ಸಕ್ಕರೆ ಕಬ್ಬು ಬೆಳೆಸುತ್ತಾರೆ.

70. ಜನರು ನಂದಿ ಬೆಟ್ಟದಂತಹ ಬೆಟ್ಟ ಪ್ರದೇಶಗಳಿಗೆ, ಜೋಗ ಜಲಪಾತದಂತಹ ಜಲಪಾತಗಳಿಗೆ, ಬಂಡೀಪುರದಂತಹ ಉದ್ಯಾನವನಗಳಿಗೆ ಭೇಟಿ ನೀಡುತ್ತಾರೆ. ಇವು ಸಂತೋಷವನ್ನು ಕೊಡುತ್ತವೆ ಮತ್ತು ಪ್ರಾಣಿಗಳಿಗೆ ಸುರಕ್ಷತೆ ನೀಡುತ್ತವೆ.

71. ಕರಾವಳಿ ಪ್ರದೇಶದಲ್ಲಿ ಹೆಚ್ಚು ಮಳೆಯು ಮತ್ತು ಹಸಿರು ಮರಗಳಿವೆ. ಉತ್ತರದ ಬಯಲು ಮೈದಾನ ಒಣ ಪ್ರದೇಶವಾಗಿದೆ ಮತ್ತು ಮರಗಳು ಕಡಿಮೆಯಿವೆ.

72. ವಿದ್ಯಾರ್ಥಿಗಳು ಸ್ಥಳಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬಹುದು, ಮರಗಳನ್ನು ನೆಡಬಹುದು, ಇತರರಿಗೆ ಪರಿಸರ ಸಂರಕ್ಷಣೆಯ ಬಗ್ಗೆ ತಿಳಿಸಬಹುದು, ನಿಯಮಗಳನ್ನು ಪಾಲಿಸಬಹುದು.

73. ಬೆಂಗಳೂರು ರಾಜ್ಯದ ರಾಜಧಾನಿಯಾಗಿದ್ದು ಅನೇಕ ಕಚೇರಿಗಳನ್ನು ಹೊಂದಿದೆ. ಮೈಸೂರು ದಸರಾ ಹಬ್ಬ ಮತ್ತು ಅರಮನೆಗಳಿಗಾಗಿ ಪ್ರಸಿದ್ಧವಾಗಿದೆ.

74. ಕರ್ನಾಟಕದಲ್ಲಿ ಆನೆಗಳು, ಹುಲಿಗಳು, ಜಿಂಕೆಗಳಿವೆ. ಅವುಗಳನ್ನು ರಕ್ಷಿಸಬೇಕು ಏಕೆಂದರೆ ಅವು ನಿಸರ್ಗದ ಭಾಗವಾಗಿವೆ.

75. ಮಲೆನಾಡಿನಲ್ಲಿ ಜನರು ಬೆಚ್ಚನೆಯ ದಪ್ಪವಾದ ಬಟ್ಟೆ ಧರಿಸುತ್ತಾರೆ ಮತ್ತು ಬಿಸಿ ಬಿಸಿ ಆಹಾರ ಸೇವಿಸುತ್ತಾರೆ. ಕರಾವಳಿ ಪ್ರದೇಶದಲ್ಲಿ ಅವರು ಮೀನು ತಿನ್ನುತ್ತಾರೆ. ನಗರಗಳಲ್ಲಿ ಜನರು ಕಚೇರಿಗಳಲ್ಲಿ ಕೆಲಸ ಮಾಡುತ್ತಾರೆ ಮತ್ತು ಆಧುನಿಕ ಬಟ್ಟೆ ಧರಿಸುತ್ತಾರೆ.